ಕಲ್ಯಾಣ ಕಿರಣ

ಅಕ್ಟೋಬರ್ - 2002　　　　ಬೆಲೆ : ರೂ. 5-00





ಧರ್ಮ ಪಿತ ಬಸವಣ್ಣನವರಿಗೆ ಪ್ರಾರ್ಥನೆ ಮಾಡುತ್ತಿರುವ ಶರಣೆ. ಪರಮಕಾ ನಾಗಪ್ಪನವರು

ಓಂ ಶ್ರೀ ಗುರು ಬಸವಲಿಂಗಾಯ ನಮಃ

86666

ಸಂಪುಟ 31 | ಬಸವ ಶಕೆ 869 | ಆಜೀವ ಸದಸ್ಯತ್ವ 500 ರೂ

ಸಂಚಿಕೆ - 10 | ಅಕ್ಟೋಬರ್ 2002 | ವಾರ್ಷಿಕ ಚಂದಾ 50/- ರೂ

ರಾಷ್ಟ್ರೀಯ ಬಸವ ದಳ-ಗಣಾಚಾರ ದಳದವರಿಗೆ ಪ್ರತಿಜ್ಞಾ ಗೀತೆ

ಬಸವ ಪಥಿಕರು ನಾವು ಎಂದೆಂದು ಒಂದು
ಎಲ್ಲ ಭೇದವ ಜರಿದು ನಡೆಯುವೆವು ಎಂದು ॥ ಪ ॥
ದೇವನೊಬ್ಬನೆ ಎಂದು ಸಾರಿ ನುಡಿಯುವೆವು
ದೇವಗುರು ಬಸವಣ್ಣ ಎಂದು ನಂಬುವೆವು
ವಚನ ಸಾಹಿತ್ಯವೇ ಧರ್ಮ ಸಂಹಿತೆ ಎಂದು
ಮರ್ತ್ಯಲೋಕದ ಮಹತಿ ಅರಿತು ಬಾಳುವೆವು ॥ 1 ॥
ಕಾಯಕವೇ ಕೈಲಾಸ ಎಂದು ದುಡಿಯುವೆವು
ರಾಷ್ಟ್ರದ ಅಭಿವೃದ್ಧಿಗಾಗಿ ಶ್ರಮಿಸುವೆವು
ದಾಸೋಹವೇ ದೇವಧಾಮ ಎಂದೆನುತ
ಗಳಿಸಿದ ಸಂಪದವ ಹಂಚಿ, ಉಣ್ಣುವೆವು ॥ 2 ॥
ರಕ್ತ ಸಂಬಂಧಕಿಂ ಭಕ್ತಿ ಸಂಬಂಧವು
ಶಕ್ತವಾದುದು ಎಂದು ನಾವು ನಂಬುವೆವು
ಭಕ್ತಿ ಮಾರ್ಗದಿ ನಡೆವ ಮನುಜರೆಲ್ಲರನು
ಧರ್ಮ ಬಂಧುಗಳೆಂದು ತಿಳಿದು ಆದರಿಸುವೆವು ॥ 3 ॥
ಕೂಡಲ ಸಂಗಮವು ಧರ್ಮಕ್ಷೇತ್ರವು ಎಂದು
ಶರಣ ಮೇಳಕೆ ಬಂದು ಹಾಡಿ ಪಾಡುವೆವು
ಗಣಲಿಂಗ ದರ್ಶನವ ಮಾಡಿ ಪುಳಕಿತರಾಗಿ
ಸಮುದಾಯ ಪ್ರಾರ್ಥನೆಯ ನಿಷ್ಠೆಯಿಂ ಮಾಡುವೆವು ॥ 4 ॥
ಬಸವ ಕಲ್ಯಾಣವು ಶರಣ ಭೂಮಿ ಎಂದು
ಕಾಯಕದ ದಿನದಂದು ಕಲ್ಯಾಣ ಪರ್ವಕೆ ಬಂದು
ಬಸವಾದಿ ಪ್ರಮಥರ ಪರಂಪರೆ ಶರಣರ
ಸ್ಮರಿಸಿ, ಸ್ತುತಿಸಿ ನಾವು ಧನ್ಯರಾಗುವೆವು ॥ 5 ॥
ಷಟ್ಕೋನ ಗಣಧ್ವಜವ ಹಿಗ್ಗಿನಿಂ ಹಾರಿಸುತ
ಷಟ್ ಸೂತ್ರಗಳ ಘೋಷ ಹರ್ಷದಿಂ ಗೈಯುವೆವು
ಲಿಂಗದೇವನ ಮಹಿಮೆ ನಿತ್ಯ ಹಾಡುವೆವು
ಸಚ್ಚಿದಾನಂದನ ಒಲುಮೆ ಪಡೆಯುವೆವು ॥ 6 ॥

- ಬಸವಾತ್ಮಜೆ

ಕಲ್ಯಾಣ ಕಿರಣ

ಸಂಪುಟ 31 | ಬಸವ ಶಕೆ 869 | ಆಜೀವ ಸದಸ್ಯತ್ವ 500 ರೂ

ಸಂಚಿಕೆ - 10 | ಅಕ್ಟೋಬರ್ 2002 | ವಾರ್ಷಿಕ ಚಂದಾ 50 ರೂ

ಕಿರಣಗನ್ನಡಿ

ಲೇಖನಗಳು	ಲೇಖಕರು	ಪುಟ
1. ಬಸವ ಪಥಿಕರು ನಾವು	ಮಾತಾಜಿ	3
2. ಬಸವ ಕಲ್ಯಾಣದಲ್ಲಿ ಬಸವ ತತ್ತ್ವ ತರಬೇತಿ ಕಮ್ಮಟ	-	5
3. ನಿರ್ಲಿಪ್ತ ಚೇತನ ಪೂಜ್ಯ ಶ್ರೀ ಅಲ್ಲಮ ಪ್ರಭು ಸ್ವಾಮೀಜಿ	ಮಾತೆ ಕಸ್ತೂರಿದೇವಿ	8
4. ಸಮಸ್ಯೆ ? ಸಮಾಧಾನ !	ಮಾತಾಜಿ	10
5. ಧರ್ಮದ ಆಶಾಕಿರಣ ಕಲ್ಯಾಣ ಕಿರಣ	ನಾಗಶೆಟ್ಟಿ ಶೆಟಗಾರ	28
6. ಬಸವ ಭಕ್ತರ ನವರಾತ್ರಿ ಆಚರಣೆ	ಮಾತಾಜಿ	29
7. ತುರುವೇಕೆರೆಯಲ್ಲಿ ಜಯಂತಿ ಮತ್ತು ವರ್ಧಂತಿ	ಮಹಾಂತೇಶ ರಾಜಗೋಳಿ	30
8. ಬೀದರದಲ್ಲಿ ಚನ್ನಬಸವೇಶ್ವರ ವಾಚನಾಲಯ	ಬಸವರಾಜ್ ಖೇಡಕರ	31
9. ನಾಗಪ್ಪನವರ ಬಿಡುಗಡೆ ಕುರಿತು ಮುಖ್ಯ ಮಂತ್ರಿಗಳಲ್ಲಿ ಮನವಿ	ಮಾತಾಜಿ	32
10. ಎಸ್.ಟಿ.ಎಫ್. ಮುಖ್ಯಸ್ಥರಾದ ಶ್ರೀ ಜ್ಯೋತಿ ಪ್ರಕಾಶ ಮಿರ್ಜಿ ಅವರಿಗೆ ಪತ್ರ	ಮಾತಾಜಿ	37
11. ವಿವಿಧ ಕಾರ್ಯಕ್ರಮಗಳ ಭಾವಚಿತ್ರಗಳು	-	39
12. ಶ್ರೀ ನಾಗಪ್ಪನವರ ಬಿಡುಗಡೆಗೆ ನೆರವಾಗಲು ಗ್ರಾಮಸ್ಥರಲ್ಲಿ ಮನವಿ	ಮಾತಾಜಿ	47
13. ಆಗಸ್ಟ್-ಸೆಪ್ಟಂಬರ್ ತಿಂಗಳಿನ ಧನ ದಾಸೋಹಿಗಳ ಪಟ್ಟಿ	-	49

ಬಸವ ಧರ್ಮ ವಿಜಯೋತ್ಸವ (ವಿಜಯ ದಶಮಿ) ದಂದು

41 ವರ್ಷಗಳನ್ನು ಪೂರೈಸಿ 42 ನೆಯ ವರ್ಷಕ್ಕೆ ಪಾದಾರ್ಪಣ ಮಾಡಲಿರುವ ಬಸವ ಕಲ್ಯಾಣದ ಅಲ್ಲಮ ಪ್ರಭು ಶೂನ್ಯ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮಿಗಳಿಗೆ ಹುಟ್ಟು ಹಬ್ಬದ ಶುಭಾಶಯಗಳು.

- ಕಲ್ಯಾಣ ಕಿರಣದ ಸಿಬ್ಬಂದಿ ವರ್ಗ

ಶಿಬಿರದ ಮುಂದೂಡಿಕೆ, ದಿನಾಂಕಗಳಲ್ಲಿ ಬದಲಾವಣೆ

ಬಸವ ಕಲ್ಯಾಣದ ಬಸವ ಮಹಾಮನೆಯಲ್ಲಿ ಅಕ್ಟೋಬರ್ 2 ರಿಂದ 15 ರವರೆಗೆ ಬಸವ ತತ್ತ್ವ ತರಬೇತಿ ಕಮ್ಮಟ ಏರ್ಪಡಿಸಲಾಗಿತ್ತು. ಅರ್ಧವಾರ್ಷಿಕ ಪರೀಕ್ಷೆ ಮತ್ತು ಶಾಲಾ ದಿನಗಳು ಅಕ್ಟೋಬರ್ 12 ರವರೆಗೂ ಇರುವುದರಿಂದಲೂ, ವೀರಪ್ಪನ್ ಕಪಿಮುಷ್ಟಿಯಿಂದ ಮಾಜಿ ಸಚಿವ ಶ್ರೀ ನಾಗಪ್ಪನವರ ಬಿಡುಗಡೆ ಸಲುವಾಗಿ ರಾಷ್ಟ್ರೀಯ ಬಸವ ದಳವು ಪ್ರಯತ್ನಿಸುತ್ತಿರುವುದರಿಂದಲೂ ಶಿಬಿರದ ದಿನಾಂಕಗಳಲ್ಲಿ ಬದಲಾವಣೆ ಮಾಡಲಾಗಿದೆ. ಅಕ್ಟೋಬರ್ 18 ರಿಂದ ನವೆಂಬರ್ 1 ರವರೆಗೆ ತರಬೇತಿ ಕಮ್ಮಟವು, ಸೆಪ್ಟೆಂಬರ್ 30 ಮತ್ತು ನವೆಂಬರ್ 1 ರಂದು ಭಕ್ತಿ ಪಕ್ಷ ಸಮ್ಮೇಳನವು ನಡೆಯಲಿದೆ.

KALYANA KIRANA- Reg. No. 19988/70. Monthly Magazine printed and published by B.Shambulingaiah, at Prabhudeva Printing Press, Basava Gangotri, Kumbalgodu, Bangalore-560074. Phone : 8437234

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ: ಬಸವ ಮಂಟಪ, 2035
20ನೆಯ ಮುಖ್ಯರಸ್ತೆ, ಎರಡನೆಯ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
ದೂರವಾಣಿ: 3325335/ 3322790

ಅಕ್ಷರ ಜೋಡಣೆ ಮತ್ತು ಪುಟ ವಿನ್ಯಾಸ : ಪ್ರಭುದೇವ ಪಿ.ಕೆ.

ಬಸವ ತತ್ತ್ವ ತರಬೇತಿ ಕಮ್ಮಟ

2002 ರ ಅಕ್ಟೋಬರ್ 18 ರಿಂದ ನವೆಂಬರ್ 1 ರವರೆಗೆ

ಮಡಿಕೆಯ ಮಾಡುವೊಡೆ ಮಣ್ಣೇ ಮೊದಲು
ತೊಡಿಗೆಯ ಮಾಡುವೊಡೆ ಹೊನ್ನೇ ಮೊದಲು
ಶಿವಪಥವರಿವೊಡೆ ಗುರುಪಥವೇ ಮೊದಲು
ನಮ್ಮ ಲಿಂಗದೇವರನರಿವೊಡೆ
ಶರಣರ ಸಂಗವೇ ಮೊದಲು. - ಬ.ವ.ದೀ. 68

ಬಸವ ಧರ್ಮ ಪೀಠ ಮತ್ತು ವಿಶ್ವಕಲ್ಯಾಣ ಮಿಷನ್‌ಗಳ ಸಂಯುಕ್ತ ಆಶ್ರಯದಲ್ಲಿ ಪ್ರತಿವರ್ಷವೂ ಬೇಸಿಗೆಯ ರಜಾ ಕಾಲದಲ್ಲಿ ಮತ್ತು ಅಕ್ಟೋಬರ್ ರಜೆಯ ಕಾಲದಲ್ಲಿ ಬಸವ ತತ್ತ್ವ ತರಬೇತಿ ಕಮ್ಮಟವನ್ನು ನಡೆಸಿಕೊಂಡು ಬರಲಾಗುತ್ತಿದೆಯಷ್ಟೆ. 2002 ನೆಯ ಸಾಲಿನ ತರಬೇತಿ ಕಮ್ಮಟವನ್ನು ಬಸವ ಕಲ್ಯಾಣದ ಬಸವ ಮಹಾಮನೆಯ ಆವರಣದ ಶರಣ ಶೈಲದ ಪರಿಸರದಲ್ಲಿ ನಡೆಸುವ ಕಾರ್ಯಕ್ರಮ ರೂಪಿಸಲಾಗಿದೆ. ಇದಕ್ಕಾಗಿ ತಾತ್ಕಾಲಿಕ ತಂಗುದಾಣಗಳನ್ನು ನಿರ್ಮಿಸಲಾಗುತ್ತಿದೆ. ಬೀದರ್, ಗುಲಬರ್ಗಾ ಜಿಲ್ಲೆಗಳವರಿಗೆ, ಮಹಾರಾಷ್ಟ್ರದ ಸೊಲ್ಲಾಪುರ, ಉದಗೀರ್, ಆಂಧ್ರ ಪ್ರದೇಶದ ಹೈದ್ರಾಬಾದ್, ಜಹಿರಾಬಾದ್ ಮುಂತಾದ ಪ್ರದೇಶಗಳ ಮುಮುಕ್ಷುಗಳಿಗೆ ಭಾಗಿಗಳಾಗಲು ಸದವಕಾಶ ಕಲ್ಪಿಸಿ ಕೊಟ್ಟಂತೆ ಆಗುತ್ತದೆ. ಇದಲ್ಲದೆ ಬಸವ ಕಲ್ಯಾಣದ ಪವಿತ್ರ ಶರಣ ಭೂಮಿಯಲ್ಲಿದ್ದು ಅನುಷ್ಠಾನ ಮಾಡುವ ಸದವಕಾಶ ಎಲ್ಲ ಜನರಿಗೆ ಲಭ್ಯವಾಗುತ್ತದೆ. ತರಬೇತಿ ಕಮ್ಮಟಗಳಲ್ಲಿ ಪ್ರಾಯೋಗಿಕ ಶಿಕ್ಷಣವು ದೊರೆಯುವುದಲ್ಲದೆ ತಮ್ಮ ಸಂದೇಹಗಳಿಗೆ ಸೂಕ್ತ ಪರಿಹಾರ ಪಡೆಮುಕೊಳ್ಳಲು ಅನುಕೂಲವಾಗುತ್ತದೆ.

1. ದಿನ ನಿತ್ಯ ಸಂಜೆ ಒಂದೊಂದು ವಿಷಯದ ಮೇಲೆ ಪ್ರವಚನ
2. ಸುಪ್ರಭಾತದಲ್ಲಿ ಯೋಗಾಸನ, ಪ್ರಾಣಾಯಾಮ, ಧ್ಯಾನ, ಸಾಮೂಹಿಕ ಇಷ್ಟಲಿಂಗಾರ್ಚನೆ ಮತ್ತು ತ್ರಾಟಕಯೋಗ.
3. ವಚನ ಚಿಂತನೆ, ವಿಶ್ಲೇಷಣೆ, ವಚನ ಲೇಖನ ಮುಂತಾದವುಗಳ ಅಭ್ಯಾಸ ಜರುಗುತ್ತದೆ.
4. ಸಂಜೆಯ ವೇಳೆ ವಯೋಭೇದವಿಲ್ಲದೆ ಆಟೋಟಗಳಿರುತ್ತವೆ.
5. ರಾತ್ರಿ 9 ರಿಂದ ರಸ ಪ್ರಶ್ನೆ, ಸಾಂಸ್ಕೃತಿಕ ಕಾರ್ಯಕ್ರಮ
6. ಆರೋಗ್ಯ ಭಾಗ್ಯ ಕುರಿತು ಉಪನ್ಯಾಸ, ನಿಸರ್ಗೋಪಚಾರ ಕುರಿತು ಮಾಹಿತಿ, ಆರೋಗ್ಯಕರ ಅಡಿಗೆಯ ಮಾಹಿತಿ.
7. ಗೃಹ ಪ್ರವೇಶ, ವಿವಾಹ ವಿಧಿ, ಲಿಂಗಧಾರಣೆ, ನಾಮಕರಣ, ಶವ ಸಂಸ್ಕಾರ ಮುಂತಾದ ವಿಧಿ-ವಿಧಾನಗಳನ್ನು ನೆರವೇರಿಸುವ ಬಗ್ಗೆ ತರಬೇತಿ ನೀಡಲಾಗುವುದಲ್ಲದೆ ಕ್ರಿಯಾ ಮೂರ್ತಿ ದೀಕ್ಷೆಯನ್ನು ಸಹ ನೀಡಿ ತರಬೇತಿ ಹೊಂದಿದವರಗೆ ಮಾನ್ಯತಾ ಪತ್ರ (Certificate) ಕೊಡಲಾಗುವುದು.

ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿ ಹಾಗೂ ಮಾರ್ಗದರ್ಶನದಲ್ಲಿ ನಡೆಯುವ ಈ ತರಬೇತಿ ಕಮ್ಮಟದಲ್ಲಿ ಅಲ್ಲಮಪ್ರಭು ಶೂನ್ಯ ಪೀಠಾಧೀಶರಾದ ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳು, ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮಿಗಳು, ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳು, ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳು, ಶರಣ. ಶಿವಕುಮಾರ ಡಾಕುಳಗೆ, ಶರಣ. ವೀರಣ್ಣ ಕೊರ್ಲಪ್ಪಳ್ಳಿ ಮುಂತಾದವರು ಭಾಗವಹಿಸಿ ತರಬೇತಿ ನೀಡಲಿರುವರು.

ಶಿಬಿರ ಶುಲ್ಕ ವಿವರ

ದಿ. 18-10-2002 ರಿಂದ 1-11-2002 ರವರೆಗೆ 15 ದಿವಸಗಳ ಕಾಲ ನಡೆಯುವ ಶಿಬಿರದ ಶುಲ್ಕ ಒಬ್ಬರಿಗೆ 450 ರೂ. ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆರಿಯಾಯಿತಿಯೊಡನೆ 300 ರೂಗಳು. ವಿದ್ಯಾರ್ಥಿಗಳಲ್ಲದಿದ್ದರೂ ಆಸಕ್ತರಾದ ಬಡವರಿಗೆ ಸಹ ರಿಯಾಯಿತಿಯೊಡನೆ 300 ರೂಗಳು.

<u>ಪರವಾನಗಿಯೊಡನೆ ಉಚಿತ ಅವಕಾಶ :</u> ಆರ್ಥಿಕವಾಗಿ ಬಹಳ ಹಿಂದುಳಿದಿದ್ದು ಧರ್ಮಪ್ರಚಾರ ಮತ್ತು ಸಂಘಟನೆ ಮಾಡುವ ಕಳಕಳಿಯುಳ್ಳವರು ಶಿಬಿರ ಶುಲ್ಕವನ್ನು ಕಟ್ಟಲು ಅಸಮರ್ಥರಾಗಿದ್ದರೆ ಅವರು ಮೊದಲೇ ಪತ್ರ ಬರೆದು ಉಚಿತವಾಗಿ ಭಾಗವಹಿಸಲು ಪರವಾನಗಿ ಪಡೆದುಕೊಳ್ಳಲು ಅವಕಾಶವಿದೆ. ಅಂಥವರು ಕೆಳಗೆ ಕೊಟ್ಟಿರುವ ವಿಳಾಸಗಳಿಗೆ ಪತ್ರ ಬರೆಯಬೇಕು. ರಾಷ್ಟ್ರೀಯ ಬಸವ ದಳದವರು ಆಸಕ್ತರಾದ ಶಿಬಿರಾರ್ಥಿಗಳು ಬಡವರಿದ್ದರೆ ಅವರ ಗಾಡಿ ಖರ್ಚು, ಶಿಬಿರ ಶುಲ್ಕ ಭರಿಸಿ ತರಬೇತಿಗೆ ಒಳ್ಳೆಯ ಕಾರ್ಯಕರ್ತರನ್ನು ಆಯ್ಕೆಮಾಡಿ ಕಳಿಸಬೇಕು.

1. ಶಿಬಿರಾರ್ಥಿಗಳು ಅಕ್ಟೋಬರ್ 17 ರ ಸಂಜೆಯೊಳಗೆ ಅಥವಾ 18 ನೇ ತಾರೀಖು ಬೆಳಿಗ್ಗೆ 10 ಗಂಟೆಯೊಳಗೆ ಬಂದು ತಲುಪಬೇಕು.
2. ತಮ್ಮೊಡನೆ ಉಡುವ ಬಟ್ಟೆಗಳು, ಹಾಸುವ ಹಾಸಿಗೆ, ಹೊದ್ದಿಕೆ, ಸೊಳ್ಳೆಯ ಪರದೆ, ಊಟದ ತಟ್ಟೆ-ಲೋಟ, ಇಷ್ಟಲಿಂಗ ಪೂಜೆಯ ಸಾಮಗ್ರಿ, ಟಿಪ್ಪಣಿ ಬರೆದುಕೊಳ್ಳಲು ಪುಸ್ತಕ, ಪೆನ್ನು ತಂದಿರಬೇಕು.

ದಾನಿಗಳು ಮತ್ತು ರಾಷ್ಟ್ರೀಯ ಬಸವ ದಳಗಳವರಲ್ಲಿ ಕೋರಿಕೆ

ಬಸವ ಕಲ್ಯಾಣದ ಬಸವ ಮಹಾಮನೆ ಆವರಣದಲ್ಲಿ ಇನ್ನೂ ಕಾಯಂ ವಸತಿ ಗೃಹ ಆಗಿಲ್ಲದೆ ಇರುವುದರಿಂದ ತಾತ್ಕಾಲಿಕವಾದ ತಂಗುದಾಣಗಳನ್ನು ನಿರ್ಮಿಸಬೇಕಾಗುತ್ತದೆ. ಇನ್ನೂ ಮಳೆಗಾಲ ಇರುವುದರಿಂದ ತಗಡಿನ ಶೆಡ್ ಹಾಕಿಸಬೇಕಾಗುತ್ತದೆ. ಬೆಂಗಳೂರಿನ ಬಸವ ಗಂಗೋತ್ರಿಯಲ್ಲಿ ಸಾಕಷ್ಟು ಕಟ್ಟಡಗಳಿವೆ, ಮೇಲಾಗಿ ಧಾರ್ಮಿಕ ಕಾರ್ಯಕ್ರಮಕ್ಕೆ ಅನೇಕ ದಾನಿಗಳು ಧನ ಸಹಾಯ ಮಾಡುವುದೇ ಅಲ್ಲದೆ ತರಕಾರಿ, ದವಸ-ಧಾನ್ಯಗಳನ್ನು ಉಚಿತವಾಗಿ ಕೊಡುವರು. ಆದರೆ ಬೀದರ್-ಗುಲಬರ್ಗಾ-ಹೈದರಾಬಾದ್, ಉದ್ಗೀರ್ ಜನರು ಬಸವ ಕಲ್ಯಾಣದಲ್ಲಿ ಶಿಬಿರ ನಡೆಸಬೇಕೆಂದು ಆಗ್ರಹ ಪೂರ್ವಕವಾಗಿ ಒತ್ತಾಯಿಸುತ್ತಿದ್ದಾರೆ. ಆದ್ದರಿಂದ ದಾನಿಗಳು ಉದಾರವಾದ ಕಾಣಿಕೆಯನ್ನು ಧನ ರೂಪದಲ್ಲಿ, ವಸ್ತುಗಳ ರೂಪದಲ್ಲಿ ಕೊಡುವ ಔದಾರ್ಯ ತೋರಬೇಕು. ಈಗಾಗಲೇ ನಮ್ಮ ಅನುಭವದಂತೆ ಆರ್ಥಿಕವಾಗಿ ದುರ್ಬಲರಾಗಿರುವ ಯುವಕ-ಯುವತಿಯರು ಧರ್ಮ ಪ್ರಚಾರ, ಸಮಾಜ ಸಂಘಟನೆ ಮಾಡುವ ಹಂಬಲದಿಂದ ದುಡಿಯಲು ಉತ್ಸುಕರಾಗಿ ಶಿಬಿರಗಳಲ್ಲಿ ಉಚಿತವಾಗಿ ಭಾಗವಹಿಸುವ ಅಪೇಕ್ಷೆಯನ್ನು ವ್ಯಕ್ತಪಡಿಸುತ್ತಾರೆ. ಅಂಥವರಿಗೆ ಪ್ರವೇಶ ನಿರಾಕರಿಸಲು ನಮಗೆ ಮನಸ್ಸು ಬರದು. ಆದ್ದರಿಂದ ವಿವಿಧ ರಾಷ್ಟ್ರೀಯ ಬಸವ ದಳಗಳವರು ಹಣವನ್ನು, ದವಸ - ಧಾನ್ಯವನ್ನು ಸಂಗ್ರಹಿಸಿ ಕೊಡುವ ಪ್ರಯತ್ನ ಮಾಡಬೇಕು.

ಬೆಳಿಗ್ಗೆ ಉಪಾಹಾರ, ಮಧ್ಯಾಹ್ನ ಪ್ರಸಾದ (ಊಟ), ಸಂಜೆ ಚಹಾ - ಕಷಾಯ, ರಾತ್ರಿ ಊಟ - ಹೀಗೆ ಕೊಡಲಾಗುವುದು. ಒಬ್ಬೊಬ್ಬ ದಾನಿಗಳು ಒಂದು ಹೊತ್ತಿನ ಪ್ರಸಾದ ಸಿದ್ಧಪಡಿಸಲೂ ಕಾಣಿಕೆ ನೀಡಬಹುದು. ಸದ್ಯ ಆರ್ಥಿಕವಾಗಿ ನಮಗೆ ಬಹಳ ಸಂಕಷ್ಟವಿರುವುದಾದರೂ ತರಬೇತಿ ತೀರಾ ಅಗತ್ಯವಿದೆ ಎಂಬ ಕಾರಣಕ್ಕೆ ನಾವು ಕಮ್ಮಟವನ್ನು ಹಮ್ಮಿಕೊಳ್ಳುತ್ತಿದ್ದೇವೆ. ಆದ ಕಾರಣ ಶರಣ ಬಂಧುಗಳು ಸಹಕರಿಸಬೇಕು.

ಭಕ್ತಿ ಪಕ್ಷ ಸಮ್ಮೇಳನ

ದಿ. 31-10-2002 ಮತ್ತು 1-11-2002

ಕಾಗೆಯೊಂದಗುಳ ಕಂಡರೆ ಕೂಗಿ ಕರೆಯದೆ ತನ್ನ ಬಳಗವೆಲ್ಲವನು ?
ಕೋಳಿಯೊಂದು ಕುಟುಕು ಕಂಡರೆ ಕರೆಯದೆ ತನ್ನ ಕುಲವನೆಲ್ಲವನು ?
ಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ
ಆ ಕಾಗೆ ಕೋಳಿಗಳಿಗಿಂತ ಕರಕಷ್ಟ ಕಾಣಾ ಲಿಂಗದೇವ । - ಬ.ವ.ದೀ. ೪೩೩

ಎಂಬ ಧರ್ಮಪಿತರ ಆದೇಶದಂತೆ ಭಕ್ತನಿಗೆ ಭಕ್ತಿಪಕ್ಷ ಬೇಕು. ತರಬೇತಿ ಕಮ್ಮಟದ ಕಡೆಯ ಎರಡು ದಿನ ದಿ. 31-10-2002 ಮತ್ತು 1-11-2002 ರಂದು ಭಕ್ತಿಪಕ್ಷ ಸಮ್ಮೇಳನವು ಜರುಗುತ್ತದೆ. ಪ್ರತಿನಿಧಿ ಶುಲ್ಕ ಒಬ್ಬರಿಗೆ 100 ರೂ (ಒಂದು ನೂರು ರೂಪಾಯಿ). ಆರ್ಥಿಕ ತೊಂದರೆ ಇರುವವರಿಗೆ ಉಚಿತ ಪ್ರವೇಶ ಲಭ್ಯವಿದೆ. ದಿ. 31-10-2002 ರಂದು ಬೆಳಿಗ್ಗೆ 10-30 ಕ್ಕೆ ಸಮಾವೇಶ ಪ್ರಾರಂಭವಾಗಿ 10-30 ರಿಂದ 2, ಮಧ್ಯಾಹ್ನ 4 ರಿಂದ 6-30, ಸಂಜೆ 7 ರಿಂದ 9 ರವರೆಗೆ ಮೂರು ಸಭೆ ನಡೆಯುತ್ತವೆ. ದಿ. 1-11-2002 ರಂದು ಬೆಳಿಗ್ಗೆ 10-30 ರಿಂದ ಸಮಾರೋಪ ಕಾರ್ಯಕ್ರಮ ಆರಂಭವಾಗಿ ಮಧ್ಯಾಹ್ನ 3 ಗಂಟೆಗೆ ಮುಕ್ತಾಯವಾಗುತ್ತದೆ. ನಂತರ ಶಿಬಿರಾರ್ಥಿಗಳು, ಸಮ್ಮೇಳನದ ಪ್ರತಿನಿಧಿಗಳು ತಮ್ಮ ತಮ್ಮ ಊರಿಗೆ ಹೊರಡಲು ಅನುಮತಿಯುಂಟು.

<u>ವಿಶೇಷ ವಿವರಗಳು :</u> 1. ಈ ಮೊದಲು ಅಕ್ಟೋಬರ್ 2 ರಿಂದ ಅಕ್ಟೋಬರ್ 15 ರವರೆಗೆ ತರಬೇತಿ ಕಮ್ಮಟ ಎಂದು ತಿಳಿಸಲಾಗಿತ್ತು. ಆದರೆ ಶಾಲಾ ರಜಾ ದಿನ ಮತ್ತು ಅರ್ಧ ವಾರ್ಷಿಕ ಪರೀಕ್ಷೆಗಳ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಿಗೆ ಪಾಲಕರಿಗೆ ಮತ್ತು ಶಿಕ್ಷಕರಿಗೆ ಅನುಕೂಲವಾಗಲೆಂದು ಅಕ್ಟೋಬರ್ 18 ರಿಂದ ಏರ್ಪಡಿಸಲಾಗಿದೆ. ಈ ಬದಲಾವಣೆ ಗಮನಿಸುವುದೇ ಅಲ್ಲದೆ ಇತರರಿಗೂ ಪ್ರಚಾರ ಮಾಡಬೇಕು.

2. ಮಕ್ಕಳಿಗೂ ತರಬೇತಿಯ ಅಗತ್ಯವಿರುವುದರಿಂದ ಅವರಿಗಾಗಿ ಪ್ರತ್ಯೇಕವಾಗಿ ತರಬೇತಿ ಏರ್ಪಡಿಸಲಾಗಿದೆ. ಚಿಕ್ಕ ಮಕ್ಕಳಿರುವ ತಾಯಂದಿರು ಮಕ್ಕಳ ಸಲುವಾಗಿ ಮನೆಯಲ್ಲಿ ಉಳಿಯಬೇಕಾಗಿಲ್ಲ. ಈ ಸಲ ಮಕ್ಕಳಿಗೆ ಆಟದ ಸಾಮಗ್ರಿಗಳ ಜೊತೆಗೆ ವಚನ, ಹಾಡು ಮುಂತಾಗಿ ಕಲಿಸಲು ವ್ಯವಸ್ಥೆ ಮಾಡಲಾಗಿದೆ.

3. ಯುವ ವಯಸ್ಸಿನವರಿಗೆ ವಿಶೇಷವಾದ ಶಾರೀರಿಕ ಶಿಕ್ಷಣವಿದೆ. ಆದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಯುವಕರು, ಯುವತಿಯರು ಭಾಗವಹಿಸಬೇಕೆಂದು ತರಬೇತಿಯ ಪಠ್ಯಕ್ರಮ ರೂಪಿಸಲಾಗಿದೆ. ಆದ್ದರಿಂದ ಹೆಚ್ಚಿನ ಜನರು ಶಿಬಿರದ ಸದುಪಯೋಗ ಮಾಡಿಕೊಳ್ಳಬೇಕೆಂದು ಕೋರುತ್ತೇವೆ.

ಬೀದರ್ ಜಿಲ್ಲೆಯ ಬಸವ ಕಲ್ಯಾಣಕ್ಕೆ ರಾಜಧಾನಿ ಬೆಂಗಳೂರಿನಿಂದ ಮತ್ತು ವಿವಿಧ ಸ್ಥಳಗಳಿಂದ ನೇರ ಬಸ್ಸುಗಳಿವೆ. ಗುಲಬರ್ಗಾವರೆಗೆ ಟ್ರೇನಿನಲ್ಲಿ ಬಂದು ಅಲ್ಲಿಂದ ಬಸವ ಕಲ್ಯಾಣಕ್ಕೆ ಬರುವುದು ಅನುಕೂಲಕರ. ಒಂದು ಟ್ರೇನ್ - ಲಿಂಕ್ ಎಕ್ಸ್‌ಪ್ರೆಸ್ ಭಾಲ್ಕಿವರೆಗೆ ಬರುತ್ತದೆ. ಅಲ್ಲಿಂದ ಬಸವ ಕಲ್ಯಾಣ ಕೇವಲ 35 ಕಿಲೋಮೀಟರ್. ಹುಮನಾಬಾದ್ ರಾಷ್ಟ್ರೀಯ ಹೆದ್ದಾರಿ 9 ರ ಮೇಲಿದ್ದು ಅಲ್ಲಿಂದ ಬಸವ ಕಲ್ಯಾಣಕ್ಕೆ ಸಾಕಷ್ಟು ವಾಹನ ಸೌಕರ್ಯವಿದೆ. ಶಿಬಿರ ಶುಲ್ಕವನ್ನು ಡಿ.ಡಿ/ಎಂ.ಓ ಮೂಲಕ ಈ ಎರಡರಲ್ಲಿ ಒಂದು ವಿಳಾಸಕ್ಕೆ ಕಳಿಸಬಹುದು.

ವ್ಯವಹರಿಸುವ ವಿಳಾಸಗಳು

ಬಸವ ಧರ್ಮ ಪೀಠ (ರಿ)
ಬಸವ ಮಂಟಪ
2035, 2ನೇ ಬ್ಲಾಕ್, 20ನೇ ಮೇನ್
ರಾಜಾಜಿನಗರ, ಬೆಂಗಳೂರು-560010

ಬಸವ ಧರ್ಮ ಪೀಠ (ರಿ)
ಬಸವ ಮಹಾಮನೆ
ಮುಖ್ಯ ರಸ್ತೆ, ಬಸವ ಕಲ್ಯಾಣ
ತಾ-ಬಸವ ಕಲ್ಯಾಣ, ಜಿಲ್ಲೆ-ಬೀದರ್

ನಿರ್ಲಿಪ್ತ ಚೇತನ ಪೂಜ್ಯ ಶ್ರೀ ಅಲ್ಲಮ ಪ್ರಭು ಸ್ವಾಮೀಜಿ

- ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ

★ ನೀನೊಲಿದರೆ ಸಕಲ ಪಡಿಪದಾರ್ಥಗಳು ಇದಿರಲಿರ್ಪವು ಲಿಂಗದೇವಾ. - ವಿಶ್ವಗುರು ಬಸವಣ್ಣನವರು.

★ ನೀನೊಲಿದಡೆ ಏನುಂಟು ಏನಿಲ್ಲವಯ್ಯ ಅಖಂಡೇಶ್ವರಾ - ಷಣ್ಮುಖ ಸ್ವಾಮಿಗಳು.

★ ನಿನ್ನದೆನ್ನುವದನ್ನೆಲ್ಲ ದೇವರಿಗೆ ಅರ್ಪಿಸಿಬಿಡು. ಮತ್ತೆ ಅವೆಲ್ಲ ನೂರ್ಮಡಿಯಾಗಿ ನಿನಗೆ ತಿರುಗಿ ಬರುವುವು. - ರಾಮಕೃಷ್ಣ ಪರಮಹಂಸರು.

★ ನಿನ್ನ ಪಾಡಿಗೆ ನೀನು ಸುಮ್ಮನಿರು. ನಿನ್ನಲ್ಲಿ ನಿಜವಾದ ಶಕ್ತಿ ಮತ್ತು ಯೋಗ್ಯತೆ ಇದ್ದರೆ ಗುರುವೇ ಮುಂದೆ ಕರೆದೊಯ್ಯುತ್ತಾನೆ. - ಅರವಿಂದಾಶ್ರಮದ ಶ್ರೀಮಾತೆ

ಮೇಲ್ಕಂಡ ದಾರ್ಶನಿಕ ಮಾತುಗಳು ನನಗೆ ಅರ್ಥವಾಗಿದ್ದು, ಅನುಭವ ಬಂದಿದ್ದು ಯಾವಾಗ ಗೊತ್ತೆ?! ಸುಜ್ಞಾನ, ಸಹಜ ಸಜ್ಜನಿಕೆ, ಗಾಂಭೀರ್ಯದ ವೈರಾಗ್ಯ, ನಿರ್ಲಿಪ್ತತೆ ಮತ್ತು ಕ್ರಿಯಾಶೀಲತೆಗಳ ದಿವ್ಯ ಸಂಗಮ-ಸಾಕಾರ ಮೂರ್ತಿ ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮೀಜಿಯವರನ್ನು ದರ್ಶಿಸಿದ ನಂತರ.

ಧರ್ಮ-ಅಧ್ಯಾತ್ಮ ಜಗತ್ತಿನ ಕಾರ್ಗತ್ತಲಲ್ಲಿ ಅಡಗಿದ್ದ, ಲಿಂಗಾಯತ ಸಮಾಜದ ಬೃಹತ್‌ಗರ್ಭದಲ್ಲಿ ಹುದುಗಿದ್ದ ಇಂಥ ಒಂದು ಶ್ರೇಷ್ಠವಾದ ಸಿದ್ಧಶಿಲ್ಪವನ್ನು ಗುರುತಿಸಿ, ಹೊರತೆಗೆದಿದ್ದು ಯಾರು ಗೊತ್ತೆ?! ಅವರೇ ತಮ್ಮ ಜ್ಞಾನನೇತ್ರದಿಂದ ತ್ಯಾಗಿಗಳನ್ನು ಪತ್ತೆಹಚ್ಚುವಲ್ಲಿ ಸಿದ್ಧಹಸ್ತರಾಗಿದ್ದ ಕೂಡಲಸಂಗಮದ ಬಸವ ಧರ್ಮ ಪೀಠದ ಪ್ರಥಮಾಧ್ಯಕ್ಷ ಲಿಂಗೈಕ್ಯ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಅಪ್ಪಾಜಿಯವರು. ಹೀಗೆ ಗುರುತಿಸಲ್ಪಟ್ಟ ಶ್ರೇಷ್ಠ ಶಿಲ್ಪವನ್ನು ಅದಕ್ಕೆ ಜಂಗಮ ದೀಕ್ಷೆ ಎಂಬ ಅಂತಿಮ ಸ್ಪರ್ಶ (Final touch) ಕೊಟ್ಟು ದಿನಾಂಕ 3-5-2002 ರಂದು ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ ಸ್ಥಾಪಿಸಲಾದ ಬಸವಾದಿ ಪರಂಪರೆಯ ಶೂನ್ಯಪೀಠ ಎಂಬ ಸೂಕ್ತಜಾಗದಲ್ಲಿ ಪ್ರತಿಷ್ಠಾಪಿಸಿ, ಬೆಳಕಿಗೆ ತಂದಿದ್ದು ನಮ್ಮೆಲ್ಲರ ನೆಚ್ಚಿನ ಗುರುಮಾತೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ ತಾಯಿಯವರು.

ಬಸವ ಧರ್ಮದ ಇತಿಹಾಸದಲ್ಲಿ ಸಮಾಜದ ಒಳ-ಹೊರಗಿನ ಸ್ವಾಸ್ಥ್ಯಕ್ಕಾಗಿ ಜ್ಞಾನಕ್ರಿಯೆಗಳಿಂದ ಕೂಡಿದ ಸ್ಥಿರ-ಚರ ಎಂಬ ಎರಡು ಜಂಗಮವಾಹಿನಿಗಳು ಸಾಗಿ ಬಂದಿದ್ದು ಮಹತ್ವಪೂರ್ಣವಾದುದಾಗಿದೆ. ಕಾಲಾನಂತರದಲ್ಲಿ ಮತೀಯ ಜಾತಿವಾದಿಗಳಿಂದ ಬತ್ತಿಹೋಗಿದ್ದ ಈ ವಾಹಿನಿಗಳಿಗೆ ಮತ್ತೆ ಜೀವ ತುಂಬಿ, ಪುನರುತ್ಥಾನ ಮಾಡಿ, ಬಸವ ತತ್ತ್ವಗಳ ಸರ್ವಾಂಗೀಣ ಪ್ರಗತಿಗಾಗಿ ಪ್ರಾಮಾಣಿಕವಾಗಿ ಅನುಷ್ಠಾನ ಮಾಡಲು ಪ್ರಯತ್ನಿಸಿದ್ದು ಬೆಂಗಳೂರಿನ ವಿಶ್ವಕಲ್ಯಾಣ ಮಿಶನ್. ಈ ಸಂಸ್ಥೆಯ ಆಶ್ರಯದಲ್ಲಿ ತಮ್ಮ ಬಾಳಿನ ಗುರಿಯನ್ನು ಕಂಡುಕೊಳ್ಳಲೆಂದು ಧಾವಿಸಿ ಬಂದ ಜಿಜ್ಞಾಸುಗಳು, ಮುಮುಕ್ಷುಗಳು, ಸಾಧಕರಲ್ಲಿ ಕೆಲವರು ಮುಗ್ಗರಿಸಿದರು. ಬೆರಳೆಣಿಕೆಯಷ್ಟು ಮಂದಿ ಸರಿ ತಪ್ಪುಗಳ ಹಾದಿಯಲ್ಲಿ ಗುರುವಿನ ಮಾರ್ಗದರ್ಶನ ಪಡೆದು, ತಮ್ಮನ್ನು ತಾವು ತಿದ್ದಿಕೊಂಡು ಹಂತಹಂತವಾಗಿ ಮೇಲೇರಿದರು. ಮತ್ತೆ ಕೆಲವರು ಆರಕ್ಕೆ ಏರದೆ ಮೂರಕ್ಕೆ ಇಳಿಯದೆ ತಟಸ್ಥರಾಗಿ ನಿಂತರು. ಇನ್ನು ಕೆಲವರು ಅತಿಯಾದ ಆತ್ಮಬಲದಿಂದ ಬೆಟ್ಟ ಹತ್ತಲು ಹೋಗಿ ಜಾರಿದವರು. ಅಲ್ಲದೆ ಸ್ವಾರ್ಥ, ಸಂಕುಚಿತ ಮನೋಭಾವದಿಂದ ಮುಂದಿನ ದಾರಿ ಕಾಣದೆ ದೂರ ಸರಿದವರು. ಹೀಗೆ ಹಲವಾರು ಮಂದಿ ಬಂದು ಹೋಗಿದ್ದಾರೆ. ಆದರೆ ದೇವನ ಕರುಣೆಯನ್ನು ತನ್ನ ಹೃದಯದಲ್ಲಿ ಬಚ್ಚಿಟ್ಟುಕೊಂಡು ಬಂದ ಈ ಬಸವದೂತನ ಪರಿ ಹೀಗಲ್ಲ. ಅವರ ಅದೃಷ್ಟವೇ ಬೇರೆ. ಬಯಸದೇ ಬಂದಿದ್ದು ಲಿಂಗಪ್ರಸಾದ ಎಂದುಕೊಂಡು ಗುರು ತೋರಿದ ದಾರಿಯಲ್ಲಿ ಭಕ್ತಿ-ನಿಷ್ಠೆ-ಶ್ರದ್ಧೆಯಿಂದ ಸಾಗುತ್ತ ಗುರುವರ್ಗ, ಭಕ್ತವರ್ಗ ಹಾಗೂ ಸಾಧಕವರ್ಗದವರಿಂದ ಅಲ್ಪ ಕಾಲಾವಧಿಯಲ್ಲಿಯೆ ಮೆಚ್ಚುಗೆ-ಗೌರವ ಪಡೆದಿದ್ದು ಸಾಮಾನ್ಯ ಸಂಗತಿಯಲ್ಲ.

ಸ್ಥಿರ-ಚರ ಜಂಗಮರ ಕರ್ತವ್ಯಗಳನ್ನು ಏಕಕಾಲದಲ್ಲಿ ಸಮರ್ಥವಾಗಿ ನಿರ್ವಹಿಸುತ್ತಿರುವ ಪೂಜ್ಯರ ಅಚ್ಚುಮೆಚ್ಚಿನ ಕಾಯಕ ಪ್ರವಚನ, ಸ್ವಾಧ್ಯಾಯ, ಸುಜ್ಞಾನ, ಸಚ್ಚಿಂತನೆ, ಸ್ಮರಣೆಯಿಂದ ಕೂಡಿದ ಇವರ

ಪ್ರವಚನದ ಶೈಲಿಯೂ ಅಮೋಘವಾದುದು-ವೈಶಿಷ್ಟ್ಯಪೂರ್ಣವಾದುದು. ಏಕೆಂದರೆ ತಮಗೆ ಸಾಧ್ಯವಾದ ಎಲ್ಲವನ್ನು ಓದಿ ತಮ್ಮ ದರ್ಶನವನ್ನು ತಾವೇ ಕಂಡುಕೊಂಡು ಮುಕ್ತಿ ಪಡೆಯಬೇಕು ಎಂಬ ಏಕಪಕ್ಷೀಯವಾದ ಮಾತಿನಲ್ಲಿ ಪೂಜ್ಯರಿಗೆ ನಂಬಿಕೆಯಿಲ್ಲ. ಆದ್ದರಿಂದಲೇ ತಾವು ಕಂಡುಕೊಂಡ ಸತ್ಯವನ್ನು ಪ್ರವಚನದ ಮೂಲಕ ಎಲ್ಲರಿಗೂ ಹಂಚುತ್ತಾರೆ.

ಶಬ್ದ ಪ್ರಧಾನವಾದ ವೇದಾಂತದ ಅಂತರಂಗವನ್ನು ಹೊಕ್ಕು ನೋಡಿದ ಪೂಜ್ಯರು ನಮಗೂ ಅದರ ದರ್ಶನವನ್ನು ಮಾಡಿಸುತ್ತಾರೆ. ಶಾಸ್ತ್ರ ವಾಕ್ಯಗಳ ಹಿಂದಿರುವ ಮೂಢತ್ವವನ್ನು ತಮ್ಮ ವಾಕ್ಚಾತುರ್ಯದಿಂದ ಹೊರಗೆಡಹುತ್ತಾರೆ. ಉಪನಿಷತ್ತುಗಳಲ್ಲಿರುವ ಅಂತಃಸತ್ವವನ್ನು ಮನಗಾಣಿಸುತ್ತಾರೆ. ವೇದ ಶಾಸ್ತ್ರ ಉಪನಿಷತ್‌ಗಳೆಂಬ ದುರ್ಗಮ ಅರಣ್ಯಗಳಲ್ಲಿ ಸಂಚರಿಸುವಾಗ ನಮ್ಮ ಬುದ್ಧಿ ಮನಸ್ಸುಗಳಿಗೆ ದಣಿವಾಗಬಾರದೆಂಬ ಸದುದ್ದೇಶದಿಂದ ಪುರಾಣಗಳ ಕಥೆಗಳನ್ನು ರಸವತ್ತಾಗಿ ಬಣ್ಣಿಸುತ್ತಾರೆ. ಮಾತ್ರವಲ್ಲ ದ್ವೈತ, ಅದ್ವೈತ, ವಿಶಿಷ್ಟಾದ್ವೈತಗಳೊಂದಿಗೆ ಇಂದಿನ ಆಧುನಿಕ ಮತ ಧರ್ಮ ಪಂಥಗಳ ಸೂಕ್ಷ್ಮ ವ್ಯತ್ಯಾಸಗಳನ್ನು ತಿಳಿಸುತ್ತಾರೆ. ಈ ಹೊತ್ತಿಗಾಗಲೇ ಸುಜ್ಞಾನದ ಸವಿಯನ್ನು ಕಂಡುಕೊಂಡ ಮನ ಮತಿಗಳು ಹೆಚ್ಚಿನ ಆಹಾರಕ್ಕಾಗಿ ಹಾತೊರೆಯಲು ಪ್ರಾರಂಭಿಸುತ್ತವೆ. ಆಗ ಸದ್ಭಕ್ತಿ-ಸದಾಚಾರಗಳಿಂದ ತುಂಬಿದ, ಸರ್ವಾಂಗ ಸುಂದರವಾದ, ಸುವ್ಯವಸ್ಥಿತವಾದ ವಚನೋದ್ಯಾನಕ್ಕೆ ಶ್ರೋತೃಗಳನ್ನು ಕರೆತರುತ್ತಾರೆ ಮಾತ್ರವಲ್ಲ ಎಲ್ಲರಿಗೂ ಆಚರಿಸಲು ಸುಲಭಸಾಧ್ಯವಾದ ಬಸವ ಧರ್ಮದ ಮಹಾಮನೆಯ ವೈಭವವನ್ನು ತೋರಿಸುತ್ತಾರೆ.

ಪೂಜ್ಯ ಸ್ವಾಮೀಜಿಯವರ ಇಂಥ ಪರಿಶ್ರಮದಿಂದ ಆಗುತ್ತಿರುವ ಅಗೋಚರವಾದ ಸತ್ಪರಿಣಾಮವೆಂದರೆ ಭಕ್ತ ವಲಯದ ವಿಸ್ತಾರ. ಅದು ಜಾತಿ, ಮತ, ಪಂಥ, ವಯಸ್ಸು, ಅಂತಸ್ತು, ಲಿಂಗ ಭೇದವಿಲ್ಲದೆ ಎಲ್ಲಾ ವರ್ಗದ ಬೌದ್ಧಿಕ ಮಟ್ಟದ ಜನರನ್ನು ಆಕರ್ಷಿಸಿ, ಸಂಘಟಿಸುತ್ತ ಯಶಸ್ವಿಯಾಗುತ್ತಿದೆ. ಹೀಗಾಗಿ ಬೆಂಗಳೂರಿನ ಬಸವ ಮಂಟಪದಲ್ಲಿ ಪ್ರತಿ ಭಾನುವಾರ ನಡೆಯುವ ಸಾಮೂಹಿಕ ಪ್ರಾರ್ಥನೆ, ಪ್ರವಚನ ಮತ್ತು ಪ್ರಸಾದ ದಾಸೋಹದಲ್ಲಿ ಮೂರು-ನಾಲ್ಕು ನೂರಕ್ಕೂ ಮಿಕ್ಕಿದ ಶರಣರು ಭಾಗವಹಿಸಿ ಆನಂದಿಸುತ್ತಿದ್ದಾರೆ.

ಪ್ರವಚನವು ಒಂದು ಅದ್ಭುತವಾದ ಕಲೆ ಎಂಬುದು ನಿಜ. ಇದರ ಬಹಿರಂಗದ ಪೂರ್ವಸಿದ್ಧತೆಗಳಾದ ವಿಶಾಲವಾದ ಮೈದಾನ, ವೇದಿಕೆ, ಮೈಕ್, ಹಾರನ್, ವಾಹನ, ನುರಿತ ಸಿಬ್ಬಂದಿ ವರ್ಗ, ವಿದ್ಯುತ್ ದೀಪ, ಪುಸ್ತಕ ಮಳಿಗೆ ಮುಂತಾದುವನ್ನು ನೋಡಿ ಆಕರ್ಷಿತರಾಗಿ, ಧರ್ಮಪ್ರಚಾರದ ಬಯಕೆ ಹೊತ್ತು ಆಶ್ರಮಕ್ಕೆ ಸಾಧಕರು ಬರುವುದು ಅಷ್ಟೇ ಸತ್ಯ. ಹೀಗೆ ಬಂದವರು ಧರ್ಮಪ್ರಚಾರದ ಅಂತಃಸತ್ವವನ್ನು ಮನಗಾಣದೆ, ಆದರ್ಶಪಥದಲ್ಲಿ ಯಶಸ್ಸು ಸಿಗದೆ ನಿರಾಶರಾದಾಗ ಅಂಥವರಿಗೆ ಪೂಜ್ಯ ಸ್ವಾಮೀಜಿಯವರು ಉಪದೇಶಿಸುವುದನ್ನು ನೀವು ಕೇಳಿರಿ. "ಪ್ರವಚನ ಮಾಡಿದರೆ ಮಾತ್ರ ಜೀವನದ ಸಾರ್ಥಕತೆ ಸಾಧ್ಯ ಎಂಬ ಭ್ರಾಂತಿಗೆ ಒಳಗಾಗಬೇಡಿ. ಸೇವೆಗೆ ಸಾಕಷ್ಟು ಅವಕಾಶಗಳಿವೆ, ದಾರಿಗಳಿವೆ. ಇದನ್ನು ಬಳಸಿಕೊಂಡು ಮುಂದುವರಿಯಲು ಪ್ರಯತ್ನಿಸಿರಿ. ಯಾವುದೇ ಕಾರಣಕ್ಕಾಗಿ ಹಿಡಿದಿರುವ ಆದರ್ಶಪಥದಿಂದ ಹಿಮ್ಮೆಟ್ಟಬೇಡಿರಿ. ಭಕ್ತಿ- ಶ್ರದ್ಧೆ- ನಿಷ್ಠೆಯಿಂದ ಸೇವೆ ಮಾಡುತ್ತಾ ಹೋಗಿರಿ. ಒಂದು ದಿನ ನಿಮಗೂ ಮುಕ್ತಿಯ ಬಾಗಿಲು ತೆರೆಯುತ್ತದೆ." ಎಂದು ಚೈತನ್ಯ ತುಂಬುತ್ತಾರೆ ; ಮಾತ್ರವಲ್ಲ ಸಾಧಕರು ಬಾಳ ಹಾದಿಯಲ್ಲಿ ಮತ್ತೆ ಮತ್ತೆ ಮುಗ್ಗರಿಸದಂತೆ ಬೆಳಕು ಚೆಲ್ಲುತ್ತಾರೆ.

ಹೀಗೆ ಪೂಜ್ಯ ಮಾತಾಜಿ ಮತ್ತು ಅಪ್ಪಾಜಿಯವರ ಸತ್ಸಂಕಲ್ಪಗಳನ್ನು ಪೂರೈಸಲು ಬಂದಿರುವ ಆಶಾಕಿರಣ, ಸಾಧಕರ ಪಾಲಿಗೆ ಬೆಳಕಾಗಿರುವ ಜಂಗಮ ಜ್ಯೋತಿ, ನಮ್ಮೆಲ್ಲರ ಒಲವಿನ ಆಧ್ಯಾತ್ಮಿಕ ಸೋದರರಾದ ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮೀಜಿಯವರು ಇದೇ ವಿಜಯದಶಮಿಯ ಶುಭದಿನದಂದು 41 ವರ್ಷಗಳನ್ನು ಪೂರೈಸಿ 42ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಶುಭಸಂದರ್ಭದಲ್ಲಿ ಈ ಲೇಖನಿ ತನ್ನ ನುಡಿಕಾಣಿಕೆಯನ್ನು ಅರ್ಪಿಸಿ, ಪೂಜ್ಯರ ಪವಿತ್ರ ಪಾದಾರವಿಂದಗಳಿಗೆ ಸಹಸ್ರ ನಮನ ಸಲ್ಲಿಸುತ್ತಾ ಧನ್ಯತೆಯನ್ನು ಅನುಭವಿಸುತ್ತಿದೆ.

ಸಮಸ್ಯೆ ?- ಸಮಾಧಾನ !

ಬಕ್ಕಪ್ಪ ಚಂದ್ರಪ್ಪ ಸೂಗೂರು, ನಾಗಾಯಿ ದಲಾಯಿ, ಚಿಂಚೋಳಿ(ತಾ)- ಆಗಸ್ಟ್ ಕಲ್ಯಾಣ ಕಿರಣದಲ್ಲಿ ಧರ್ಮಗುರು ಬಸವಣ್ಣನವರ ವಚನ "ಅರಸು ವಿಚಾರ" ಎಂಬುದಕ್ಕೆ ವ್ಯಾಖ್ಯಾನ ನೀಡುತ್ತ "ಬಿಜ್ಜಳನ ವಧೆಗೆ ಅತೃಪ್ತ ಸಾಮಂತರಾದ, ಚಾಲುಕ್ಯನಿಷ್ಠರಾದ ಜಗದೇವ ಮಲ್ಲಣ್ಣ ಬೊಮ್ಮಣ್ಣನವರನ್ನು ಮಡಿವಾಳ ಮಾಚಿದೇವರು ಪ್ರೇರೇಪಿಸಿದರು." ಎಂದು ಬರೆದಿದ್ದೀರಿ. ಇದು ನಮಗೆ ತೀವ್ರ ಕಳವಳ ಉಂಟುಮಾಡಿದೆ. ಮಾಚಿದೇವರಂಥ ಶರಣರು ಹೀಗೆ ಮಾಡಲು ಸಾಧ್ಯವೇ ? ಎಂಬ ಚಿಂತೆ ಆವರಿಸಿದೆ. ಸೂಕ್ತ ಪರಿಹಾರ ನೀಡಿರಿ.

★ ಇದೇ ರೀತಿಯ ಪತ್ರಗಳು ಇನ್ನಿತರರಿಂದಲೂ ಬಂದಿವೆ. ಬಿಜ್ಜಳನು ಬದುಕಿದ್ದರೆ, ಅವನು ಸೌಮ್ಯವಾದಿಯಾದ ಕಾರಣ ಶರಣರು ಸುರಕ್ಷಿತ ಎಂದು ನಂಬಿದ್ದ ಬಸವಣ್ಣನವರು ಕಲ್ಯಾಣದಿಂದ ಗಡಿಪಾರಾಗಿ ಹೊರಡುವಾಗ ವಚನ ಸಾಹಿತ್ಯ ಸಂರಕ್ಷಣೆ ಮತ್ತು ಶರಣರ ರಕ್ಷಣೆಯ ಜವಾಬ್ದಾರಿಯನ್ನು ಚನ್ನಬಸವಣ್ಣ ಮತ್ತು ಮಾಚಿದೇವರಿಗೆ ವಹಿಸಿದರು. ಜನಪದ ಸಾಹಿತ್ಯದಲ್ಲಿ ಇದನ್ನು ಬಹಳ ಚೆನ್ನಾಗಿ ಚಿತ್ರಿಸಲಾಗಿದೆ. ಎಲ್ಲರಿಗೆ ಬೆಲ್ಲಾದ ಕಲ್ಯಾಣ ಬಸವಯ್ಯ ಪುಸ್ತಕ ನೋಡಿರಿ.

ಕೂಡಿಸಿದ ಮಂಟಪವ ಹಾಡಿಸಿದ ಶಿವಮತವ
ನಾಡ ಶರಣರಿಗೆ ತಿಳಿಸಿದನು । ಬಸವಯ್ಯ
ಹೂಡುವರು ಕದನ ವಾದಿಗಳು ॥ ಪುಟ 59, ಪದ್ಯ 104

ಶಿವಯೋಗಿ ಮಗ ಬಾರೋ ಶಿವಪುತ್ರ ಚನ್ನಬಸವ
ಶಿವನಾಣೆ ಚನ್ನಬಸವಣ್ಣ । ಕಲ್ಯಾಣ
ಶಿವಗಳಸ ಬಾರೋ ಮಂಟಪಕೆ ॥ ಪದ್ಯ 105

ಕರೆದು ಆಶೀರ್ವದಿಸಿ ಹರಸಿ ಒಪ್ಪಿಸಿ ಬಸವ
ವರ ಚನ್ನಬಸವ ಶರಣರಿಗೆ । ಕಂಟಕದ
ಹುರಿಯಾಳು ಕಾಯೊ ಹೊಸಮತವ ॥ ಪದ್ಯ 106

ಚನ್ನಬಸವನೆ ಕಾಯೊ ಇನ್ನು ಮಂಟಪ ನೀನು
ಗುನ್ನೆ ಮಾಡುವರು ಶಿವಮತಕೆ । ಕೋಪಿಗಳು
ಮಣ್ಣುಗೂಡಿಸುವ ಮಾಚಯ್ಯ ॥ ಪದ್ಯ 107

ಈ ಹೊಸ ಮತವನ್ನು ರಕ್ಷಿಸು ಎಂದು ಧರ್ಮಗುರು ಬಸವಣ್ಣನವರು ಹೇಳಿದರಂತೆ !. ಎಷ್ಟು ಸ್ಪಷ್ಟವಾಗಿದೆ. ಇಲ್ಲಿ ತಾವೊಂದು ಹೊಸ ಧರ್ಮವನ್ನು ಕೊಟ್ಟಿದ್ದೇವೆ ಎಂಬ ಅರಿವು ಅವರಿಗಿತ್ತು.

"ಚನ್ನಬಸವಣ್ಣ... ಮಂಟಪವನ್ನು ರಕ್ಷಿಸು. ವಿರೋಧಿಗಳು ಬಹಳ ಅನ್ಯಾಯ ಮಾಡುವರು" ಹೇಳುವುದರ ಜೊತೆಗೆ "ಮಾಚಿದೇವರನ್ನು ಮುಂದೆ ಬಿಡಬೇಡ. ಅವರು ತೀವ್ರವಾದಿಗಳು." ಎಂದು ಎಚ್ಚರಿಕೆ ಸಹ ನೀಡುವರು. ಇದಕ್ಕೆ ಸಾಕ್ಷಿ ಈ ಮಾತು. "ಮಣ್ಣುಗೂಡಿಸುವ ಮಾಚಯ್ಯ." ಹೀಗೆ ಅನ್ನುವಲ್ಲಿ ಗುರು ಬಸವಣ್ಣನವರಿಗೆ ಮಡಿವಾಳ ಮಾಚಿದೇವರ ಮೇಲೆ ಕೋಪವಾಗಲೀ, ತಪ್ಪು ಕಲ್ಪನೆಯಾಗಲಿ ಇರಲಿಲ್ಲ. ಆದರೆ ಅವರ

ಸ್ವಭಾವ ಗೊತ್ತಿತ್ತು. ಬಹುಶಃ ಮಾಚಿದೇವರಿಗೂ ಹೇಳಿರಬಹುದು, (ಈ ವಚನ ಸಿಕ್ಕಿಲ್ಲ ; ಆದರೆ ಮಾಚಿದೇವರು ಕೊಟ್ಟ ಉತ್ತರ ಸಿಕ್ಕಿದೆ.)

"ಮಾಚಿತಂದೆ ನೀವು ಶೂರರು, ಧೀರರು, ಶರಣ ಪ್ರೇಮಿಗಳು. ಆದರೆ ಈ ಸನ್ನಿವೇಶದಲ್ಲಿ ದುಡುಕಿದರೆ ಏನೂ ಪ್ರಯೋಜನವಾಗದು. ತಾಳ್ಮೆಯಿರಲಿ." ಎಂದಿರಬಹುದು. ಮಾಚಿದೇವರ ಉತ್ತರ ನೋಡಿರಿ.

ಮಾಚಿ ತಂದೆಯ ಕೈಯಲಾಗದು
ಹೋಚಿ ತಂದೆಯ ಕೈಯಲಾಗದು
ಇಟ್ಟಿಗೆಟ್ಟಂತೆ ಇರಲಾಗದು
ಅಚ್ಚೊತ್ತಿದಂತೆ ಇರಬೇಕು ಅತಿ ಚೋದ್ಯವಾಗಿ
ಎಚ್ಚರಿಕೆಯ ಮುಚ್ಚುಮರಹಿಲ್ಲದೆ ಬೆಚ್ಚಂತಿರಬೇಕು.
ಮಚ್ಚು ಪಲ್ಲಟವಾಗದೆ ಅಚ್ಚರಿಯ ಭಕ್ತಿಭರಿತನಾಗಿರಬೇಕು
ಕಲಿ ಕರುಳನೊತ್ತಿ ಮುಂದಕ್ಕೆ ನಡೆವನಲ್ಲದೆ
ಎಡೆಗೋಲನಾಸೆ ಮಾಡುವನೆ ಹೇಳಾ ?
ಕಲಿದೇವರದೇವನ ಅಂಕಿಗೆ ಝಂಕೆಗೆ ,
ಬೆಚ್ಚಿ ಬೆದರಿ ಓಡಿದಿರು
ವೀರ ಕಂಕಣವ ಕಟ್ಟಾ, ಸಂಗನ ಬಸವಣ್ಣಾ

(ಮ.ಮಾ.ವಚನ 715, ಸರ್ಕಾರಿ ಸಂಪುಟ-8)

ಈ ವಚನವನ್ನು ವಿಶ್ಲೇಷಿಸಿರಿ. ಬಸವಣ್ಣನವರು ಮಹಾತ್ಮ ಗಾಂಧೀಜಿಯಂತೆ ಅಹಿಂಸಾತ್ಮಕ ಮಾರ್ಗದಿಂದ ಬ್ರಿಟಿಷರನ್ನು ಎದುರಿಸೋಣ ಎಂಬ ವಾದದವರು. ಸುಭಾಷ್ ಚಂದ್ರ ಬೋಸ್‌ರ ಮಿಲಿಟರಿ ಶಕ್ತಿಯಿಂದ ಎದುರಿಸೋಣ ಎಂಬ ವಾದದಂತೆ ಮಡಿವಾಳ ಮಾಚಿದೇವರ ವಾದ. ನನ್ನ ದೃಷ್ಟಿಯಲ್ಲಿ ಇಬ್ಬರದೂ ಸರಿಯೆ! ಬ್ರಿಟಿಷರ ದೈತ್ಯ ಶಕ್ತಿಯ ಮುಂದೆ ಮಿಲಿಟರಿ ಹೋರಾಟದಿಂದ ಬ್ರಿಟಿಷರನ್ನು ಎದುರಿಸಲಾರೆವು ಎಂಬ ಗಾಂಧೀಜಿಯ ಚಿಂತನೆ ವಾಸ್ತವಿಕ, ಪ್ರಯೋಗಶೀಲ. ಶರಣರು ಉಗ್ರಗಾಮಿಗಳಲ್ಲ. ಅವರು ಪುರೋಹಿತ ಶಾಹಿಯಿಂದ ಪ್ರಚೋದಿತವಾದ ಸೈನ್ಯವನ್ನು ಎದುರಿಸುವುದು ಹೇಗೆ ಸಾಧ್ಯ ? ಅದಕ್ಕೆ ಶಾಂತಿಯನ್ನು ಕಾಯ್ದುಕೊಳ್ಳಲು ಬಸವಣ್ಣನವರು ಉಪದೇಶಿಸುತ್ತಾರೆ. ತಮ್ಮ ಪ್ರಾಣಕ್ಕಿಂತಲೂ ಮಿಗಿಲಾಗಿದ್ದ ಬಸವಣ್ಣನವರ ಮಾತನ್ನು ಮೀರೆ ಎಂದು ಪ್ರತಿಜ್ಞೆಗೆ ಬದ್ಧರಾಗಿದ್ದ ಮಾಚಿದೇವರಿಗೆ ಈಗ ಬಲೇ ಕೋಪ ಬಂದಿದೆ. ಅದನ್ನು ಹೇಗೆ ವ್ಯಕ್ತಪಡಿಸುತ್ತಾರೆ ನೋಡಿ.

ಮಾಚಿ ತಂದೆಯ ಕೈಯಲಾಗದು, ಹೋಚಿ ತಂದೆಯ ಕೈಯಲಾಗದು ಎಂಬುದರಲ್ಲಿ ಆಕ್ರೋಶ ಸಿಡಿದಿದೆ. "ಆದುದ್ದಾಗಲಿ ಹೋರಾಟಕ್ಕೆ ನಿಲ್ಲೋಣ ; ಶೂರನ ಕರುಳನ್ನು ಯಾರಾದರೂ ಬಗೆದರೆ ಅದು ಹೊರಗೆ ಬೀಳುತ್ತಿದ್ದರೆ ಅದನ್ನು ಒತ್ತಿ ಹಿಡಿದು ಪುನಃ ಶೂರನು ಮುನ್ನುಗ್ಗುವನು. ನಮ್ಮಂಥ ಧೀರ ಅನುಯಾಯಿಗಳು ಇರುವಾಗ ಗಡಿಪಾರಿನ ಆಜ್ಞೆ ಒಪ್ಪಿಕೊಂಡಿದ್ದೇಕೆ ? ಏಕೆ ಬೆಚ್ಚಿ,ಬೆದರಿ ಓಡುತ್ತಿದ್ದೀಯೆ. ನನಗೆ ಅನುಮತಿ ನೀಡು. ವೀರ ಕಂಕಣವ ಕಟ್ಟು." ಎಂದು ಮಾಚಿದೇವರು ಹೇಳುತ್ತಾರೆ. (ಇದನ್ನು ಬರೆಯುವಾಗ ಶರಣರು

ಅಂದು ಎದುರಿಸಿದ ಸನ್ನಿವೇಶ ನೆನೆದು ಕರುಳು ಕಿವುಚುತ್ತಿದೆ. ಮಾಚಿದೇವರ ಬಗ್ಗೆ ಗೌರವವು ಇಮ್ಮಡಿಸುತ್ತಿದೆ. ಎಂಥಾ ಧೀರ ಶರಣ ! ಆತನಿಗೆ ಕೋಟಿ ನಮನ !!)

ಧರ್ಮಪಿತರನ್ನು ಮೂದಲಿಸುತ್ತಾರೆ. ಏಕೆ ಓಡಿ ಹೋಗುತ್ತಿರುವಿರಿ.? ಎನ್ನುತ್ತಾರೆ. ಆದರೆ ಇಲ್ಲಿ ಮಾಚಿದೇವರ ಭಾವನೆಯ ತೀವ್ರತೆಯನ್ನು ನಾವು ಅರ್ಥಮಾಡಿಕೊಳ್ಳಬೇಕೇ ವಿನಾ ಬಸವಣ್ಣನವರನ್ನು ಹೇಡಿ ಎಂದು ಭಾವಿಸಬಾರದು. ಸೈನ್ಯದೊಡನೆ ಹೋರಾಟಕ್ಕೆ ಇಳಿಯುವಂಥ ಪ್ರವೃತ್ತಿ ಶರಣರದಲ್ಲ; ಆ ರೀತಿಯ ಸಿದ್ಧತೆಯೂ ಇರಲಿಲ್ಲ. ಇದರಿಂದ ಸಾವು ನೋವು ಜಾಸ್ತಿಯಾಗುವುದಲ್ಲದೆ ಶರಣರ ಜೀವದೊಡನೆ ಸಾಹಿತ್ಯವು ಜಾತಿವಾದಿಗಳ ಕೈಗೆ ಸಿಕ್ಕಿ ಅದೂ ನಾಶವಾದರೆ ತಮ್ಮ ಮತ್ತು ಸಮಕಾಲೀನ ಶರಣರ 36 ವರ್ಷಗಳ ಸಾಧನೆ ಎಲ್ಲ ವ್ಯರ್ಥ ಎಂದು ಶಾಂತಿವಾದವನ್ನು ಬೋಧೆ ಮಾಡುವರು. ಮಾಚಿದೇವರಿಗೆ ನಾಯಕತ್ವ ವಹಿಸಿ ಕೊಡದೆ ಸೌಮ್ಯವಾದಿ ಚನ್ನಬಸವಣ್ಣನವರಿಗೆ ಕೊಡುವರು. ಪ್ರಸ್ತುತ ಸಂದರ್ಭದಲ್ಲಿ ವಾಜಪೇಯಿಯಂತೆ ಚನ್ನಬಸವಣ್ಣನ ಸ್ವಭಾವ, ಅದ್ವಾನಿಯಂತೆ ಮಾಚಿದೇವರ ಸ್ವಭಾವ.

ಈ ಸಂದರ್ಭದಲ್ಲಿ ಕಲ್ಯಾಣ ಪರ್ವದ ಸನ್ನಿವೇಶವನ್ನು ಚಿತ್ರಿಸಬಹುದು. ಬೀದರ್ ಡಿ.ಸಿ ಮತ್ತು ಎಸ್.ಪಿ ಮತ್ತು ಕೆಲವು ಪೋಲೀಸ್ ಅಧಿಕಾರಿಗಳ ಯೋಜನೆ ಏನಿತ್ತೆಂದರೆ ನಮ್ಮ ಶರಣರು ಯಾರಾದರೂ ಉದ್ರೇಕಗೊಂಡು ಪೋಲೀಸರೊಂದಿಗೆ ಘರ್ಷಣೆಗೆ ಇಳಿಯಬೇಕು. ಅದನ್ನು ನೆಪ ಮಾಡಿಕೊಂಡು ಲಾಠಿ ಚಾರ್ಜು ಮಾಡಿ ಎಲ್ಲರನ್ನು ಚಚ್ಚಬೇಕು. ಅಲ್ಲಿಂದ ಬಡಿದು ಓಡಿಸಬೇಕು. ಅದಕ್ಕಾಗಿ ಸುಮ್ಮನೆ ಪೂಜೆ - ಪ್ರಾರ್ಥನೆ ಮಾಡುತ್ತಿದ್ದ ಶರಣರನ್ನು ಕೆರಳಿಸಲು ಪ್ರಯತ್ನಿಸುತ್ತಿದ್ದರು. ನಮಗೆ ಇದರ ವಾಸನೆ ಬಡಿಯಿತು. ಎಷ್ಟೇ ಕಷ್ಟವಾದರೂ ಉದ್ರೇಕಗೊಳ್ಳಬಾರದು ಎಂದು ನಾನು ಸೂಚನೆ ನೀಡುತ್ತಿದ್ದೆ. ಆಗ ರಾಮನಗೌಡ ಎಂಬ ಪಿ.ಎಸ್.ಐ. ಕೃಷ್ಣ ಎಂಬ ಸಿ.ಪಿ.ಐ. ಉದ್ದೇಶಪೂರ್ವಕವಾಗಿ ನಮ್ಮವರನ್ನು ಕೆರಳಿಸಲು ಪೂಜ್ಯ ಶ್ರೀ ಸಿದ್ದರಾಮೇಶ್ವರ ಸ್ವಾಮಿಗಳನ್ನು ನೆಲಕ್ಕೆ ಕೆಡವಿ ಥಳಿಸಿದರು. ಶಾಂತಿ ಸಂರಕ್ಷಣೆ ಮಾಡಬೇಕಾದ ಪೋಲೀಸರೆ ಸುಮ್ಮನಿದ್ದ ಶಾಂತಿಪ್ರಿಯರನ್ನು ಕೆರಳಿಸಲೆತ್ನಿಸುವುದು ಚೋದ್ಯದ ಸಂಗತಿಯಲ್ಲವೇ ? ಪೂಜ್ಯ ಶ್ರೀ ಅಲ್ಲಮಪ್ರಭು ಸ್ವಾಮಿಗಳಿಗೆ ಯಾರೋ ಗಾಬರಿಯಿಂದ ಓಡಿ ಬಂದು ಹೇಳಿದಾಗ ಅವರು ಅತ್ತ, ದಾವಿಸಿದರು. ವಿನಾ ಕಾರಣ ಸಿದ್ಧರಾಮೇಶ್ವರ ಸ್ವಾಮಿಗಳನ್ನು ಹೊಡೆದ ವಿಷಯ ತಿಳಿದು ಸ್ನಾನ ಪೂಜೆಗಳಲ್ಲಿ ನಿರತರಾದ ಶರಣರು ಓಡಿ ಬಂದರು. ಕೆಲವರು ಕೆರಳಿ ಬಿಟ್ಟರು. ಅಷ್ಟರಲ್ಲಿ ಹುಲಸೂರಿನ ಓರ್ವ ಶರಣರು ಶಿವಲಿಂಗಸ್ವಾಮಿ ಎಂಬುವವರು ಅಲ್ಲಿಗೆ ಹೋಗಿ ಶರಣರನ್ನು ಸಮಾಧಾನ ಮಾಡಿ ಚದುರಲು ಹೇಳುವಾಗ ಓರ್ವ ಗಣಾಚಾರಿ ಶರಣರು ಸಿಟ್ಟಿಗೆದ್ದು ಅಂದರಂತೆ. " ಇನ್ನೇನ್ರಿ ಶಾಂತಿ ಕಾಯ್ದುಕೊಳ್ಳುವುದು. ಪೋಲಿಸರ ದೌರ್ಜನ್ಯ ಸಹಿಸಿ ಸಾಕಾಗಿದೆ. ನಮಗೇನು ಬುದ್ದಿ ಹೇಳ್ತೀರಿ ? ಎಂಥಾ ಹೇಡಿಗಳು ಹಣೆ ಮೇಲೆ ಇರೋ ವಿಭೂತಿ ಅಳಿಸಿ , ಕಟ್ಟಿರೋ ಲಿಂಗ ತೆಗೆದುಹಾಕ್ರಿ" ಎಂದು ಕೂಗಾಡ ತೊಡಗಿದರಂತೆ.

"ಶಾಂತಿ-ಸಮಾಧಾನದಿಂದಿರಲು ಮಾತಾಜಿ ಹೇಳಿ ಕಳಿಸಿದ್ದಾರೆ" ಎಂದು ಅಂದರೆ "ನಾವು ಈಗ ಅವರ ಮಾತು ಕೇಳಲು ತಯಾರಿಲ್ಲ ." ಎಂದರಂತೆ. ಅಷ್ಟರಲ್ಲಿ ಅಲ್ಲಮಪ್ರಭು

ಸ್ವಾಮಿಗಳು ಹೋಗಿ ಎಲ್ಲರನ್ನೂ ಸಮಾಧಾನ ಮಾಡಿ ಚದುರಿಸಿ, ಸಿದ್ಧರಾಮೇಶ್ವರ ಸ್ವಾಮಿಗಳನ್ನು ಕರೆತಂದರು. ನಾವು ಅಂತರಂಗದಲ್ಲಿ ಅಪಾರ ದು:ಖವಿದ್ದರೂ ತೋರಿಸಿಕೊಳ್ಳದೆ ಸಮಾಧಾನದಿಂದಿರಿ ಎಂದು ಹೇಳಿದಾಗ ಅವರಿಗೆ ಮುನಿಸು ಬಂದಿತು. ಅವರನ್ನು ಹೊಡೆದರೂ ನಾವು ಏನೂ ಮಾಡಲಿಲ್ಲ ಎಂದು. ನಾವು ಸ್ವಲ್ಪ ದುಡುಕಿದ್ದರೂ ನರಗುಂದ, ಝಳಕಿಯಂತಹ ದುರಂತ ನಡೆಯುತ್ತಿತ್ತು. ಪೋಲೀಸರು ಅದಕ್ಕೆ ಸಿದ್ಧರಾಗಿಯೇ ನಿಂತಿದ್ದರು.

ಇಂಥ ಸನ್ನಿವೇಶವನ್ನು ವಿಶ್ಲೇಷಿಸಿದರೆ ತಿಳಿಯುತ್ತದೆ. ನಾವೇನೂ ಹೇಡಿಗಳಲ್ಲ ಉದ್ದೇಶಪೂರ್ವಕವಾಗಿ ಶಾಂತಿಯನ್ನು ಆಶ್ರಯಿಸಿದೆವು. ನೋವಿನಿಂದ ಕೆಲವು ತೀವ್ರವಾದಿ ಶರಣರು ನಾವು ಮಾತಾಜಿ ಹೇಳಿದರೂ ಕೇಳಲ್ಲ ಎಂದರೆ ಅವರು ನಮ್ಮ ಬಗ್ಗೆ ಗೌರವ ಕಳೆದುಕೊಂಡಿದ್ದಾರೆ ಎಂದಲ್ಲ.

ಬಸವಣ್ಣನವರ ನಿರ್ಗಮನದ ಪ್ರಸಂಗವೂ ಹೀಗೆ ಇದೆ. ಅವರು ಅಲ್ಲೇ ಇರಬೇಕು, ಮಾಚಿದೇವರು ಸೈನ್ಯವನ್ನು ಎದುರಿಸಬೇಕು ಎಂದು ಬಯಸಿದ್ದರು. ಧರ್ಮಪಿತರು ಅವಕಾಶ ಕೊಡಲಿಲ್ಲ. ಈ ದೂರಾಲೋಚನೆಯಿಂದಾಗಿ ಎಷ್ಟೋ ಸಾಹಿತ್ಯ ರಕ್ಷಿಸಲ್ಪಟ್ಟಿತು.

ಮಾಚಿದೇವರ ಮನಸ್ಸಿನಲ್ಲಿ ಒಂದು ಕೊರಗು ಉಳಿದೇಬಿಟ್ಟಿತ್ತು. ಯಾವಾಗ ರಾಜಕೀಯ ಬಂಡಾಯಗಾರರಾದ ಜಗದೇವ ಮಲ್ಲಣ್ಣ ಬೊಮ್ಮಣ್ಣ ಕಾರಾಗೃಹದಿಂದ ತಪ್ಪಿಸಿಕೊಂಡು ಬಂದರೋ ಆಗ ಮಾಚಿದೇವರು ಶರಣ ದ್ರೋಹಿ ಬಿಜ್ಜಳನನ್ನು ಇನ್ನೆಷ್ಟು ದಿನ ಸಹಿಸಿಕೊಳ್ಳುವುದು ಎಂದು ಆ ರಾಜಕೀಯ ಬಂಡಾಯಗಾರರಿಗೆ ಪ್ರೇರಣೆ ನೀಡಿದರು. ಜಗದೇವನ ತಾಯಿ ಸಹ ಮಗನನ್ನು ಮೂದಲಿಸಿದ್ದಾಗಿ ಕಥೆಯಲ್ಲಿ ಬರುತ್ತದೆ. ಬಿಜ್ಜಳನನ್ನು ವಧಿಸಿದ ನಂತರ ಜಗದೇವ ಮಲ್ಲಣ್ಣ ಬೊಮ್ಮಣ್ಣರು ಸೈನಿಕರ ಕೈಲಿ ಹತರಾದರು ಎಂದು ಅನೇಕ ಸಾಹಿತಿಗಳು ಬರೆದಿದ್ದಾರೆ. ಇದು ಸುಳ್ಳು, ಅವರು ಬಂದು ಶರಣರ ತಂಡವನ್ನು ಸೇರಿಕೊಂಡ ಬಗ್ಗೆ ಕಾಲಜ್ಞಾನ ವಚನಗಳಲ್ಲಿ ಉಲ್ಲೇಖವಿದೆ. ನಂತರ ಜಗದೇವ ಈಗಿನ ಸಿಂದಗಿಯ ಪ್ರಾಂತ್ಯಕ್ಕೆ ಹೋಗಿ ನೆಲೆಸಿದ. ಮಲ್ಲಣ್ಣ-ಬೊಮ್ಮಣ್ಣರು ಈಗಿನ ಬೆಳಗಾಂ ಪ್ರಾಂತ್ಯದಲ್ಲಿ ನೆಲೆಸಿದರು. ಜಗದೇವನ ವಂಶಸ್ಥರು ಸಿಂದಗಿಯಲ್ಲಿದ್ದಾರೆ. ಕಿತ್ತೂರು ಚನ್ನಮ್ಮನ ಪತಿ ಮಲ್ಲಸರ್ಜ ಮಲ್ಲಣ್ಣನ ವಂಶಸ್ಥ. ಬಿಜ್ಜಳನ ಹತ್ಯೆಯಾಯಿತು ಎಂಬ ವಾರ್ತೆ ತಿಳಿದಾಗ ಬಸವಣ್ಣನವರಿಗೆ ವಿಷಾದವೆನಿಸುತ್ತದೆ; ಆತ ರಾಜ ಮಾತ್ರವಲ್ಲ ಒಳ್ಳೆಯ ಮಿತ್ರನೂ ಆಗಿ ಬಸವಣ್ಣನವರ ಬಗ್ಗೆ ಗೌರವ-ಆತ್ಮೀಯತೆ ಹೊಂದಿದ್ದವನು. ಹೀಗಾಗಿ ಬಸವಣ್ಣನವರು "ಜಗದೇವ ಮೊಲ್ಲೆ ಬೊಮ್ಮಣ್ಣಗಳ ಕೈಯಲ್ಲಿ ಮಡಿದಿಹನು ಬಿಜ್ಜಳ ". ಎಂದು ದುಃಖದಿಂದಲೇ ಹೇಳಿದ್ದಾರೆ. ಆದರೆ ಮಾಚಿದೇವರಿಗೆ ಬಲು ಖುಷಿಯಾಯಿತು. ವಾರ್ತೆ ತಿಳಿಯುತ್ತಲೇ, "ಎಂತೆಂಥವರೋ ಸತ್ತರು. ಈಗ ಸತ್ತಿದ್ದು ಏನು ಮಹಾ! " ಎನ್ನುವರು. ಅವರಿಗೆ ಬಿಜ್ಜಳನ ಸಾವು ದುಃಖತರಲಿಲ್ಲ. ಇದಕ್ಕೆ ಸಾಕ್ಷಿ ಕೆಳಗಿನ ವಚನ ;

ಅಮೃತಮಥನದಲ್ಲಿ ಅಜ ಹರಿ ಸುರಪ ವಾಲಿ ಸುಗ್ರೀವರಳಿದರು.
ಕಾಶಿಯಲ್ಲಿ ಬ್ರಹ್ಮ ವಿಷ್ಣುಗಳಳಿದರು.

ಕೇದಾರದಲ್ಲಿ ಪಾಂಡವರಳಿದರು, ಕಲ್ಯಾಣದಲ್ಲಿ ವ್ಯಾಳನಳಿದನು.
ಶ್ರೀಶೈಲದಲ್ಲಿ ಹಿರಣ್ಯ ಧನುಜ ನಾಗಾರ್ಜುನರಳಿದರು.
ಪಾತಾಳ ಲಂಕೆಯಲ್ಲಿ ಮಹಿರಾವಣನಳಿದನು.
ಲವಣ ಲಂಕೆಯಲ್ಲಿ ಲಕ್ಷ್ಮೀಗಳುಪಿದವನಳಿದನು
ದಶರಥನ ತೋಹಿನಲ್ಲಿ ಮಂಡು ಬಲಚೌಡನಳಿದನು.
ಭೀಮನ ಕೈಯಲ್ಲಿ ಕೀಚಕನಳಿದನು.
ಮುನಿ ಕರ್ಣಿಕೆಯ ಶಿರವ ಹರಿದು, ಸುರಪನಜಹರಿಗಳು ಶಾಪಹತರಾದರು
ಋಷಿಯ ಸತಿಗಳುಪಿ ಸುರಪ ಮೈಯನಳಿದ.
ಭೀಷ್ಮರು ಕುಂಭಕರ್ಣ ದ್ರೋಣ ಜಾಂಬರು ನಿದ್ರೆಯಲ್ಲಿ ಅಳಿದರು.
ವ್ಯಾಧರ ಬಾಣದಲ್ಲಿ ಬಿದ್ದರು ವಿಷ್ಣು ಪಾಂಡ್ಯರಾಯರು.
ವಿಷದ ಪಣ್ಣಿಂದಳಿದ ಪರೀಕ್ಷಿತರಾಯನು.
ಪರಶುರಾಮನ ಕೈಯಲ್ಲಿ ಜಮದಗ್ನಿ ಮುನಿಯ ವಧೆಯಿಂದ ಕಾರ್ತಿಕರಳಿದರು.
ವೃಷಭನ ವಧೆಯಿಂದ ವೀತರಾಜನಳಿದ.
ಕುರುಕ್ಷೇತ್ರದಲ್ಲಿ ಕೌರವರಳಿದರು.
ಮಾಸನೂರಲ್ಲಿ ಸಿದ್ಧರಳಿದರು.
ಕೊಲ್ಲಾಪುರದಲ್ಲಿ ಹರಿ ಅಜ ಇಂದ್ರ ದಿಕ್ಪಾಲಕರು
ತೃಣಕೆ ಲಘುವಾದರು.
ಹೋಮ ಕಾಮ ತ್ರಿನೇತ್ರ ಪಂಚಮುಖರೆಲ್ಲ
ಮಹಾಪ್ರಳಯದಲ್ಲಿ ಅಳಿದರು.
ಇನ್ನು ಬಿಜ್ಜಳರಾಯನ ಅಳಿವಿನುಳಿವಿನ
ಹವಣವೇನು ಕಲಿದೇವರದೇವಾ. (ವ.ಸ. ಪುಟ 174-8)

ನಂತರ ಜಗದೇವ ಮೊಲ್ಲೆ ಬೊಮ್ಮರು ಬಂದು ಸಹ್ಯಾದ್ರಿಯ ಕಾನನದಲ್ಲಿ ಮಾಚಿದೇವರನ್ನು ಸಂದರ್ಶಿಸುವರು. ಆಗ ಮಾಚಿದೇವರು ಇವರ ಶೌರ್ಯವನ್ನು ಕೊಂಡಾಡುತ್ತಾರೆ.

ಎರಡು ಕೋಟಿ ವೀರಗಣಂಗಳಾಗಬಹುದಲ್ಲದೆ. (ಪುಟ 206, ವಚನ 99)
ಈ ವಚನ ಮಹತ್ವಪೂರ್ಣ ಐತಿಹಾಸಿಕ ದಾಖಲೆ.

1. ಹುತಾತ್ಮರಲ್ಲಿ ಶ್ರೇಷ್ಠರು ಹರಳಯ್ಯ-ಮಧುವಯ್ಯ
2. ಶೂರರಲ್ಲಿ ಶ್ರೇಷ್ಠರು ಜಗದೇವ, ಮಲ್ಲಣ್ಣ, ಬೊಮ್ಮಣ್ಣ
3. ಭಕ್ತರಲ್ಲಿ ಶ್ರೇಷ್ಠರು ಧರ್ಮಪಿತ ಬಸವಣ್ಣನವರು.

ಬಸವಣ್ಣನವರು ಗಡಿಪಾರಿಗೆ ಒಪ್ಪಿದಾಗ ಮಾಚಿದೇವರು ನೋವಿನಿಂದ ಮೂದಲಿಸಿದರೂ ಅವರ ಪ್ರಾಣ ಬಸವಣ್ಣನವರು. ಅವರಿಗೆ ಕೊಟ್ಟ ಪರಮೋಚ್ಚ ಸ್ಥಾನವನ್ನು ಇನ್ನಾರಿಗೂ ಮಾಚಿದೇವರು ಕೊಡಲಾರರು!!

ಜನಪದ ಗೀತೆಯಲ್ಲಿ ಬರುವ ಮಡಿವಾಳ ಮಾಚಿದೇವರ ಹಂತಿ ಪದ್ಯ ನೋಡೋಣ

ಮಾದರಸು ಹರಳಯ್ಯ ಹೋದ ದಿನ ಶಿವನಡಿಗೆ
ಬೀದಿ ಬೀದಿಗಳು ಕಿಡಿಕಾರಿ। ಕಲ್ಯಾಣ
ಗಾದಿ ಹೌಹಾರಿ ತಳಮಳಿಸಿ ॥ ಪದ್ಯ 83 ॥
ಅಂದು ಸಂಜೆಗೆ ಶಿವನೆ ಹೊಂದಿ ಮಂಟಪ ಕೂಡಿ
ಬಂದ ಬವಣೆಯನು ಕಳೆಯುದಕೆ। ದಂಡೇಶ
ಸಂದಣೆಗೆ ಉಳವಿ ಸೇರೆಂದು ॥ ಪದ್ಯ 85 ॥
ಬಿಚ್ಚು ಕತ್ತಿಯ ಮಾಚ ಕೆಚ್ಚೆದೆಯ ಬಂಟನವ
ರೊಚ್ಚ ಬೊಮ್ಮಯ್ಯ ಜಗದೇವ। ನಿಮ್ಮಾಣೆ
ನಚ್ಚು ಬಿಜ್ಜಳನ ಕಡೆಯುವೆವು ॥ ಪದ್ಯ 86 ॥
ಊಳಿಗವು ಹೊರಡುದಕೆ ನಾಳಿನಾ ಉದಯದೊಳು
ಕಾಳಗವು ಎಸಗೆ ಕೂಮತಕೆ। ಮಾಚಯ್ಯ
ಹೇಳಿ ಸಜ್ಜಾದ ಕಾಳಗಕೆ ॥ ಪದ್ಯ 87 ॥
ಕಾಲರುದ್ರನು ಮಾಚ ಭಾಳಲೋಚನ ಭಕ್ತ
ಮೊಲ್ಲೆ ಬೊಮ್ಮಯ್ಯ ಜಗದೇವ। ಮನೆ ಹೊಕ್ಕು
ಸೀಳಿ ತಲೆ ಹೊಡೆದು ಬಿಜ್ಜಳನ ॥ ಪದ್ಯ 88 ॥

ಈ ಎಲ್ಲ ವಚನಗಳ ಆಧಾರದ ಮೇಲೆ ಬಿಜ್ಜಳನ ವಧೆಗೆ ಮಡಿವಾಳ ಮಾಚಿದೇವರು ಪ್ರೇರಕರಾದರು ಎಂಬ ನಿರ್ಣಯಕ್ಕೆ ನಾನು ಬಂದಿದ್ದೇನೆ; ಇದು ಕೇವಲ ಊಹೆಯಲ್ಲ.

1. ಬಿಜ್ಜಳನ ಸಾವು ಧರ್ಮಪಿತರಿಗೆ ಖೇದವನ್ನು ಉಂಟು ಮಾಡಿದರೆ ಮಾಚಿದೇವರಿಗೆ ಹರ್ಷವನ್ನುಂಟು ಮಾಡಿರುವುದು.

2. ಈ ಕಾರ್ಯಕ್ಕಾಗಿ ಜಗದೇವ ಮತ್ತು ಸಂಗಡಿಗರನ್ನು ಮಾಚಿದೇವರು ವೀರರ ಸಾಲಿನಲ್ಲಿ ಸೇರಿಸಿರುವುದು.

3. ಆ ಮೂವರೂ ನಂತರ ಕೂಡಲ ಸಂಗಮದ ಕಡೆಗೆ ಬಸವಣ್ಣನವರ ದರ್ಶನಾರ್ಥಿಗಳಾಗಿ ಹೋಗದೆ ಮಾಚಿದೇವರ ಬಳಿಗೆ ಹೋಗಿರುವುದು.

ಈ ಮೂರೂ ಘಟನೆಗಳು ನನ್ನ ವಾದಕ್ಕೆ ಪುಷ್ಠಿ ನೀಡುತ್ತವೆ, ಇದು ತಪ್ಪೆ?

ಮಡಿವಾಳ ಮಾಚಿದೇವರು ಈ ರೀತಿ ಆಲೋಚಿಸಿರುವುದು ತಪ್ಪೆ? ನನಗೆ ತಪ್ಪು ಅನ್ನಿಸುತ್ತಿಲ್ಲ. ಏಕೆಂದರೆ ಧರ್ಮವನ್ನು ಉಳಿಸಿಕೊಳ್ಳಲು ಶೌರ್ಯವೂ ಅಗತ್ಯ. ಇತಿಹಾಸವನ್ನು ನೋಡಿದಾಗ ಇದು ಮನವರಿಕೆಯಾಗುತ್ತದೆ. ಬೌದ್ಧ ಧರ್ಮ ಅಹಿಂಸಾವ್ರತ ಸ್ವೀಕಾರಕ್ಕೆ ಮಹತ್ವ ನೀಡಿತು. ಹೀಗಾಗಿ ಪುರೋಹಿತ ಶಾಹಿಯ ಕೈಗೊಂಬೆಗಳಾದ ರಾಜರು ಬೌದ್ಧ ವಿಹಾರಗಳನ್ನು ನಾಶಮಾಡಿ ಭಿಕ್ಕುಗಳನ್ನು ಕೊಂದರು, ಓಡಿಸಿದರು. ಭಾರತದಿಂದ ಹೊರಗೆ ಹೋಗಿ ಅದು ಬದುಕಿತು. ಜೈನ ಧರ್ಮ ತನ್ನ ಮೂಲ ಸ್ವರೂಪ ಕಳೆದುಕೊಂಡು ಅಸ್ತಿತ್ವ ಉಳಿಸಿಕೊಂಡಿದೆ. ಗುರು ನಾನಕರ ಭಕ್ತಿಯ ಆಧಿಕ್ಯದಿಂದ ಸಿಖ ಧರ್ಮ ಬಹಳ ತಾಡನಕ್ಕೆ ಒಳಗಾದಾಗ ಗುರು ಗೋವಿಂದ ಸಿಂಗ್ ಅಲ್ಲಿ ಶೌರ್ಯವನ್ನು ತುಂಬಿದರು. ಆ ಸಾತ್ವಿಕ ಶೌರ್ಯದಿಂದಾಗಿ ಸಿಖ್ಖರು ಎಂಥಾ ಧೀಮಂತ ಜನಾಂಗವಾಗಿ ಬೆಳೆದಿದ್ದಾರೆ! ಜಗತ್ತಿನ ತುಂಬ

ತಮ್ಮ ಧರ್ಮದ ಹೆಸರನ್ನು ಹರಡಿದ್ದರು. ಮಡಿವಾಳ ಮಾಚಿದೇವರು ಶೌರ್ಯ ಪ್ರದರ್ಶನ ಮಾಡಿದ್ದರಿಂದಲೇ ಇಂದು ಲಿಂಗಾಯತ ಧರ್ಮ, ವಚನ ವಾಙ್ಮಯ, ಇಷ್ಟಲಿಂಗ ಉಳಿದವು. ಇಲ್ಲದಿದ್ದರೆ ಈ ಪುರೋಹಿತಶಾಹಿ, ರಾಜಶಾಹಿಯ ದಬ್ಬಾಳಿಕೆಯಿಂದ ನಿರ್ನಾಮವಾಗುತ್ತಿದ್ದವು.

ಕಾದರೊಳ್ಳಿಯ ಮುಂದೆ ಕಾದಿದರು ಜಂಗಮರು
ಕಾದಿ ಹಿಮ್ಮೆಟ್ಟಿ, ಸೈನ್ಯವನು। ಮುರುಗೋಡ
ಹಾದಿಯೊಳು ಮುರಿದ ಮಾಚಯ್ಯ || ಪದ್ಯ 90 ||
ತುಂಡು ಜಂಗಮದಂಡು ದಂಡನಾಯಕ ಮಾಚ
ಕಂಡ ಕಂಡಲ್ಲಿ ವೈರಿಗಳ। ಚಲ್ಲಿದರು
ಚಂಡು ಕೆಳಕೊಂಡ ಮರಿ ಅರಸ || ಪದ್ಯ91 ||
ಬೆನ್ನು ಹತ್ತಿದ ವೈರಿ ತಣ್ಣಗಾಯಿತು ಚೆದರಿ
ಮಣ್ಣುಗೂಡಿಸಿದ ಮಾಚಯ್ಯ। ಕೈಯೆತ್ತಿ
ಚಿನ್ನವುಳಿಸಿದನು ಲಿಂಗಿಗಳ || ಪದ್ಯ 92 ||

ವಿಚಾರಧಾರೆಯಲ್ಲಿ ಧರ್ಮಪಿತ ಬಸವಣ್ಣನವರ ಶಾಂತಿವಾದ ಸರಿಯೊ? ಮಡಿವಾಳ ಮಾಚಿದೇವರ ಹೋರಾಟವಾದ ಸರಿಯೊ? ಎರಡೂ ಸರಿ. " ನಾವಾಗಿ ಆಕ್ರಮಣಕ್ಕೆ ಮುಂದಾಗುವುದು ಬೇಡ. ಅದರಿಂದ ರಕ್ತಪಾತವಾಗಿ ಎಲ್ಲವು ಅಲ್ಲೋಲ ಕಲ್ಲೋಲವಾಗುತ್ತದೆ, ಮುಗ್ಧರ ಬಲಿಯಾಗುತ್ತದೆ. " ಎಂಬ ಬಸವಣ್ಣನವರ ವಾದವೂ ಸರಿ. "ಶತ್ರುವು ಆಕ್ರಮಣ ಮಾಡಲು ಬಂದಾಗ ಹೋರಾಡಿ ಆತ್ಮರಕ್ಷಣೆ ಮಾಡಿಕೊಳ್ಳುವುದೂ ಧರ್ಮವೇ" ಎಂಬ ಮಾಚಿದೇವರ ವಾದವೂ ಸರಿಯೆ! ಅದುವೇ ಬಸವಣ್ಣನವರೇ ಬೋಧಿಸಿದ ಗಣಾಚಾರ!!

ಡಿ. ಗುರುಮಲ್ಲಪ್ಪ, ದೊಡ್ಡಪುರ, ತಾಳವಾಡಿ, ತಮಿಳುನಾಡು.- ಆಗಸ್ಟ್ ಕಲ್ಯಾಣ ಕಿರಣದಲ್ಲಿ ಬಸವಣ್ಣನವರ ಜನನ 1134 ಮತ್ತು ಲಿಂಗೈಕ್ಯ 1196 ಎಂದಿರುವಿರಿ. ಡಾ||ಎಂ. ಎಂ. ಕಲಬುರ್ಗಿಯವರ ಪ್ರಕಾರ ಜನನ 1131, ಬಿ. ಪುಟ್ಟಸ್ವಾಮಯ್ಯನವರ ಪ್ರಕಾರ ಲಿಂಗೈಕ್ಯ 1167. ಬಿ. ಮಹಾದೇವಪ್ಪ ಅವರು ಬಸವಣ್ಣನವರ ಜನನ 1131 ಮತ್ತು ಲಿಂಗೈಕ್ಯ 1167 ಎಂದಿದ್ದಾರೆ. ನಿಮ್ಮ ಬರಹ ಬೇರೆಯೇ ಇದೆ. ಇವುಗಳಲ್ಲಿ ಸರಿ ಯಾವುದು?

★ ಕೆಲವು ಜನರ ತಲೆಯಲ್ಲಿ ಧರ್ಮಪಿತ ಬಸವಣ್ಣನವರು ಬದುಕಿದ್ದು ಕೇವಲ 36 ವರ್ಷ ಎಂಬ ಭ್ರಾಂತಿ ತುಂಬಿಕೊಂಡು ಬಿಟ್ಟಿದೆ. ಅವರು ಲಿಂಗೈಕ್ಯರಾದುದನ್ನು 1167 ಎಂದು ಸಹ ಗುರುತಿಸಿಕೊಂಡು 36 ವರ್ಷ ಮಾತ್ರ ಬದುಕಿದ್ದರು ಎಂದು ಭಾವಿಸಿ ಜನನವನ್ನು 1131ಕ್ಕೆ ನಿಲ್ಲಿಸುತ್ತಾರೆ.

ವೈಶಾಖ ಮಾಸದ ರೋಹಿಣಿ ನಕ್ಷತ್ರದಲ್ಲಿ ಹುಟ್ಟಿದರು ಎಂಬುದು ಕಾಲಜ್ಞಾನ ವಚನಗಳಲ್ಲಿ ಉಲ್ಲೇಖವಾಗಿದೆ. ಇನ್ನೊಂದು ವಿಶೇಷವೇನೆಂದರೆ ಧರ್ಮಪಿತರ ಜಯಂತಿಯ ಅಗತ್ಯವನ್ನರಿತು ಅಧಿಕೃತವಾಗಿ ಮತ್ತು ಸಾರ್ವಜನಿಕವಾಗಿ ಬಸವ ಜಯಂತಿಯನ್ನು ಶರಣ. ಹರ್ಡೇಕರ್ ಮಂಜಪ್ಪ ಮತ್ತು ಪೂಜ್ಯ ಲಿಂ|| ಮೃತ್ಯುಂಜಯ ಸ್ವಾಮಿಗಳು, ಧಾರವಾಡ

ಆಚರಿಸುವ ಮೊದಲಿಗೇ ಲಿಂಗಾಯತರಲ್ಲಿ ಸಾಂಪ್ರದಾಯಿಕವಾಗಿ ಆಚರಣೆಯಲ್ಲಿತ್ತು. ತಮಿಳುನಾಡಿನ ನೀಲಗಿರಿಯಲ್ಲಿರುವ ಲಿಂಗಾಯತರು ಬಸವನ ಹಬ್ಬ ಎಂದು ತಮ್ಮ ಮನೆಗಳಲ್ಲಿ ಆಚರಿಸುತ್ತಿದ್ದರಂತೆ. ಅದೇ ರೀತಿ ಆಂಧ್ರದ ಲಿಂಗಾಯತರು ಸಹ. ಆದ್ದರಿಂದ ವೈಶಾಖ ಮಾಸದ ರೋಹಿಣಿ ನಕ್ಷತ್ರದಲ್ಲಿ ಹುಟ್ಟಿದರು ಎಂಬುದು ಖಚಿತ. ಅಂದು ಅಕ್ಷಯ ತೃತೀಯ ಇದ್ದಿತು. ಈ ರೋಹಿಣಿ ನಕ್ಷತ್ರವು ಕೆಲವೊಮ್ಮೆ ದ್ವಿತೀಯಕ್ಕೂ ಬರುವುದುಂಟು.

ಅಯ್ಯಾ ಭಕ್ತಿಗೆ ಬೀಡಾದುದು ಕಲ್ಯಾಣ ಮೂವತ್ತಾರು ವರುಷ,
ಅಯ್ಯಾ ಅನುಭವಕ್ಕೆ ಶಿವಸದನವಾದುದು ಇಪ್ಪತ್ತೇಳು ವರುಷ,
ಅಯ್ಯಾ, ಹಿಂದಿನಂತನುಭವ ಹಿಂದಿನಂತೆ ಭಕ್ತಿಯಿಲ್ಲ-
ಮೂರು ಮಾಸದೊಳಗಾಗಿ.,
ಇಲ್ಲಿ ಆಡಲುಭಯವಿಲ್ಲ ಕೇಳಯ್ಯಾ, ಲಿಂಗದೇವಯ್ಯಾ. (ಬ. ವ. ದೀ. 1151.)

ಈ ವಚನವು ಬಹುದೊಡ್ಡ ದಾಖಲೆ. ಧರ್ಮಪಿತ ಬಸವಣ್ಣನವರು ಕಲ್ಯಾಣದಲ್ಲಿ ಇದ್ದುದು 36 ವರ್ಷ. ಆ ಅವಧಿಯಲ್ಲಿ ಅದು ಭಕ್ತಿಗೆ ಬೀಡಾಯಿತು. ಧರ್ಮ ಪ್ರಚಾರವು ಆಗಲೇ ಪ್ರಾರಂಭವಾಯಿತಾದರೂ ಅನುಭವ ಗೋಷ್ಠಿಗೆ ಸಾಮೂಹಿಕ ಸ್ವರೂಪ ಬಂದುದು 9 ವರ್ಷಗಳ ಬಳಿಕ. ಅನುಭವ ಮಂಟಪ ನಡೆದುದು 27 ವರ್ಷ.ಈ ವಚನಕ್ಕೆ ಪುಷ್ಟಿಯನ್ನು ಕೊಡುತ್ತದೆ. ಕಾಲಜ್ಞಾನದ ವಚನಗಳು ಬಸವಣ್ಣನವರು, ಕಲ್ಯಾಣವನ್ನು ಪ್ರವೇಶಿಸಿದ್ದು ವಿಕ್ರಮನಾಮ ಸಂವತ್ಸರದ ಶ್ರಾವಣ ಮಾಸದ ಸೋಮವಾರದಂದು (25-7-1160) ಅದು 1160 ನೆಯ ಇಸವಿ. ವರ್ಣಾಂತರ ವಿವಾಹದ ಬಳಿಕ ಕಲ್ಯಾಣವನ್ನು ತೊರೆದುದು ರಾಕ್ಷಸನಾಮ ಸಂವತ್ಸರ ಫಾಲ್ಗುಣ ಮಾಸದ ದ್ವಾದಶಿಯಂದು. 1196. ವಚನದಲ್ಲಿ ಬರುವ 36 ವರ್ಷ ಎಷ್ಟು ಚೆನ್ನಾಗಿ ಹೊಂದಿಕೆಯಾಗುತ್ತದೆ ನೋಡಿರಿ.

ಈ ಭಾರತೀಯ ಸಂವತ್ಸರಗಳನ್ನು ಇಂಗ್ಲೀಷ್ ತೇದಿಗೆ ಪರಿವರ್ತನೆ ಮಾಡುವುದೇ ಬಹಳ ಮುಖ್ಯ ಕೆಲಸ (An Indian Ephemeris Vol.3 ಎಂಬ ಗ್ರಂಥದಲ್ಲಿ. Swami Kannu Pillai ಎಂಬುವ ವಿದ್ವಾಂಸರು ಹೀಗೆ ಪರಿವರ್ತಿಸಿ ಕೊಟ್ಟಿದ್ದಾರೆ. ಅವರ ಲೆಕ್ಕಾಚಾರದ ಪ್ರಕಾರ ಜನನವಾದ ಆನಂದನಾಮ ಸಂವತ್ಸರ 1134, ಕಲ್ಯಾಣ ಪ್ರವೇಶವಾದ ವಿಕ್ರಮನಾಮ ಸಂವತ್ಸರ 1134. ಕಲ್ಯಾಣ ಪ್ರವೇಶವಾದ ವಿಕ್ರಮನಾಮ ಸಂವತ್ಸರ 1160, ನಿರ್ಗಮನವಾದ ರಾಕ್ಷಸನಾಮ ಸಂವತ್ಸರ 1196. ಆದ್ದರಿಂದ ಹೀಗೆ ಧರ್ಮಪಿತರ ಜೀವಿತಾವಧಿಯನ್ನು ಲೆಕ್ಕ ಮಾಡಬಹುದು. ಕಲ್ಯಾಣ ವಾಸ 36 ವರ್ಷ, ಮಂಗಳವೇಡೆ-5 ವರ್ಷ, ಕೂಡಲ ಸಂಗಮ-12 ವರ್ಷ, ಮನೆಯಲ್ಲಿ 9 ವರ್ಷ, ಒಟ್ಟು 62 ವರ್ಷ. 3 ತಿಂಗಳು, 2 ದಿವಸ. "ಡಾ|| ಎಂ.ಎಂ.ಕಲಬುರ್ಗಿಯವರು ಸಹ ನನ್ನ ವಿಚಾರಕ್ಕೆ ಅಂದರೆ ಬಸವಣ್ಣನವರು 1196 ರವರೆಗೆ ಇದ್ದರು ಎಂಬ ಬಗ್ಗೆ ಸಹಮತ ಹೊಂದಿದ್ದಾರೆ. " ಎಂದು ಡಾ|| ಬಾಡಾಲ ರಾಮಯ್ಯವರು ಹೇಳಿದರು. ಆದ್ದರಿಂದ ಹಿಂದೆ ಯಾವಾಗಲೊ ತಳೆದ ಅಭಿಪ್ರಾಯವನ್ನೇ ಸರಿಯೆಂದು ಇಟ್ಟುಕೊಳ್ಳಬಾರದು. ನಾವೂ ಮೊದಲು ಹಾಗೆಯೇ ತಿಳಿದಿದ್ದೆವು. ಹೊಸ ದಾಖಲೆಗಳು ಸಿಕ್ಕಂತೆ ವಿಚಾರಗಳು, ಲೆಕ್ಕಾಚಾರಗಳು ಬದಲಾಗುವುದು

ಸಹಜ. ಬಸವಣ್ಣನವರು ಲಿಂಗೈಕ್ಯರಾದ ಮೇಲೆ ಒಂದು ವರ್ಷಕ್ಕೆ(1197) ಆಂಧ್ರದ ಮಲ್ಲಿಕಾರ್ಜುನ ಪಂಡಿತಾರಾಧ್ಯರು ಶಿವೈಕ್ಯರಾಗಿದ್ದಾರೆ. ಇದನ್ನು ಒಂದು ಮಹತ್ವದ ದಾಖಲೆ ಎಂದು ಡಾ|| ಬಾಡಾಲ ರಾಮಯ್ಯ ಪ್ರತಿಪಾದಿಸುತ್ತಾರೆ.

ಸಿದ್ಧರಾಮ.ಶಿ.ಗೌಡಪ್ಪನವರು, ಬಿ.ಎ.3 ಬನಹಟ್ಟಿ.- ಪೂಜ್ಯರೇ,ಆಗಸ್ಟ್ ಕಲ್ಯಾಣ ಕಿರಣದಲ್ಲಿ ನನ್ನ ಪ್ರಶ್ನೆಗೆ ಉತ್ತರಿಸಿ, ಒಬ್ಬ ಜಂಗಮದ ಅಭಿಮಾನ ಎಂಬುದಕ್ಕೆ ಮಡಿವಾಳ ಮಾಚಿದೇವರು ಎಂದು ಹೇಳಿದ್ದೀರಿ. ನನಗೆ ಈ ವಿವರಣೆ ತೃಪ್ತಿ ನೀಡಲಿಲ್ಲ. ನನ್ನ ಅಭಿಪ್ರಾಯ ಹೀಗಿದೆ. ಶರಣರ ದೃಷ್ಟಿಯಲ್ಲಿ ಜಂಗಮರೆಂದರೆ ಅಲ್ಲಮಪ್ರಭುದೇವರು ಮಾತ್ರ. ಉಳಿದ ಶರಣರನ್ನು ಭಕ್ತ, ಮಹೇಶ ಇತ್ಯಾದಿ ಗೌರವಿಸಲಾಗಿದೆ. ಹರಳಯ್ಯ ಮಧುವರಸರನ್ನು ಜಂಗಮರೆಂದು ಕರೆಯಲು ಬರುವುದಿಲ್ಲ.

ಅಲ್ಲಮಪ್ರಭುದೇವರು ಶೂದ್ರಾತಿಶೂದ್ರ ಕುಲವಾದ ನಟುವರ ಜಾತಿಯಲ್ಲಿ ಹುಟ್ಟಿದ್ದರಿಂದ ಅವರು ಶೂನ್ಯಪೀಠಾಧಿಕಾರಿಯಾದಾಗ ಸಂಪ್ರದಾಯವಾದಿಗಳು ಸಿಟ್ಟುಗೊಂಡರು. ಒಬ್ಬ ಜಂಗಮ-ಅಲ್ಲಮಪ್ರಭುದೇವರ ಅಭಿಮಾನದಿಂದ ಅಂದರೆ ಬಸವಣ್ಣನವರು ಅವರನ್ನು ಎಲ್ಲ ಶರಣರ ಮೇಲೆ ಅಧಿಕಾರವಾಣಿಯಿಂದ ಮಾತನಾಡುವ ಸ್ಥಾನದಲ್ಲಿ ಕೂರಿಸಿದ್ದರಿಂದ ಕಲ್ಯಾಣ ಕ್ರಾಂತಿಯಾಯಿತು, ಶರಣರ ವಧೆಯಾಯಿತು. ಬಿಜ್ಜಳನ ವಧೆಯೂ ಆಯಿತು ಎಂದು ನನ್ನ ಅಭಿಪ್ರಾಯ.

★ ವಚನ ವಾಕ್ಯಗಳನ್ನು ಸರಿಯಾಗಿ ಓದಿರಿ. ನೀವು ವಿವರಣೆ ನೀಡಿರುವ ರೀತಿ ಬಸವಣ್ಣನವರಿಗೆ ತಿರುಗುಬಾಣವಾಗುತ್ತದೆ. ಅಲ್ಲಮ ಪ್ರಭುಗಳ ಮೇಲೆ ಬಸವಣ್ಣನವರಿಗೆ ಅತೀವ ಅಭಿಮಾನವಿತ್ತು. ಅದರಿಂದ ಶೂನ್ಯ ಪೀಠಕ್ಕೆ ಏರಿಸಿದರು. ಪ್ರಭುದೇವರು ಎಲ್ಲ ಶರಣರ ಮೇಲೆ ಅಧಿಕಾರವಾಣಿಯಿಂದ ಮಾತನಾಡುತ್ತಿದ್ದರು. ಹಾಗಾಗಿ ಸಂಪ್ರದಾಯವಾದಿಗಳು ಸಿಡಿದೆದ್ದರು ಎಂಬುದು ಹಾಸ್ಯಾಸ್ಪದ ವಿವರಣೆ. ಹಾಗಿದ್ದಲ್ಲಿ ಹರಳಯ್ಯ-ಮಧುವರಸ-ಶೀಲವಂತರ ಎಳೆಹೂಟೆ ಶಿಕ್ಷೆ ಏಕಾಗಬೇಕಿತ್ತು?

ಕಲ್ಯಾಣ ಕ್ರಾಂತಿಗೆ ಪ್ರಭುದೇವರ ಪೀಠಾರೋಹಣವು ಒಂದು ಕಾರಣವಾಗಿ ಇರಬಹುದಾದರೂ ಅದೇ ಪ್ರಮುಖ ಕಾರಣವಲ್ಲ. ಯಾವುದೇ ಕ್ರಾಂತಿಯ ಜ್ವಾಲೆ ಏಳಬೇಕಾದರೆ ಅದು ಒಮ್ಮೆಗೇ ಏಳದು.

1. ಧರ್ಮಪಿತರು ಸಮತಾವಾದ ಬೋಧಿಸಿದ್ದು, ಅನುಭವ ಮಂಟಪದೊಳಕ್ಕೆ ಎಲ್ಲರಿಗೂ ಪ್ರವೇಶ ನೀಡಿದ್ದು ಇವೆಲ್ಲ ಅಸಹನೆಯ ಅಲೆಗಳನ್ನು ಎಬ್ಬಿಸಿವೆ.

2. ದೇವಾಲಯಶಾಹಿ, ಪುರೋಹಿತಶಾಹಿ, ಸಂಸ್ಕೃತದ ಸಾರ್ವಭೌಮತ್ವ, ಜ್ಯೋತಿಷ್ಯ ಇತ್ಯಾದಿಗಳ ಬಗ್ಗೆ ಶರಣರು ನಕಾರಾತ್ಮಕ ಧೋರಣೆ ತಳೆದುದು ಪುರೋಹಿತರನ್ನು ಸಿಟ್ಟಿಗೇಳಿಸಿದ್ದವು. ಹೀಗಾಗಿ ಆಗಾಗ ಬಿಜ್ಜಳನಿಗೆ ದೂರು ಕೊಡುವುದು, ಎರಗಿವಿಯ ಮರುಳನಾದ ಬಿಜ್ಜಳ ವಿಚಾರಣೆ ನಡೆಸುವುದು ನಡೆದೇ ಇತ್ತು.

3. ಅಲ್ಲಮಪ್ರಭುದೇವರ ಪೀಠಾರೋಹಣವಾದಾಗ ಪ್ರತಿಭಟಿಸಿದವರು ವೈದಿಕ ಸಂಪ್ರದಾಯದ ಪುರೋಹಿತರಲ್ಲ; ಬ್ರಾಹ್ಮಣ ಮೂಲದಿಂದ ಹುಟ್ಟಿ, ನಂತರ ವೀರಶೈವರಾಗಿದ್ದ

ಜಂಗಮರು. ವೀರಶೈವ ಪಂಥದ ದೀಕ್ಷೆಯನ್ನು ವಿಪ್ರರು ಪಡೆದುಕೊಂಡಾಗ ಸನ್ಯಾಸಿಗಳನ್ನು ಜಂಗಮರೆಂದು, ಗೃಹಸ್ಥರನ್ನು ಮಾಹೇಶ್ವರರೆಂದು ಕರೆಯಲಾಗುತ್ತಿತ್ತು. ಈ ಬಗ್ಗೆ ನಾನೊಂದು ಸ್ವತಂತ್ರ ಕೃತಿಯನ್ನೇ ಬರೆದದ್ದೇನೆ. ಉತ್ತಮ ಜಾತಿಗಳಿಂದ ಬಂದ ಸನ್ಯಾಸಿಗಳು ಬೇಕಾದಷ್ಟು ಜನರು ಇದ್ದಾಗ ನಟುವರ ಕುಲದಲ್ಲಿ ಹುಟ್ಟಿದ ಅಲ್ಲಮ ಪ್ರಭುದೇವರನ್ನು ಗದ್ದುಗೆಗೆ ಏರಿಸಿದಾಗ ತಪ್ತರಾದ ಜಂಗಮರು ಅರ್ಥಾತ್ ಲಿಂಗೀ (ವೀರಶೈವ) ಬ್ರಾಹ್ಮಣರು ಊಟವನ್ನು ಮಾಡದೆ ಎದ್ದು ಹೋಗುವ ಪ್ರಸಂಗವನ್ನು ಶೂನ್ಯ ಸಂಪಾದನೆಯಲ್ಲಿ ಕಾಣುತ್ತೇವೆ. ಆದರೆ ಮಾಚಿದೇವರೇ ಆದಿಯಾಗಿ ಶರಣರು ಯಾರೂ ಈ ಮುನಿಸಿಗೆ ಸೊಪ್ಪು ಹಾಕುವ (ಇಂದಿನ ಲಿಂಗಾಯತರಂತೆ) ಮೂಢ ಭಕ್ತರಾಗಿರಲಿಲ್ಲ. ಪ್ರಭುದೇವರ ಪೀಠಾರೋಹಣವಾದುದು ವಿಶ್ವಾವಸು ಸಂವತ್ಸರದ (1185) ಚೈತ್ರ ಶುದ್ಧ ಪಾಡ್ಯ ಯುಗಾದಿಯಂದು ರೇವತಿ ನಕ್ಷತ್ರದಲ್ಲಿ, ಕಲ್ಯಾಣ ಕಾಂತ್ರಿಯಾಗಿ ಶರಣರ ವಧೆಯಾದುದು 1196ರಲ್ಲಿ. ಪ್ರಭುದೇವರು ಪೀಠಾರೋಹಣವಾದ ಮೇಲೆ 11 ವರ್ಷಗಳ ಕಾಲ ಅಧ್ಯಕ್ಷ ಪೀಠದಲ್ಲಿದ್ದರು. ಅಕ್ಕಮಹಾದೇವಿ ಬಂದಳು, ಚರ್ಚೆಯಾಯಿತು. ಆದ್ದರಿಂದ ಪ್ರಭುದೇವರ ಪೀಠಾರೋಹಣವೇ ಕಲ್ಯಾಣ ಕ್ರಾಂತಿಗೆ ಕಾರಣವಾಗಿದ್ದರೆ ಸ್ಫೋಟಕ್ಕೆ 11 ವರ್ಷ ಹಿಡಿಯುತ್ತಿತ್ತೆ ? ಒಂದು ವೇಳೆ ಅದೇ ಮುಖ್ಯ ಕಾರಣವಾಗಿದ್ದರೆ ಹರಳಯ್ಯ - ಮಧುವಯ್ಯ - ಶೀಲವಂತರ ಬಲಿದಾನ ಏಕಾಗಬೇಕಿತ್ತು ? ಮಾಚಿದೇವರ ವಚನದಲ್ಲಿ ಹರಳಯ್ಯ - ಮಧುವಯ್ಯಗಳ ಬಲಿದಾನ, ಜಗದೇವ - ಮಲ್ಲಣ್ಣ - ಬೊಮ್ಮಣ್ಣರ ಶೌರ್ಯ, ಬಿಜ್ಜಳನ ವಧೆ ಒಟ್ಟಾಗಿ ಪ್ರಸ್ತಾಪವಾಗಿವೆ.

ಸಂಪ್ರದಾಯವಾದಿಗಳ ಅಸಹನೆ ದಿನದಿನಕ್ಕೂ ಬೆಳೆಯುತ್ತ ಹೋಗಿ ಅತ್ಯಂತ ತೀಕ್ಷ್ಣ ಮತ್ತು ದಿಟ್ಟ ಆಚರಣೆಯಾದ ವರ್ಣಾಂತರ ವಿವಾಹ ನಡೆದಾಗ ಆ ಅಸಹನೆ ಸ್ಫೋಟಿಸಿದೆ ಎನ್ನುವುದೇ ಸೂಕ್ತ ವಿವರಣೆ. ಗೌಡಪ್ಪನವರು ಜಂಗಮದ ಅರ್ಥವನ್ನೇ ತಿಳಿಯದೆ ಹರಳಯ್ಯ - ಮಧುವಯ್ಯನವರು ಜಂಗಮರಲ್ಲ ಎಂದಿರುವುದು ಅವರ ಅಜ್ಞಾನಕ್ಕೆ ಕೈಗನ್ನಡಿಯಾಗಿದೆ. ಧರ್ಮಪಿತ, ಕ್ರಾಂತಿ ಪುರುಷ ಬಸವಣ್ಣನವರು ಪ್ರತಿಯೊಂದು ಪದಕ್ಕೂ ಒಂದು ಪರಿಕಲ್ಪನೆ (Concept) ಕೊಟ್ಟರು. ಮೊದಲು ಜಂಗಮ ಪದವು ಬ್ರಾಹ್ಮಣ ವೀರಶೈವ ಸನ್ಯಾಸಿ ಎಂದು ಜಾತಿವಾಚಕವಾಗಿತ್ತು. ಬಸವಣ್ಣನವರ ವ್ಯಾಖ್ಯಾನದಿಂದ ತತ್ವಾಧಾರಿತವಾಯಿತು. ಅದನ್ನೇ ಪ್ರಭುದೇವರು ಹೀಗೆ ಹೇಳುವುದು-

ಆದಿಯಲ್ಲಿ ನೀನೆ ಗುರುವಾದ ಕಾರಣ, ನಿನ್ನಿಂದ ಹುಟ್ಟಿತ್ತು ಲಿಂಗ.
ಆದಿಯಲ್ಲಿ ನೀನೆ ಲಿಂಗವಾದ ಕಾರಣ, ನಿನ್ನಿಂದ ಹುಟ್ಟಿತ್ತು ಜಂಗಮ.
ಆದಿಯಲ್ಲಿ ನೀನೆ ಜಂಗಮವಾದ ಕಾರಣ, ನಿನ್ನಿಂದ ಹುಟ್ಟಿತ್ತು ಪ್ರಸಾದ.
ಆದಿಯಲ್ಲಿ ನೀನೆ ಪ್ರಸಾದಿಯಾದ ಕಾರಣ, ನಿನ್ನಿಂದ ಹುಟ್ಟಿತ್ತು ಪಾದೋದಕ.
ಇಂತೀ ಗುರು ಲಿಂಗ ಜಂಗಮ ಪ್ರಸಾದ ಪಾದೋದಕ ಸ್ವರೂಪ
ನೀನೆಯಾದ ಕಾರಣ, ಜಂಗಮ ಪ್ರಾಣಿಯಾಗಿ ಸದಾಚಾರಿಯಾದೆ.
ಅದು ಕಾರಣ, ನೀನೆ ಸರ್ವಾಚಾರ ಸಂಪನ್ನನಾಗಿ
ಪೂರ್ವಾಚಾರಿ ನೀನೆಯಾದ ಕಾರಣ,

ಗುಹೇಶ್ವರಲಿಂಗದಲ್ಲಿ ಚಂದಯ್ಯಂಗೆ

ಲಿಂಗದ ನಿಜವ ತಿಳುಹಾ ಸಂಗನಬಸವಣ್ಣಾ ! -(ಅ.ಪ್ರ.ವ: 937)

ಆದ್ದರಿಂದ ಜಾತಿದೃಷ್ಟಿಯಿಂದ ಹರಳಯ್ಯ - ಮಧುವಯ್ಯ - ಮಾಚಯ್ಯ - ಕೇತಯ್ಯ ಮುಂತಾದವರು ಜಂಗಮರು ಅಲ್ಲದಿರಬಹುದು, ಬಸವ ತತ್ತ್ವದ ಪ್ರಕಾರ ಇವರೆಲ್ಲ ಮಹಾಜಂಗಮರು. ಆದ್ದರಿಂದ ಒಬ್ಬ ಜಂಗಮದ ಅಭಿಮಾನ ಎಂಬುದನ್ನು ವೀರಗಣಾಚಾರಿ ಮಡಿವಾಳ ಮಾಚಿದೇವರ ಸ್ವಾಭಿಮಾನ ಎಂದೇ ಅರ್ಥಮಾಡಬೇಕು. ಮಾಚಿದೇವರ ಶೌರ್ಯ ನಾಚಿಕೆ ಪಡುವ ವಿಷಯವಲ್ಲ, ಹೆಮ್ಮೆ ಪಡುವ ವಿಷಯ.

ವಿವೇಕ, ಗುಲಬರ್ಗಾ.- ಸರ್ಕಾರದ ಬೆಂಬಲ, ಬೃಹತ್ ಪಡೆ, ಶಸ್ತ್ರಾಸ್ತ್ರ ಎಲ್ಲ ಇದ್ದೂ ಒಬ್ಬ ಕಾಡುಗಳ್ಳನನ್ನು ಹಿಡಿಯುವ ಶಕ್ತಿ ಪೋಲೀಸ್ ಪಡೆ ಮತ್ತು ಎಸ್.ಟಿ.ಎಫ್‌ಗಳಿಗೆ ಇಲ್ಲವಲ್ಲ. ಇದು ನಾಚಿಕೆಗೇಡಿನ ಸಂಗತಿಯಲ್ಲವೆ ?.-

★ ಸಾಮಾನ್ಯ ನಾಗರಿಕರಿಗೆ ನಾಚಿಕೆಯಾಗುತ್ತಿದೆ. ಆದರೆ ಪೋಲೀಸ್ ಇಲಾಖೆಗೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಆಗುತ್ತಿಲ್ಲವಲ್ಲ ! ಅದಕ್ಕೆಂದೇ ಸನ್ಮಾನ್ಯ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಮತ್ತು ಗೃಹಮಂತ್ರಿ ಮಲ್ಲಿಕಾರ್ಜುನ ಖರ್ಗೆಯವರು ತಮ್ಮ ಪೋಲೀಸ್ ಇಲಾಖೆಯ ಶೌರ್ಯವನ್ನು ಕಲ್ಯಾಣಪರ್ವಕ್ಕೆ ಬಂದ ಮುದುಕರು ಮತ್ತು ಮಹಿಳೆಯರನ್ನು ಬಡಿಸುವ ಮೂಲಕ ಪ್ರದರ್ಶಿಸಿದ್ದಾರೆ.

ಶರಣೆ. ಜ್ಯೋತಿ, ವಕೀಲರು, ಬೆಂಗಳೂರು.- ಗುಜರಾತಿನ ಗೋಧ್ರಾದಲ್ಲಿ ಮುಸಲೀಮರು ಹಿಂದುಗಳನ್ನು ದಹಿಸಿದ್ದು ತಪ್ಪು. ಆದರೆ ಅವರ ವಿರುದ್ಧ ಹಿಂದುಗಳು ವಿಪರೀತ ಹಿಂಸಾಕೃತ್ಯ ಮಾಡಿದ್ದು ಇನ್ನೂ ತಪ್ಪು. ಇದಕ್ಕಿಂತ ನಾಚಿಕೆಗೇಡಿನ ಸಂಗತಿ ಎಂದರೆ ಸ್ವತಃ ನರೇಂದ್ರ ಮೋದಿ ಸರ್ಕಾರವು ನಿಸ್ಸಹಾಯಕರ ನೆರವಿಗೆ ಬರದೆ ಅಸಹಾಯಕರಿಂದ ಕರೆ ಬಂದಾಗ ಪೋಲೀಸರು ನಿಷ್ಕ್ರಿಯರಾಗಿ ಇರುತ್ತಿದ್ದುದ್ದು ಇನ್ನು ನಾಚಿಕೆಗೇಡಿನ ಸಂಗತಿಯಲ್ಲವೆ.? ಇದು ಆ ಸರ್ಕಾರದ ಹೇಡಿತನದ ಕೃತ್ಯ ಎಂದೆನಿಸದೆ ?

★ ನಮ್ಮ ದೇಶದಲ್ಲಿ ನ್ಯಾಯ-ಅನ್ಯಾಯ ಎಂಬ ಪದಕ್ಕೆ ಅರ್ಥವುಂಟೆ ? ಗೋಧ್ರಾದಲ್ಲಿ ಮೊದಲು ಮುಸಲೀಮರು ದುಡುಕಿದರು, ಅದಕ್ಕೆ ಹಿಂದುಗಳು ತೀವ್ರವಾಗಿ ಪ್ರತಿಕ್ರಿಯಿಸಿದರು. ಪೋಲೀಸರು ನಿಷ್ಕ್ರಿಯರಾಗಿದ್ದರು. ಇದೆಷ್ಟೋ ಪಾಡು. ನಮ್ಮ ಹೆಮ್ಮೆಯ ಕರ್ನಾಟಕದ ಮುಖ್ಯಮಂತ್ರಿ, ಗೃಹಮಂತ್ರಿ, ಡಾ॥ ಮಲಕರೆಡ್ಡಿ ಮತ್ತು ಭೀಮಣ್ಣ ಖಂಡ್ರೆಯಂಥ ರಾಜಕಾರಣಿಗಳ ಪ್ರಚೋದನೆಯಿಂದ ಹಿಂಸೆ ಎಂದರೇನೂ ಗೊತ್ತಿಲ್ಲದ ಶ್ರದ್ಧೆ - ಭಕ್ತಿಗಳ ಸಾತ್ವಿಕ ಶರಣರನ್ನು ಪೋಲೀಸರು ಕಲ್ಯಾಣ ಪರ್ವಕ್ಕೆ ಬರದಂತೆ ತಡೆದರು, ಬಂದ ಮುಪ್ಪಿನವರನ್ನು ಸಹ ದನಗಳನ್ನು ಬಡಿದಂತೆ ಬಡಿದರು. ಈ ದೃಷ್ಟಿಯಿಂದ ನರೇಂದ್ರ ಮೋದಿಗಿಂತ ಎಸ್.ಎಂ. ಕೃಷ್ಣ ಶ್ರೇಷ್ಠರಲ್ಲವೆ ? ಗುಜರಾತಿನ ನಿಷ್ಕ್ರಿಯರಾಗಿ ನಿಂತು ನೋಡುತ್ತಿದ್ದ ಪೋಲೀಸ್ ಅಧಿಕಾರಿಗಳದು ಹೇಡಿತನವಾದರೆ ಕಲ್ಯಾಣದಲ್ಲಿ ಮುಗ್ಧರನ್ನು ಹಿಂಸಿಸಿದ ಅಧಿಕಾರಿಗಳದು ಮತ್ತುಅವರ ಹಿಂದಿನ ಸರ್ಕಾರದ ಕೆಲಸ ಇನ್ನೂ ಹೇಡಿತನದ್ದಲ್ಲವೆ? ಆದ್ದರಿಂದ ಅವರದು ನಾಚಿಕೆಗೇಡು ಯಾಕೆ ಅನುತ್ತೀರಾ ? ಇವರ

ಶೌರ್ಯದ ಬಗ್ಗೆ ಹೆಮ್ಮೆ ಪಡಿರಿ.

ಸದಾಶಿವ. ಸಾ. ಹಚಡದ, ಬಿ.ಎ- 3, ಶೇಗುಣಸಿ.

ಪ್ರಶ್ನೆ 1.- ಆಯಾ ದೇಶ, ಕಾಲ, ಪರಿಸರಕ್ಕೆ ತಕ್ಕಂತೆ ಸೃಷ್ಟಿಕರ್ತ ತನ್ನ ಪ್ರತಿನಿಧಿಗಳನ್ನಾಗಿ ಬುದ್ಧ, ಮಹಾವೀರ, ಮೊಹಮ್ಮದ್, ಬಸವಣ್ಣನವರು ಮುಂತಾದ ಪ್ರವಾದಿಗಳನ್ನು ಕಳಿಸಿದನು. ಆದರೂ ಈ ಜಗತ್ತು ಪೂರ್ಣ ಸುಧಾರಣೆ ಹೊಂದಲಿಲ್ಲವೇಕೆ ?

★ ಲೋಹ ಚುಂಬಕದೊಡನೆ ತಾಡನ ಹೊಂದಿದ ಕಬ್ಬಿಣವು ತಾನೂ ಆ ಗುಣವನ್ನು ಪಡೆದುಕೊಳ್ಳುತ್ತದೆ. ಅದೇ ರೀತಿ ಈ ಮಹಾಪುರುಷರ ಸಂದೇಶವನ್ನು ನಿಜವಾಗಿಯೂ ಅರಿತು, ಅಳವಡಿಸಿಕೊಂಡವರು ಪ್ರಾಮಾಣಿಕ ಭಕ್ತರು, ಸಜ್ಜನರೂ ಆಗಿರುವರು. ಹಾಗೆ ಪಡೆಯದವರು ಪರಿವರ್ತನೆ ಹೊಂದರು. ಇನ್ನು ಕೆಲವರು ಆ ಧರ್ಮದಲ್ಲಿ ಹುಟ್ಟಿದ್ದರೂ ಆ ಪವಿತ್ರ ಸಂದೇಶಗಳನ್ನು ತಿಳಿದೇ ಇರುವುದಿಲ್ಲ. ಹಾಲಿನ ಬಿಂದಿಗೆಯ ಮೇಲೆ ಮಜ್ಜಿಗೆಯ ಬಿಂದಿಗೆಯನ್ನು ಇಟ್ಟಂತೆ ಇವರ ಭಕ್ತಿ. ಒಂದೆರಡು ಹನಿ ಮಜ್ಜಿಗೆ ಹಾಲಿನಲ್ಲಿ ಬಿದ್ದರೂ ಹಾಲು ಹೆಪ್ಪಾಗಿಯೇ ಆಗುತ್ತದೆ. ಅದೇ ರೀತಿ ಬಹಳ ಜನ. ಹೀಗಾಗಿ ಪೂರ್ಣ ಸುಧಾರಣೆಗೆ ಸಮಯ ಹಿಡಿಯುತ್ತದೆ.

ಪ್ರಶ್ನೆ- 2.- ನೀವು ಸಮಸ್ಯೆ-ಸಮಾಧಾನದಲ್ಲಿ ಉತ್ತರಿಸುವ ರೀತಿ ನಮಗೆಲ್ಲ ಬಹಳ ಹಿಡಿಸಿದೆ. ನಿಮ್ಮ ಈ ಪ್ರತಿಭೆ, ವಾಕ್ ಚಾತುರ್ಯ ಮತ್ತು ಬರೆಯುವ ಶೈಲಿ ಮೆಚ್ಚುಗೆ ತಂದಿವೆ. ಈ ಪ್ರತಿಭೆ ನಿಮಗೆ ಪ್ರಯತ್ನದಿಂದ ಬಂದಿದೆಯೋ. ಆತ್ಮ ಸಾಕ್ಷಾತ್ಕಾರದಿಂದಲೋ ?

★ ದೇವ ಕಾರುಣ್ಯ (Grace of God) ಮತ್ತು ಪುರುಷ ಪ್ರಯತ್ನ (Human effort) ಇವೆರಡೂ ವ್ಯಕ್ತಿಯ ವಿಕಾಸಕ್ಕೆ ಅತ್ಯಗತ್ಯ. ಕೇವಲ ಪ್ರಯತ್ನದಿಂದಲೇ ಎಲ್ಲವೂ ಸಾಧ್ಯವಿಲ್ಲ. ಅಥವಾ ದೇವ ಕಾರುಣ್ಯವಿದ್ದರೂ ಮುಂದೆ ಹೆಜ್ಜೆ ಇಡದಿದ್ದರೆ ಏನೂ ಸಾಧ್ಯವಾಗದು. ದೇವನಲ್ಲಿ ವಿಶ್ವಾಸವಿಟ್ಟು ಪ್ರಯತ್ನಶೀಲರಾದರೆ ಇಟ್ಟುಕೊಂಡ ಗುರಿಯನ್ನು ಸಾಧಿಸಬಹುದು. ಪ್ರಯತ್ನದಲ್ಲಿ ಅಧ್ಯಯನ, ಚಿಂತನೆ ಸೇರಿರುತ್ತವೆ.

ಓರ್ವ ಆಧ್ಯಾತ್ಮಿಕ ಪಥಿಕಳು, ಕೆಂಗೇರಿ ಉಪನಗರ.- ಇಷ್ಟಲಿಂಗದಲ್ಲಿ ನಿಷ್ಠೆಯನ್ನು ಬೆಳೆಸಿಕೊಂಡು ಹೆಚ್ಚು ಹೆಚ್ಚು ತ್ರಾಟಕ ಯೋಗ ಮಾಡುವುದು ಒಳ್ಳೆಯದೋ ? ಗುರು ಬಸವಣ್ಣನವರಲ್ಲಿ ಶ್ರದ್ಧೆ ಬೆಳೆಸಿಕೊಂಡು ಪೂಜಾವ್ರತ ಮುಂತಾದುವನ್ನು ಹೆಚ್ಚು ಮಾಡುವುದು ಒಳ್ಳೆಯದೋ ?

★ ಬಸವ ಭಕ್ತಿ - ಇಷ್ಟಲಿಂಗ ನಿಷ್ಠೆ ಇವೆರಡೂ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಗುರು ಬಸವಣ್ಣನವರೆಂದರೆ ತಾಯಿಯಂತೆ, ಲಿಂಗಯ್ಯ ತಂದೆ ಇದ್ದಂತೆ. ಇವರಲ್ಲಿ ಯಾರನ್ನು ಕಡಿಮೆ ಪ್ರೀತಿಸಲು ಸಾಧ್ಯ ? ಬಸವ ಭಕ್ತಿ ಅಧಿಕಗೊಂಡಂತೆ ಲಿಂಗನಿಷ್ಠೆ ಗಟ್ಟಿಗೊಳ್ಳುವುದು. ಆದ್ದರಿಂದ ಇಬ್ಬರನ್ನೂ ಆರಾಧಿಸಬೇಕು. ಭಕ್ತಿ - ಕೃತಜ್ಞತೆಯ ದೃಷ್ಟಿಯಿಂದ ಬಸವಾರ್ಚನೆ ಮಾಡಿ, ಸಾಧನಾ ದೃಷ್ಟಿಯಿಂದ ಹೆಚ್ಚೆಚ್ಚು ತ್ರಾಟಕಯೋಗ ಮಾಡಬೇಕು.

ಎಸ್.ಬಿ. ಮಲ್ಲಪ್ಪಗೌಡ, ಆಲಗುಡ, ತಾ-ಬಸವ ಕಲ್ಯಾಣ.- ಗುಲ್ಬರ್ಗಾದ ನಮ್ಮ ಗೆಳೆಯರು ಅನ್ನುತ್ತಿದ್ದರು, ಮಾತಾಜಿಯವರ ಕಾರ್ಯಕ್ರಮದಲ್ಲಿ ಸಭಾಮಂಟಪ

ಬೆಳೆಯುತ್ತಿದೆ. ಆದರೆ ವೇದಿಕೆ ಚಿಕ್ಕದಾಗುತ್ತಿದೆ ಅಂತ. ಈ ಬಗ್ಗೆ ನಿಮ್ಮ ಅನಿಸಿಕೆ ಏನು ?

★ ನಿಮ್ಮ ಮಿತ್ರರು ಎಷ್ಟು ಸೂಕ್ಷ್ಮ ಗ್ರಾಹಿಗಳು,ಬುದ್ಧಿವಂತರು ಆಗಿದ್ದಾರಲ್ಲ ಎಂದು ಹೆಮ್ಮೆ ಎನಿಸಿದೆ. ಕಲ್ಯಾಣಪರ್ವದ ವೇದಿಕೆ ಪರ್ವದ ವೇದಿಕೆ ಮತ್ತುಪೆಂಡಾಲ್ ಎರಡೂ ದೊಡ್ಡವೇ ಇದ್ದವು. ಆದರೆ ಪೋಲೀಸರು ಕೆಲವು ದುಷ್ಟರಾಜಕಾರಣಿಗಳು ಮತ್ತು ಸ್ವಾಮಿಗಳಿಂದ ಪ್ರಚೋದಿತರಾಗಿ ಭವ್ಯವಾಗಿದ್ದ ವೇದಿಕೆ ಮತ್ತು ಮಂಟಪದಲ್ಲಿ ಕಾರ್ಯಕ್ರಮ ಮಾಡಕೊಡದೆ ರಣಹದ್ದುಗಳಂತೆ ತಾವೇ ಮಂಟಪವನ್ನು ಆಕ್ರಮಿಸಿಕೊಂಡು ಕುಳಿತಿದ್ದರು.

ಅದೇನೆ ಇರಲಿ ನಿಮ್ಮ ಮಿತ್ರರ ಗ್ರಹಿಕೆಯಂತೆ ನಮ್ಮ ಆಶಯವಿದೆ. ಬಹುಪಾಲು ಕಾರ್ಯಕ್ರಮಗಳಲ್ಲಿ ವೈಭವಪೂರ್ಣ ಬೃಹತ್ ವೇದಿಕೆ ಇರುತ್ತದೆ. ಬರೀ ರಾಜಕೀಯ ಧುರೀಣರು ಕುಳಿತಿರುತ್ತಾರೆ. ಮನಸ್ಸಿಗೆ ಬಂದಂತೆ ಮಾತನಾಡುತ್ತಾರೆ. ಜನರೆಲ್ಲ ಗುರುಗಳ ಬಾಯಿಯಲ್ಲಿ ಯಾವ ದೈವೀಸಂದೇಶ, ಮಾರ್ಗದರ್ಶನ ಬರುವುದೋ ಎಂದು ಕಾತುರದಿಂದ ಕಾಯ್ದಿದ್ದರೂ ಅವರು ಕಡೆಯಲ್ಲಿ ಆಶೀರ್ವಚನವನ್ನು ಚುಟುಕಾಗಿ ಮಾಡಿ ಮುಗಿಸುತ್ತಾರೆ. ಇದರಿಂದಾಗಿ ಜನರಲ್ಲಿ ಭಕ್ತಿ-ಶ್ರದ್ಧೆ ಬೆಳೆಯುವುದೇ ಇಲ್ಲ. ಒಬ್ಬರು ಬಿತ್ತಿದ್ದನ್ನು ಇನ್ನೊಬ್ಬರು ಹರಗುತ್ತಿರುತ್ತಾರೆ. ಒಂದು ಕಾರ್ಯಕ್ರಮದಲ್ಲಿ ಭಾಗಿಯಾದರೆ ಜನರು ಅಲ್ಲಿಂದ ಹೋಗುವಷ್ಟರಲಿ ಕನಿಷ್ಟ ಒಂದೆರಡು ತತ್ವಗಳನ್ನಾದರೂ ಅರಿಯಬೇಕು ಪೆಂಡಾಲ್ ಬಹಳ ಭವ್ಯವಾಗಿ ಅರಮನೆಯಂತ್ತಿತ್ತು ಎಂದೋ ಎಂಥಾ ಊಟ ಹಾಕಿದರು! ಲಾಡು ಮೇಲೆ ಕೈಗೆ ಮೆತ್ತುವಷ್ಟು ತುಪ್ಪ ಸುರಿದರು ಎಂದೋ ಸ್ವಾಮಿಗಳು ಥಳಥಳ ಹೊಳೆಯುವ ಉಂಗುರ ಹಾಕಿದ್ದರು ಕಿರೀಟ ಹೊಳೆಯುತ್ತಿತ್ತು ಎಂದು ಅಂದುಕೊಂಡು ಹೋದರೆ ಏನು ಪ್ರಯೋಜನ? ಅದಕ್ಕಾಗಿ ನಾವು ಬಸವತತ್ವದಲ್ಲಿ ಪಳಗಿದವರನ್ನು ಆಹ್ವಾನಿಸುತ್ತೇವೆ. ವಿಚಾರಶೀಲ ಅತಿಥಿಗಳನ್ನು ಆಹ್ವಾನಿಸಿ ಅವರಿಗೂ ತಮ್ಮ ವಿಚಾರ ಹೇಳಲು ಸಮಯ ಸಿಗುವಂತೆ ಮಾಡುತ್ತೇವೆ. ಇದರಿಂದಾಗಿಯೇ ವೇದಿಕೆ ಚಿಕ್ಕದಾದರು ಜನ ಕುಳಿತುಕೊಳ್ಳುವ ಸಭಾ ಮಂಟಪ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ.

ಮರಿಬಸಪ್ಪ, ಧಾರವಾಡ.- ಬಸವಧರ್ಮ ಸಂಸತ್ ಎಂಬ ಒಂದು ತತ್ವನಿಷ್ಠ ಶರಣರ ಸಮೂಹವನ್ನು ರೂಪಿಸಲು ಬಯಸಿದ್ದೀರಿ. ಅದಕ್ಕೆ ಹೊಸ ಶರಣರನ್ನು ಈಗ ಸೇರ್ಪಡೆ ಮಾಡಿಕೊಳ್ಳತ್ತಲಿಲ್ಲ. ಈಗ ಅದು ಎಲ್ಲಿ ?.

★ ಲಿಂಗಾಯತ ಸಮಾಜಕ್ಕೆ ತತ್ವನಿಷ್ಠೆ ಕಲಿಸುವುದು ಕಷ್ಟಸಾಧ್ಯದ ಮಾತು. ಶುದ್ಧ ಶರಣ ಮಾರ್ಗಿಗಳನ್ನು,ಸಂಘಟಕರನ್ನು, ಬಸವತತ್ವ ಪ್ರಚಾರಕರನ್ನು ಈ ಹೆಸರಿನಲ್ಲಿ ಆಯ್ದುಕೊಳ್ಳುವ ಆಕಾಂಕ್ಷೆ ನನ್ನದಿತ್ತು. ಅವರ ಗುಣ, ಸಾಧನೆ, ತತ್ವನಿಷ್ಠೆ ನೋಡಿ ಆಯ್ಕೆ ಮಾಡಿಕೊಳ್ಳುತ್ತಿದ್ದೆ. ಆದರೆ ಕೆಲವರು ಪ್ರಚಾರಪ್ರಿಯರು ತಮ್ಮನ್ನು ತೆಗೆದುಕೊಳ್ಳುವಂತೆ ಅವರಿವರ ಮೂಲಕ ಒತ್ತಾಯ ತರತೊಡಗಿದರು. ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ಮಾಡಿಕೊಂಡು, ತೆಗೆದುಕೊಳ್ಳದಿದ್ದರೆ ಸಂಘಟನೆಯನ್ನೇ ಒಡೆಯಲು ಆರಂಭಿಸಿದ್ದರು. ಅಂಥ ಒಬ್ಬರು ಸದಸ್ಯರು ಇಷ್ಟಲಿಂಗವನ್ನೇ ಧರಿಸಿಲ್ಲ. ಎಂಬುದು ತಿಳಿದಾಗ ಆಘಾತವಾಯಿತು. ನಿಜವಾದ ಶರಣರು ಯಾವ ಸ್ಥಾನವನ್ನೂ ಬಯಸರು; ಪ್ರಚಾರಪ್ರಿಯರು ಬಂದು ಸೇರಿಕೊಂಡು ಮೂಲ ಉದ್ದೇಶಕ್ಕೆ

ಚ್ಯುತಿ ತರುವರು ಎಂದು ಆ ಉಸಾಬರಿಯನ್ನು ಕೈಬಿಟ್ಟೆ.

ಚನ್ನಗೌಡರು, ಧಾರವಾಡ.- ಧಾರವಾಡದಲ್ಲಿ ಶ್ರಾವಣ ಮಾಸದ ಒಂದು ದಿನ ಒಬ್ಬರ ಮನೆಯಲ್ಲಿ ಅನುಭವ ಗೋಷ್ಠಿಯಿತ್ತು. ದೊಡ್ಡ ದೊಡ್ಡ ಲಿಂಗಾಯತ ಸಾಹಿತಿಗಳು ಬಂದಿದ್ದರು. ನಮ್ಮ ಧರ್ಮವು ಲಿಂಗಾಯತ ಎಂಬುದೇ ಸರಿ; ಇದು ವೀರಶೈವವಲ್ಲ. ಜನ ಜೀವನದಲ್ಲಿ ಲಿಂಗಾಯತ ಪದವೇ ರೂಢಿಯಿತ್ತು. ವಿಶ್ವವಿದ್ಯಾಲಯ ಮಟ್ಟದಲ್ಲಿ ಸಾಹಿತ್ಯದಲ್ಲಿ ವೀರಶೈವ ಬಳಸಿ ಬಳಸಿ ಹೆಚ್ಚು ಪ್ರಚಾರಕ್ಕೆ ತಂದೆವು. ಇನ್ನು ಮುಂದೆ ಈ ತಪ್ಪು ಮಾಡಬಾರದು ಎಂದು ಅವರವರೇ ಚಿಂತಿಸಿದರು. ಒಬ್ಬ ಸಾಹಿತಿಗಳು ನಿಮ್ಮ ಹೆಸರನ್ನು ಪ್ರಸ್ತಾಪಿಸಿದರು. ಆದರೆ ಇನ್ನಿತರರು ಹೆಚ್ಚು ನಿಮ್ಮ ವಿಷಯಕ್ಕೆ ಒತ್ತುಕೊಡಲಿಲ್ಲ . ಈ ಬಗ್ಗೆ ನಿಮ್ಮ ಅನಿಸಿಕೆ ಏನು ?

★ ನಿಮ್ಮ ಈ ವರದಿ ಕೇಳಿ ನಮಗೆ ಅದೆಷ್ಟು ಸಂತೋಷವಾಗಿದೆ ಎಂಬುದನ್ನು ವಿವರಿಸಲು ಸಾಧ್ಯವಿಲ್ಲ. ನಮ್ಮ ನಿಲುವು ಸತ್ಯ ಆಧಾರಿತ, ದೃಢ,ಆದ್ದರಿಂದ ಯಾರು ಮೆಚ್ಚಲಿ-ಬಿಡಲಿ, ಒಪ್ಪಲಿ ಒಪ್ಪದಿರಲಿ ನಾವು ಹೇಳುತ್ತಲೇ ಇರುತ್ತೇನೆ. ನಾವು ಹೇಳಿದ್ದೇವೆ ಎಂದು ಅವರು ಪ್ರಾಮಾಣಿಕವಾಗಿ ಉಲ್ಲೇಖಿಸದಿದ್ದರೂ ಚಿಂತೆ ಇಲ್ಲ. ಸ್ವಾಮಿಗಳು ಸಾಹಿತಿಗಳು ಸತ್ಯವನ್ನು ಅರಿತು ಪ್ರತಿಪಾದಿಸಿದರೆ ಸಾಕು. ಬಸವಣ್ಣನವರು ಗುರು, ಅವರೇ ಧರ್ಮಗುರು, ಅವರಿಗೆ ವ್ಯಕ್ತಿ ಗುರುವಿಲ್ಲ, ಅವರು ಸ್ವಯಂಕೃತರು, ಅವರೇ ಇಷ್ಟಲಿಂಗ ಜನಕ ಇತ್ಯಾದಿ ಸತ್ಯವನ್ನು ಹೇಳಿದಾಗಲೆಲ್ಲ ಮೊದಲು ವಿರೋಧಿಸಿದ , ಒಪ್ಪದೆ ಇದ್ದ ವಿರಕ್ತ ಸ್ವಾಮಿಗಳು ಸಹ ಈಗ ಒಬ್ಬೊಬ್ಬರೇ ಒಪ್ಪುತ್ತಲಿದ್ದಾರೆ. ಇದರಿಂದ ನಮ್ಮ ಹಂಬಲ ಪೂರ್ಣಗೊಳ್ಳುತ್ತಲಿದೆ.

ಬಸವರಾಜ.ಶಿ.ಹೊರಟ್ಟಿ,ಬಿ.ಎ.,ಶೀಗುಣಸಿ.- ನಾವು ಕೂಡಲ ಸಂಗಮಕ್ಕೆ ಶರಣ ಮೇಳದಲ್ಲಿ ಭಾಗಿಯಾಗಲು ಬಂದು ಹಾಡಿಪಾಡಿ ಪ್ರಾರ್ಥಿಸಿ ಪೂಜಿಸಿ ಜ್ಞಾನದ ಬುತ್ತಿಯನ್ನು ಕಟ್ಟಿಕೊಂಡು ಬರುತ್ತೇವೆ. ತಿರುಪತಿಗೆ ಹೋದವರು ತಲೆ ಬೋಳಿಸಿಕೊಂಡು ಬರುತ್ತಾರೆ. ಎಷ್ಟು ವಿಚಿತ್ರವಲ್ಲವೆ ?.

★ಹೌದು, ತಿರುಪತಿ ವೆಂಕಟಪ್ಪನ ಭಕ್ತರು ತಲೆ ಬೋಳಿಸಿಕೊಂಡು ನಾಮ ಹಾಕಿಸಿಕೊಂಡು ಬರುತ್ತಾರೆ. ಶರಣ ಮೇಳಕ್ಕೆ ಬಂದ ಬಸವಭಕ್ತರು ತಲೆ ಬೆಳೆಸಿಕೊಂಡು ಅರ್ಥಾತ್ ಜ್ಞಾನವನ್ನು ಸಂಪಾದಿಸಿಕೊಂಡು ಬಸವರಕ್ಷೆ ಎಂಬ ಸ್ಕಾರ್ಫ್ ಹೊದ್ದು ಬರುವರು. ತಿರುಪತಿ ತಿಮ್ಮಪ್ಪ ಬಲು ಪಕ್ಕಾ ಧೂರ್ತ. ವಾಮನನು ಮೂರ್ಖ ಭಕ್ತ ಬಲಿ ಚಕ್ರವರ್ತಿಯಿಂದ ದಾನಪಡೆದು ಅವನನ್ನು ಪಾತಾಳಕ್ಕೆ ತುಳಿದಂತೆ ಕಾಣಿಕೆ ಕೊಟ್ಟ ಭಕ್ತರಿಗೆ ತಲೆ ಬೋಳಿಸಿ, ನಾಮ ಹಾಕಿ ಕಳಿಸುವ ಕಡು ಜಾಣ!

ರಾಜಮಣಿ ಮಲ್ಲಿಕಾರ್ಜುನಪ್ಪ.- ಒಬ್ಬರು ಲಿಂಗಪೂಜೆಯ ಹಾಡುಗಳು ಎಂಬ ಧ್ವನಿ ಸುರುಳಿ ಮಾಡಿದ್ದಾರೆ ಅದರಲ್ಲಿ ಲಿಂಗಪೂಜೆಯ ವಿವರವಿದೆ. ಅದರಲ್ಲಿ ನಿನಗೆ ಕನ್ನಡಿಯ ತೋರುವೆ. ಭೇರಿ ಕಹಳಾರವ ಮುಂತಾಗಿ ಮಾಡಿ ಪೂಜಿಸುವೆ ಎಂದೆಲ್ಲ ಇದೆ. ಸಾಮಾನ್ಯವಾಗಿ ಲಿಂಗಾಯತರು ಹೀಗೆಲ್ಲ ಪೂಜಿಸುವುದಿಲ್ಲ. ಹಾಗಾದರೆ ನಮ್ಮ ಪೂಜಾವಿಧಾನ ತಪ್ಪೆ ?

★ ಸ್ಥಾವರಲಿಂಗ ಅರ್ಥಾತ್ ಶಿವನ ಪ್ರತೀಕವಾದ ಶಿವಲಿಂಗಪೂಜೆಯಲ್ಲಿ ಅಷ್ಟವಿಧಾರ್ಚನೆ ಮತ್ತು ಷೋಡಶೋಪಚಾರ ಎರಡೂ ಇರುತ್ತವೆ. ಗುರು ಬಸವಣ್ಣನವರು

ಕೊಟ್ಟ ಸೃಷ್ಟಿಕರ್ತನ ಕುರುಹಾದ ಇಷ್ಟಲಿಂಗದ ಅರ್ಚನೆಯಲ್ಲಿ ಅಷ್ಟವಿಧಾರ್ಚನೆ ಮಾತ್ರ ಇರುತ್ತದೆ. ಷೋಡಷೋಪಚಾರ ಇರುವುದಿಲ್ಲ. ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ, ಜಂಗಮಕ್ಕೆ ಷೋಡಷೋಪಚಾರ, ಇದುವೇ ಬಸವ ಧರ್ಮ! ಆದ್ದರಿಂದ ಇಷ್ಟಲಿಂಗಯೋಗವು ಶಾಂತಪರಿಸರದಲ್ಲಿ ತ್ರಾಟಕ ಯೋಗಾಧಾರಿತವಾಗಿರುವುದರಿಂದ ಕಹಳೆ, ಭೇರಿ, ಜಾಗಟೆಗಳಿಗೆ ಅಲ್ಲಿ ಏನೂ ಕೆಲಸವಿಲ್ಲ. ನಮ್ಮ ಸಮಾಜದ ದುರ್ದೈವ ಅನೇಕ ಮಠಾಧೀಶರು, ಸಾಹಿತಿಗಳಿಗೆ ಸ್ಥಾವರಲಿಂಗ-ಇಷ್ಟಲಿಂಗಗಳ ವ್ಯತ್ಯಾಸವೇ ತಿಳಿಯದು.

ಗುರುಮಲ್ಲೇಶಪ್ಪ,ದೊಡ್ಡಿಂದುವಾಡಿ,ಕೊಳ್ಳೇಗಾಲ.- ನಮ್ಮ ಭಾಗದ ಜನಪ್ರಿಯ ನಾಯಕ ಹೆಚ್.ನಾಗಪ್ಪನವರನ್ನು ದಂತ ಚೋರ ವೀರಪ್ಪನ್ ಅಪಹರಿಸಿದಾಗ ಅಪಹೃತರ ಕುಟುಂಬದವರನ್ನು ಸಂತೈಸಲು ವೈದ್ಯಕೀಯ ಶಿಕ್ಷಣ ಖಾತೆ ಸಚಿವ ಡಾ॥ ಮಲಕರೆಡ್ಡಿ ಬಂದಿದ್ದರು ಯಾರೋ ಒಬ್ಬರು ಕೇಳಿದ ಪ್ರಶ್ನೆಗೆ ಅಸಹನೆಯಿಂದ , ಉದ್ಧಟನದ ಉತ್ತರ ಕೊಟ್ಟರು. ಆಗ ಸಿಟ್ಟಿಗೆದ್ದ ಜನರು ಅವರ ಮೇಲೆ ಹಲ್ಲೆ ಮಾಡಿ ಅಕ್ಷರಶಃ ಎಳೆದಾಡಿ ಬಿಟ್ಟರು. ಪೋಲೀಸರು ಅವರನ್ನು ಪಾರು ಮಾಡಿ ಕರೆದೊಯ್ದು ಕಾರಿನಲ್ಲಿ ಕೂರಿಸಿದರು. ಕಲ್ಯಾಣಪರ್ವಕ್ಕೆ ನಮ್ಮ ತಾಲ್ಲೋಕಿನಿಂದ ಹೋಗಿ ಪೆಟ್ಟುತಿಂದು ನಿರಾಶರಾಗಿ ಬಂದ ಅನೇಕ ಶರಣರು ಕಲ್ಯಾಣಪರ್ವದಲ್ಲಿ ನಡೆದ ಪೋಲೀಸ್ ದೌರ್ಜನ್ಯದಲ್ಲಿ ಡಾ॥ ಮಲಕರೆಡ್ಡಿಯವರ ಕೈವಾಡ ಪ್ರಮುಖವಾಗಿತ್ತು ಎಂದು ಹೇಳುತ್ತಿದ್ದರು. ಅದರ ಪಾಪದ ಫಲವೇ ಇದು ?

★ ಇರಬಹುದು; ನಂಬಿದವರಿಗೆ ಇಂಬು ನೀನು ಬಸವಲಿಂಗ; ನಂಬಿಗಿಲ್ಲದವರ ಎದೆಯೊಳಂಬು ನೀನು ಬಸವಲಿಂಗ ಎಂದು ಓರ್ವ ಭಕ್ತಿ ಕವಿ ಹಾಡಿದ್ದಾನೆ. ಪುಣ್ಯ-ಪಾಪಗಳು ಜಮಾ (ಆಯ) ಖರ್ಚು (ವ್ಯಯ)ಗಳ ವ್ಯವಹಾರ.ಒಬ್ಬ ಮನುಷ್ಯ ಗಳಿಸಿದ್ದರಲ್ಲಿ ಖರ್ಚು ಮಾಡುತ್ತಾನೆ. ಉಳಿದುದು ಅವನಿಗೆ ಲಾಭ. ದೇವರ ಕಾನೂನು ಹೀಗಿಲ್ಲ ಅವನು ಜಮಾದಲ್ಲಿ ಅಂದರೆ ಪುಣ್ಯದಲ್ಲಿ ಖರ್ಚನ್ನು ಅಂದರೆ ಪಾಪವನ್ನು ಕಳೆಯನು ಪುಣ್ಯಕ್ಕೆ ತಕ್ಕಂತೆ ಸುಖ,ಪಾಪಕ್ಕೆ ತಕ್ಕಂತೆ ದುಃಖ ಇವನ್ನು ಅನುಭವಿಸಲೇಬೇಕು. ಕೆಲವರು ಬಸವಾ ಎಂದು ಜಪಿಸುತ್ತಲೇ ಕೆಟ್ಟ ಕೆಲಸಗಳನ್ನು ಮಾಡುತ್ತಿರುತ್ತಾರೆ. ಇಂಥವರನ್ನು ಧರ್ಮಪಿತರು ಮೆಚ್ಚುವುದಿಲ್ಲ. ಆದ್ದರಿಂದ ತಮ್ಮ ಕರ್ಮಕ್ಕೆ ತಕ್ಕಂತೆ ಫಲ ಪಡೆಯಲೇಬೇಕು. ಹೊಯ್ದರೆ ಹೊಯ್ಗಳು ಕೈಯ ಮೇಲೆ; ಬೈದರೆ ಬೈಗಳು ಕೈಯ ಮೇಲೆ ಎನ್ನುತ್ತಾರೆ. ಧರ್ಮಪಿತರು.

ದೇವಿಕಾ ಶರಣಪ್ಪ, ಗಣನಾಯಕಿ, ಬೆಂಗಳೂರು.- ನಮ್ಮ ಆಪ್ತ ಬಂಧು ಶ್ರೀಮಂತರೊಬ್ಬರು ಭವ್ಯ ಮನೆ ಕಟ್ಟಿಸಿ ಗೃಹಪ್ರವೇಶದ ದಿನ ಹೋಮ ಮಾಡಿಸಿದರು. ಹೋಗಿದ್ದ ನಾನು, ''ಇದು ತಪ್ಪು; ಬಸವ ತತ್ತ್ವಾನುಯಾಯಿಗಳಾಗ ಬೇಕಾದ ಲಿಂಗಾಯತರು ಇವನ್ನು ಮಾಡಬಾರದು.'' ಎಂದು ಆಕ್ಷೇಪಿಸಿದೆ. ದೊಡ್ಡ ದೊಡ್ಡ ಸ್ವಾಮಿಗಳೇ ಮಾಡುತ್ತಾರೆ, ಮಾಡಿಸುತ್ತಾರೆ ಎಂದು ವಯೋವೃದ್ಧ ಸ್ವಾಮಿಗಳ ಹೆಸರು ಹೇಳಿದರು. ಯಾರು ಮಾಡಿಸಿದರೇನು ಅದು ತಪ್ಪು ಎಂದು ಹೇಳಿದೆ. ನಂತರ ನಾನು, ''ನಿಮ್ಮ ಮನೆಯಲ್ಲಿ ನಾನು ಊಟ ಮಾಡುವುದಿಲ್ಲ; ಹೋಮದಂತಹ ಪಾಪದ ಕೆಲಸ ಮಾಡಿದಲ್ಲಿ ನಾನು ಉಣ್ಣುವುದಿಲ್ಲ'' ಎಂದೆ. ಆಗ ಅವರು ''ನೀವು ಊಟ ಮಾಡದೆ ಹೋದರೆ ನಮಗೆ ತುಂಬಾ ನೋವಾಗುತ್ತೆ.

ನಮ್ಮನ್ನು ನೋಯಿಸುವುದರಿಂದ ನಿಮಗೂ ಒಳ್ಳೆಯದಾಗುವುದಿಲ್ಲ'' ಎಂದರು. ನಾನು ಹೇಳಿದೆ ''ಅವರ ತತ್ತ್ವಕ್ಕೆ ವಿರುದ್ಧವಾಗಿ ನಡೆದು ಧರ್ಮಗುರು ಬಸವಣ್ಣನವರನ್ನು ನೋಯಿಸಬಹುದೆ ?'' ಎಂದು ಊಟ ಮಾಡಲಿಲ್ಲ ಏಕೆಂದರೆ ತತ್ತ್ವಭ್ರಷ್ಟರ ಮನೆಯ ಊಟ ಪ್ರಸಾದವಾಗದು ಎಂದು ನನ್ನ ಅನಿಸಿಕೆ. ಎದ್ದು ಬಂದೆ. ಇದು ತಪ್ಪು ಹಠ ಎಂದು ಕೆಲವರು ನನಗೆ ಅನ್ನುತ್ತಿದ್ದಾರೆ. ನಾನು ಮಾಡಿದ್ದು ಸರಿಯೇ ತಪ್ಪೇ ?

★ ನೀವು ಮಾಡಿದ್ದು 100 ಕ್ಕೆ 100 ಸರಿ. ಗಣನಾಯಕಿ ಆದುದಕ್ಕೂ ಆ ಹುದ್ದೆಯನ್ನು ಸಾರ್ಥಕಪಡಿಸಿದ್ದೀರಿ. ಇದು ಹಠವಲ್ಲ ಗಣಾಚಾರ. ಹಠದಲ್ಲಿ ತತ್ತ್ವವಾಗಲಿ, ಉದಾತ್ತ ಉದ್ದೇಶವಾಗಲಿ ಇರುವುದಿಲ್ಲ. ಸ್ವಾಮಿಗಳಾದರೇನು, ಗೃಹಸ್ಥರಾದರೇನು ತಪ್ಪು ತಪ್ಪೆ!

''ಆದಿಯಾಗಲಿ ವೇದವಲಾಗಲಿ ಶಾಸ್ತ್ರದಲಾಗಲಿ ಸಮಯದಲಾಗಲಿ
ಎನ್ನವರೆನ್ನೆನು, ಎನ್ನವರೆನ್ನೆನು
ಎನ್ನವರಾದಡೆ ಜನ್ನಕ್ಕೆ ನಡೆವರೆ ?
ಎನ್ನವರೆನ್ನನು ಲಿಂಗದೇವ'' ಎನ್ನುತ್ತಾರೆ ಧರ್ಮಪಿತರು.

ಧರ್ಮಪಿತರ ಅನುಯಾಯಿಗಳು ಜನ್ನ ಅಂದರೆ ಹೋಮ - ಹವನ , ಯಜ್ಞ - ಯಾಗ ಮಾಡಬಾರದು. ಮಾನವರ ಜಠರಾಗ್ನಿಗೆ ದಾಸೋಹದ ಮೂಲಕ ಅನ್ನ-ಹಾಲು-ತುಪ್ಪ ಇತ್ಯಾದಿ ನೀಡುವುದು ಬಸವಧರ್ಮವೇ ವಿನಾ ಜಡವಾದ ಬೆಂಕಿಯ ಬಾಯಿಗೆ ಹಾಕುವುದಲ್ಲ ಮತಿ ಹೀನ ಲಿಂಗಾಯತರಿಗೆ ಬುದ್ಧಿಕಲಿಸಲು ನೀವು ಕೈಗೊಂಡ ಇಂಥ ಗಣಾಚಾರ ಅತ್ಯಗತ್ಯ.

ಶ್ರೀಕಂಠ ಕುಮಾರ್, ಬಸವ ಗಂಗೋತ್ರಿ.- ನಮ್ಮ ಹತ್ತಿರದ ಬಂಧುಗಳು ಲಿಂಗೈಕ್ಯರಾದರು; ಅವರು ಜೀವಿತ ಕಾಲದಲ್ಲಿ ಅಪ್ಪಟ ಶರಣ ಮಾರ್ಗಿಗಳು. ಆದರೆ ಅವರ ಸಂಸ್ಕಾರಕ್ಕೆ ಮತ್ತು ಗಣಾರಾಧನೆಗೆ ಪಂಚಾಚಾರ್ಯ ಸ್ವಾಮಿಗಳೊಬ್ಬರನ್ನು ಕರೆಸಲಾಗಿತ್ತು. ಅವರು ಧರ್ಮಪಿತ ಬಸವಣ್ಣನವರ ಭಾವಚಿತ್ರ ಇಟ್ಟು ಪೂಜಿಸಲು, ಬಸವಮಂತ್ರ ಪಠಣ ಮಾಡಲು ಒಟ್ಟು ಅವಕಾಶ ಕೊಡಲಿಲ್ಲ. ಆಗ ನಾನು ''ಲಿಂಗೈಕ್ಯರು ಅಪ್ಪಟ ಬಸವ ಭಕ್ತರು. ಆದ್ದರಿಂದ ಬಸವಪೂಜೆ ನೆರವೇರಬೇಕು'' ಎಂದಾಗ ಮನೆಯ ಯಜಮಾನರು ''ಸ್ವಾಮಿಗಳಿಗೆ ಇಷ್ಟವಿಲ್ಲ ಬಿಡಪ್ಪ'' ಎಂದು ನನ್ನನ್ನು ತಡೆದರು. ನನಗೆ ತುಂಬಾ ವ್ಯಥೆಯಾಗಿ ಪುನಃ ಅವರ (ನಮ್ಮ ಬಂಧುಗಳ) ಮನೆಗೆ ಕಾಲಿಟ್ಟಿಲ್ಲ. ಇನ್ನೊಂದು ವಿಚಿತ್ರ ಸಂಗತಿ ಎಂದರೆ ಆ ಪಂಚಾಚಾರ್ಯ ಸ್ವಾಮಿಗಳ ಎರಡೂ ಬದಿಗೆ ಇಬ್ಬರು ವಿರಕ್ತ ಸ್ವಾಮಿಗಳಿದ್ದರು. ಅವರ ಕಾರಿನ ಮೇಲೆ ಢಾಳಾಗಿ ಬಸವ ಮಂತ್ರವನ್ನು ಬರೆದು ಕೊಂಡಿದ್ದಾರೆ. ಆದರೆ ಧರ್ಮಗುರುವಿಗೆ ಆದ ಅವಮಾನವನ್ನು ಆ ವಿರಕ್ತರು ಪ್ರತಿಭಟಿಸಲೇ ಇಲ್ಲ.

★ ಲಿಂಗಾಯತ ಸಮಾಜದ ಸ್ವಾಮಿಗಳು, ಗೃಹಸ್ಥರು, ರಾಜಕಾರಣಿಗಳು ಇವರ ಬಗ್ಗೆ ಬರೆಯುತ್ತ ಹೋದರೆ ಸಮಾಜದ ಬಗ್ಗೆ ಇರುವ ಅಷ್ಟಿಷ್ಟು ಮರ್ಯಾದೆಯೂ ಹೋಗುತ್ತದೆ. ಧರ್ಮವನ್ನು ಕೊಟ್ಟ ಧರ್ಮಗುರುವಿಗಿಂತಲೂ ಬಿನ್ನಹ ತೀರಿಸಲು ಬರುವ ಅಯ್ನೋರೇ ಮೂಢ ಭಕ್ತರಿಗೆ ಪೂಜ್ಯರು. ಈ ಕೆಲವು ವಿರಕ್ತ ಸ್ವಾಮಿಗಳಂತೂ ಪಂಚಾಚಾರ್ಯ ಸ್ವಾಮಿಗಳ

ಆಟಾಟೋಪದ ಮುಂದೆ ವೀರಪ್ಪನ್ ಕೈಯಲ್ಲಿ ಸಿಕ್ಕಿ ಒದ್ದಾಡುತ್ತಿರುವ ಮುಖ್ಯಮಂತ್ರಿ ಎಸ್.ಎಂ.ಕೃಷ್ಣರಂತೆ ನಿಸ್ಸಹಾಯಕರು. ಆದ್ದರಿಂದ ಜನರೇ ತತ್ತ್ವನಿಷ್ಠರಾಗಬೇಕು.

ಪುಷ್ಪಾಂಜಲಿ, ಮಲ್ಲೇಶ್ವರಂ, ಬೆಂಗಳೂರು.- ರೋಂ ಹೊತ್ತಿ ಉರಿಯುವಾಗ ನೀರೋ ಎಂಬ ರಾಜಕುಮಾರ ಪಿಟೀಲು ಬಾರಿಸುತ್ತಿದ್ದನಂತೆ. ನಮ್ಮ ಐ.ಟಿ. ಮುಖ್ಯ ಮಂತ್ರಿಗಳು ಏನು ಮಾಡುತ್ತಾರೆ.?

★ ಕಾವೇರಿ ಹೊತ್ತಿ ಉರಿಯುವಾಗ, ನಾಗಪ್ಪರಂತಹ ಸಾತ್ವಿಕರು ವೀರಪ್ಪನ್ ವಶದಲ್ಲಿರುವಾಗ ಹೆಲಿಕಾಪ್ಟರಲ್ಲಿ ತಿರುಪತಿ, ಮಂತ್ರಾಲಯಗಳ ದರ್ಶನಕ್ಕೆ ಸುತ್ತುತ್ತಾ ನರಿ ಮುಖನೋಡಿ ಸಂತೋಷ ಪಡುತ್ತಾರೆ!

ಮಂಜುನಾಥ ಎಂ. ಭದ್ರಾವತಿ.- ಕಾಡಲ್ಲಿರುವ ವೀರಪ್ಪನ್ ಅನ್ನೂ, ಊರಲ್ಲಿರುವ ಕಳ್ಳರನ್ನು, ಪೋಲೀಸ್ ಇಲಾಖೆಯಲ್ಲೇ ಇರುವ ದರೋಡೆಕೋರ ಎ.ಸಿ.ಪಿ. ಬೆಳ್ಳಿಯಪ್ಪನನ್ನು ಬಂಧಿಸಲಾಗದ ಪೋಲಿಸ್ ಇಲಾಖೆ ಇರುವ ಅಗತ್ಯವೇನು?

★ ಪೂಜೆ-ಪ್ರಾರ್ಥನೆ ಮಾಡುವ ಕಲ್ಯಾಣಪರ್ವಕ್ಕೆ ಬರುವ ಶರಣರನ್ನು ಲಾಠಿಯಿಂದ ಚಚ್ಚಲು. ಪಾಪ ಅಲ್ಲೆಲ್ಲ ಅಭಿವ್ಯಕ್ತವಾಗದ ಸುಪ್ತ ಶಕ್ತಿ ನಿಸ್ಸಹಾಯಕ ಶರಣರ ಮೇಲಾದರೂ ಬಳಕೆಯಾಗಬಾರದೆ ?!

ಬಸವರಾಜ. ಏಂ. ಬಗಲಿ, ಬೆಳಗಾಂವ. ದಿ. 11-9-2002.- ಶ್ರೀ ಸಿದ್ದೇಶ್ವರ ಸ್ವಾಮಿಗಳು ಈಗ ಬೆಳಗಾಂವಿಯಲ್ಲಿ ಪ್ರವಚನ ಮಾಡುತ್ತಿದ್ದಾರೆ. ಅವರು ತಮ್ಮ ಪ್ರವಚನದಲ್ಲಿ ಭಗವದ್ಗೀತೆ, ವೇದಾಂತ ಉದಾಹರಿಸುವುದಲ್ಲದೆ ಪಾಶ್ಚಿಮಾತ್ಯ ದಾರ್ಶನಿಕರನ್ನು ಉದಾಹರಿಸುವರು. ಬೌದ್ಧ ಧರ್ಮದ ಬಗ್ಗೆ ಹೆಚ್ಚು ಹೇಳುವರು. ಆದರೆ ಶರಣ ಧರ್ಮದ ಬಗ್ಗೆ ಹೇಳುವುದು ಕಡಿಮೆ. ಅಮೋಘವಾದ ವಚನ ಸಾಹಿತ್ಯ ಇರುವಾಗ ಇದನ್ನು ಪ್ರಧಾನವಾಗಿಟ್ಟುಕೊಳ್ಳದೆ ಏಕೆ ಏನೇನೋ ಹೇಳುವರು ? ಇದರಿಂದ ಯಾರಿಗೆ ಪ್ರಯೋಜನ?!

★ ಊಟದಲ್ಲಿ ಉಪ್ಪಿನಕಾಯಿ ಬಳಸುವಂತೆ ವಚನಗಳನ್ನು ಅಲ್ಲಿಇಲ್ಲಿ ಬಳಸುತ್ತಾರೆ ಎಂದು ಕೇಳಿದ್ದೇನೆ. ಅವರ ಉದ್ದೇಶ ವಚನ ಸಾಹಿತ್ಯ ಪ್ರಚಾರ, ಸಮತಾವಾದಿ ಸಮಾಜರಚನೆ, ಸಮಾಜ ಸಂಘಟನೆ ಅಲ್ಲ. ತಮ್ಮನ್ನು ತಾವು ವಿಶ್ವಮಾನವರಾಗಿಸಿಕೊಳ್ಳುವುದು ಅಂದಾಗ ಸಮಾಜಕ್ಕೆ ನಿಮಗಾಗುವ ಪ್ರಯೋಜನದ ಬಗ್ಗೆ ಅವರೇಕೆ ಚಿಂತಿಸಬೇಕು.? ಅವರಿವರ ಬಾಯಲ್ಲಿ ಕೇಳಿದ್ದೇನೆ ಅದ್ದೂರಿಯಾಗಿ ಪ್ರವಚನ ವ್ಯವಸ್ಥೆ ಮಾಡುವ ಅನೇಕರಿಗೆ ತುಂಬಾ ಪ್ರಯೋಜನವಿದೆ ಎಂದು.

ಮಲ್ಲಿಕಾರ್ಜುನಪ್ಪ ಮತ್ತೀಪುರ, ಕೊಳ್ಳೆಗಾಲ.- ಲಿಂಗಾಯತ ವಿರಕ್ತ ಮಠದಿಂದ ಹೊರಡುವ ಮಾಸಪತ್ರಿಕೆಯೊಂದರಲ್ಲಿ ಸ್ವಾಮಿಗಳ ಭಾಷಣದ ಸಾರಾಂಶ ಬಂದಿತ್ತು, "ಇಂದು ಮಾನವ ಧರ್ಮದ ಅಗತ್ಯವಿದೆ. ಅದರ ಸ್ಥಾಪನೆಗಾಗಿ ಎಲ್ಲರೂ ದುಡಿಯಬೇಕು." ಎಂದು ಕರೆಕೊಟ್ಟಿದ್ದಾರೆ. ಮಾನವ ಧರ್ಮ ಎಂಬುದು ಯಾವುದು ? ಎಲ್ಲಿದೆ ?

★ ಮಾತನಾಡಿದ್ದನ್ನೆಲ್ಲ ಅವರು ಚಿಂತನೆ ಮಾತನಾಡಿರುತ್ತಾರೆ ಎಂದು ನೀವು

ತಿಳಿದಿರುವುದು ತಪ್ಪು. ಏನೋ ಒಂದು ಮಾತನಾಡಬೇಕು ಎಂದು ಆಡಿರುತ್ತಾರೆ. ಅಷ್ಟೇ. ಮಾನವ ಧರ್ಮ ಎಂಬ ಒಂದು ಧರ್ಮ ಇರದು. ದಯವೇ ಧರ್ಮದ ಮೂಲ ಎಂಬ ಬಸವ ವಾಣಿಯಂತೆ ಮಹಾಪುರುಷರು ಜನತೆಯ ಉದ್ಧಾರಕ್ಕಾಗಿ ಧರ್ಮಸಂಹಿತೆ ನೀಡುತ್ತಾರೆ. ಯಾವ ಧರ್ಮ ಸಮಾನತೆ-ದಯೆ- ಮಾನವೀಯತೆ ಮುಂತಾದ ಮೌಲ್ಯಗಳನ್ನು ಬೋಧಿಸುವುದೋ ಅದೇ ಮಾನವ ಧರ್ಮ ಮತ್ತು ವಿಶ್ವಧರ್ಮ ಸಹ ಸಮಾನತೆ ಬೋಧಿಸಿದ, ದಯೆ-ಮಾನವೀಯತೆ - ಅಹಿಂಸೆ -ಸಸ್ಯಾಹಾರ ಮುಂತಾದ್ದು ಕಲಿಸಿದ, ಎಲ್ಲರಿಗೂ ಧರ್ಮ ಸಂಸ್ಕಾರ ನೀಡಿದ ಬಸವ ಪ್ರಣೀತ ಲಿಂಗಾಯತ ಧರ್ಮವು ಸದ್ಧರ್ಮ, ಮಾನವ ಧರ್ಮ, ಪ್ರಗತಿಪರ ಧರ್ಮ, ವಿಶ್ವಧರ್ಮ.

ಗುರು ಮಲ್ಲೇಂದ್ರ, ಚಾಮರಾಜನಗರ.- ದಂತ ಚೋರ, ನರಹಂತಕ, ಗಂಧದ ಕಳ್ಳ ವೀರಪ್ಪನ್ ಅಪಹರಿಸಿರುವ ನಾಗಪ್ಪನವರನ್ನು ಬಿಡಿಸಿಕೊಳ್ಳುವುದಕ್ಕೆ ತಾವು ಆಸಕ್ತಿ ವಹಿಸಿರುವುದೇಕೆ ? ವೀರಪ್ಪನ್ ನಿಮಗೆ ಬಹಳ ಪರಿಚಿತನೆ, ನಿಮ್ಮ ಮಾತು ಕೇಳುವ ನಿಮ್ಮ ಅಭಿಮಾನಿಯೆ ?

★ ಆತ ನಮ್ಮ ಅಭಿಮಾನಿಯಲ್ಲ, ಅಪರಿಚಿತ. ಆದರೆ ನಾವು ಆತನ ಅಭಿಮಾನಿಗಳು?! ತೆರಿಗೆದಾರನ ಬೊಕ್ಕಸ ಲೂಟಿ ಮಾಡಿ ಐ.ಪಿ.ಎಸ್., ಐ.ಎಫ್.ಎಸ್. ಓದಿದ ಮಹಾಮಹಾ ಮೇಧಾವಿಗಳ ಕಾರ್ಯತಂತ್ರವನ್ನು ಕ್ಷಣಾರ್ಧದಲ್ಲಿ ಕೆಡಿಸಿ, ಎರಡು ಸರ್ಕಾರಗಳನ್ನು (ಕೇರಳವನ್ನು ಸೇರಿಸಿಕೊಂಡರೆ 3 ಸರ್ಕಾರಗಳು) ತನ್ನ ತೋರ್‌ಬೆರಳ ಸನ್ನೆಯಿಂದ ಸೂತ್ರದ ಗೊಂಬೆಗಳಂತೆ ಕುಣಿಸುವ, ಮಣಿಸುವ, ಆಡಿಸುವ ವೀರಪ್ಪನ್ ಧೈರ್ಯ ಮತ್ತು ಬುದ್ಧಿವಂತಿಕೆ ನೋಡಿ ಬೆರಗಾಗಿದ್ದೇವೆ. ರಾಜರ ಆಡಳಿತವಿದ್ದುದೇ ಆದರೆ ಅವರುಗಳು ಇಂಥ ಬುದ್ಧಿವಂತರನ್ನು, ಶೂರರನ್ನು ಹುಡುಕಿ, ಬಿರುದು ಕೊಟ್ಟು, ದೊಡ್ಡ ಹುದ್ದೆಗಳಲ್ಲಿಟ್ಟು ಕೆಲಸ ತೆಗೆದುಕೊಳ್ಳುತ್ತಿದ್ದರು. ವಿಧ್ವಂಸಕವಾಗಿ ಹರಿಯುತ್ತಿರುವ ಆತನ ಪ್ರತಿಭೆಯನ್ನು ವಿಧಾಯಕ ಕೆಲಸಕ್ಕೆ ರಾಜ್ಯದ ಪ್ರಗತಿಗೆ ಬುದ್ಧಿವಂತರಾದ ರಾಜರು ಬಳಸಿಕೊಳ್ಳುತ್ತಿದ್ದರು. ನಾನೇನಾದರೂ ಮುಖ್ಯ ಮಂತ್ರಿ ಸ್ಥಾನದಲ್ಲಿದ್ದರೆ ಆತನಿಗೆ ಕ್ಷಮಾದಾನ ಮಾಡಿ, ಆತನಿಂದ ಉದಾತ್ತ ಕೆಲಸಗಳಾಗುವಂತೆ ಬೋಧಿಸುತ್ತಿದ್ದೆ ! ನಮ್ಮ ಪ್ರಾಮಾಣಿಕ ಪ್ರಯತ್ನದ ಹಿಂದಿನ ಉದ್ದೇಶ ಶರಣ. ನಾಗಪ್ಪನವರನ್ನು ಸುರಕ್ಷಿತವಾಗಿ ವಾಪಸ್ಸು ಕರೆಸಿಕೊಳ್ಳುವುದಷ್ಟೇ ಅಲ್ಲ ಆ ಚತುರ ಚೋರ ವೀರಪ್ಪನ್‌ನನ್ನು ಪರಿವರ್ತನೆ ಮಾಡಿ ನಾಗರಿಕ ಜೀವನ ಪಥಕ್ಕೆ ಕರೆತರುವುದು! ಸರ್ಕಾರ ನಮಗೆ ಸ್ವಾತಂತ್ರ್ಯ ನೀಡಿ ಸಹಕರಿಸಿದರೆ ಸಾಕು, ಸಹಕರಿಸದಿದ್ದರಷ್ಟೆ, ನಮ್ಮ ಪ್ರಯತ್ನಕ್ಕೆ ಅಡ್ಡಿ ಪಡಿಸದೆ ತನ್ನ ಪಾಡಿಗೆ ತಾನು ಸುಮ್ಮನಿದ್ದರೂ ಸಾಕು.

ಬಸವ ಪ್ರಭು, ರಾಷ್ಟ್ರೀಯ ಬಸವ ದಳ, ಬಳ್ಳಾರಿ.- ಮಂಡ್ಯ- ಮೈಸೂರು ಜಿಲ್ಲೆಗಳಲ್ಲಿ 'ಕಾವೇರಿ' ಸಮಸ್ಯೆ ಕಾವೇರಿ ಉರಿಯುತ್ತಿದ್ದ ದಿನ ನಮ್ಮ ಮುಖ್ಯ ಮಂತ್ರಿಗಳು ನಮ್ಮ ಜಿಲ್ಲೆಗೆ ಆಗಮಿಸಿ ಮಂತ್ರಾಲಯಕ್ಕೆ ಹೋದರು. ಅಂದು ಬೆಳಗ್ಗೆ ನರಿಗಳನ್ನು ನೋಡಿದರಂತೆ. ಅದು ಶುಭ ಸೂಚನೆ ಎಂದು ಬಹಳ ಖುಷಿ ಪಟ್ಟರಂತೆ. ನಂತರ ಮಂತ್ರಾಲಯಕ್ಕೆ ಹೋದರು. ಅಕಸ್ಮಾತ್ ನಮ್ಮ ರಾಜ್ಯದ ಕಷ್ಟಗಳು ಬಗೆಹರಿದರೆ ಅದು ಮೊದಲು ಆದ ನರಿಗಳ ದರ್ಶನದ

ಫಲ ಎಂದು ಕೊಳ್ಳಬೇಕೋ, ನಂತರ ಆದ ಮಂತ್ರಾಲಯ ಶ್ರೀಗಳ ದರ್ಶನ ಎಂದುಕೊಳ್ಳಬೇಕೋ?

★ ನಿಮ್ಮ ಸಮಸ್ಯೆ ಅದಾದರೆ ನನ್ನ ಸಮಸ್ಯೆ ಬೇರೆಯೇ ಇದೆ ಎಸ್.ಎಂ. ಕೃಷ್ಣರ ದರ್ಶನ ರಾಜ್ಯಕ್ಕೆ ಶುರುವಾದ ಮೇಲೆ ಬರ, ವಿದ್ಯುತ್ ಬೆಲೆ ಏರಿಕೆ, ರೈತರ ಸಂಕಷ್ಟ, ಲೆಕ್ಕವಿಲ್ಲದಷ್ಟು ಪೋಲೀಸ್ ದೌರ್ಜನ್ಯ, ಪೋಲೀಸರಿಂದಲೇ ದರೋಡೆ, ಹಾಡು ಹಗಲಿನಲ್ಲೇ ಕ್ರೂರ ಘಟನೆಗಳು, ವೀರಪ್ಪ ನಿಂದ ಡಾ|| ರಾಜ್‌ಕುಮಾರ್ ಅಪಹರಣ, ಇದೀಗ ನಾಗಪ್ಪನವರ ಅಪಹರಣ ಇತ್ಯಾದಿ ನಡೆಯುತ್ತಲೇ ಇವೆ. ಅಂದು ಸುಪ್ರಭಾತದಲ್ಲೇ ಮುಖ್ಯಮಂತ್ರಿಗಳ ದರ್ಶನ ಪಡೆದ ಆ ನರಿಗಳಿಗೆ ಯಾವ ಸಂಕಷ್ಟ ಎರಗಿದೆಯೋ ಎಂಬ ಚಿಂತೆ ನನ್ನನ್ನು ಬಹುವಾಗಿ ಕಾಡುತ್ತಿದೆ.

ಬೀದರ್ ಗ್ರಂಥಾಲಯದಲ್ಲೊಂದು ದಿನ

ಒಂದು ದಿವಸ ಬೀದರ್‌ನ ಜಿಲ್ಲಾ ಕೇಂದ್ರ ಗ್ರಂಥಾಲಯಕ್ಕೆ ಹೋಗಿದ್ದೆ. ಅಂಚೆ ಪೇದೆ ಬಂದು ಗ್ರಂಥಾಲಯ ಅಧಿಕಾರಿಯ ಕೈಗೆ ಕಲ್ಯಾಣ ಕಿರಣ ಕೊಟ್ಟ. ನನ್ನ ಪಕ್ಕದಲ್ಲಿ ಕುಳಿತುಕೊಂಡು ಯಾವುದೋ ಪತ್ರಿಕೆ ಓದುತ್ತಿದ್ದವರು ಕೈಯಲ್ಲಿರುವ ಪತ್ರಿಕೆ ಮೇಜಿನ ಮೇಲೆ ಬಿಸಾಕಿ, ಅಧಿಕಾರಿಯಿಂದ ಕಲ್ಯಾಣ ಕಿರಣ ಪಡೆದು ಮೊದಲಿಗೆ ಸಂಪಾದಕೀಯ, ಸಮಸ್ಯೆ-ಸಮಾಧಾನ, ವರದಿಗಳು, ಲೇಖನಗಳು ಒಂದಾದನಂತರ ಒಂದು ಇಡೀಯ ಪತ್ರಿಕೆಯನ್ನೇ ಓದಿ ಮುಗಿಸಿ ತನ್ನ ಗೆಳೆಯನ ಕೈಗೆಯೇ ಕೊಟ್ಟರು. ನಾನು ಸೂಕ್ಷ್ಮವಾಗಿ ಗಮನಿಸುತ್ತಲೇ ಇದ್ದೆ. ಅಂದ ಹಾಗೆ ಅವರು ನಮ್ಮ ಸಂಸ್ಥೆಯ ಪ್ರತಿಯೊಂದು ಕಾರ್ಯಕ್ರಮಕ್ಕೂ ವಿರೋಧಿಸುವವರೆ ಎಂಬುದು ಇಲ್ಲಿ ಗಮನಾರ್ಹ.

ಇಲ್ಲಿ ಒಂದು ಅಂಶ ನಾವು ತಿಳಿದುಕೊಳ್ಳಬೇಕಾಗಿದೆ. ಯಾವುದೋ ಕಾರಣಕ್ಕೆ ವಿರೋಧಿಸುತ್ತಿದ್ದರು ಕೂಡ, ಧಾರ್ಮಿಕ ಜ್ಞಾನ, ಇಂದಿನ ಪರಿಸ್ಥಿತಿಯಲ್ಲಿ ಮಾರ್ಗದರ್ಶನಕ್ಕಾಗಿ ಕಲ್ಯಾಣಕಿರಣವನ್ನೇ ಅವಲಂಬಿಸಿದ್ದಾರೆ. ಪ್ರಸ್ತುತ ಇವರಷ್ಟೆ ಅಲ್ಲ. ಬಹುತೇಕ ಜನ ಹಾಗು ಪರಧರ್ಮಿಯರೂ ಕೂಡ ಆಸಕ್ತಿಯಿಂದ ಕಲ್ಯಾಣಕಿರಣ ಓದುತ್ತಿದ್ದಾರೆ ಎಂಬುದು ನಿಜ ಸಂಗತಿ.

ಬೀದರ್‌ನಲ್ಲಿ ಶರಣ.ಚಂದ್ರಶೇಖರ ಚರಾಲ ಜಿಲ್ಲಾ ಕೇಂದ್ರ ಗ್ರಂಥಾಲಯಕ್ಕೆ ಕೊಡುಗೆಯಾಗಿ ಕಲ್ಯಾಣ ಕಿರಣ ಕೊಟ್ಟಿದ್ದಾರೆ. ಸಹೃದಯವಂತರಲ್ಲಿ, ಸಂಘಟನೆಗಳಲ್ಲಿ ನನ್ನದೊಂದು ಮನವಿ. ತಾವುಗಳು ಕೂಡ ಕಲ್ಯಾಣ ಕಿರಣವನ್ನು ಕೊಡುಗೆಯಾಗಿ ತಮ್ಮ ಊರಿನ ಗ್ರಂಥಾಲಯ, ವಾಚನಾಲಯಗಳಿಗೆ ಕೊಡಿಸಬೇಕು.

ಜ್ವಲಂತ ಸಮಸ್ಯೆಗಳಿಗೆ ಸಮರ್ಪಕ ಸಮಾಧಾನಗಳನ್ನು ಕೊಡುತ್ತ, ಸೃಜನಶೀಲರಿಗೆ, ಚಿಂತನಶೀಲರಿಗೆ ಬೌದ್ಧಿಕ ಆಹಾರ ಕೊಡುತ್ತಾ ಎಲ್ಲರನ್ನೂ ಒಟ್ಟುಗೂಡಿಸುತ್ತಾ ಸಮರ್ಥರನ್ನಾಗಿಸಲು ಮುನ್ನುಗ್ಗುತ್ತಿರುವ ಕಲ್ಯಾಣಕಿರಣಕ್ಕೆ ತುಂಬು ಹೃದಯದ ಅಭಿನಂದನೆಗಳು.

ಇಂತಿ ತಮ್ಮ

ನಾಗಶೆಟ್ಟಿ ಕಂಟೆಪ್ಪ ಶಿಟಗಾರ

ಸಹ ಕಾರ್ಯದರ್ಶಿ, ರಾ.ಬ.ದಳ. ಬೀದರ್.

ಬಸವ ಭಕ್ತರ ನವರಾತ್ರಿ ಆಚರಣೆ

ಲಿಂಗಾಯತ ಧರ್ಮಾನುಯಾಯಿಗಳು ಯಾವುದೇ ಹಬ್ಬವನ್ನು ತಾತ್ತ್ವಿಕವಾಗಿ, ವೈಚಾರಿಕವಾಗಿ, ಭಾಕ್ತಿಕವಾಗಿ ಆಚರಿಸಬೇಕು. ಆಡಂಬರ, ವೈಭವ, ಮೂಢ ನಂಬಿಕೆಗಳಿಂದ ಹೊರತಾಗಿ ಹಬ್ಬವನ್ನು ಆಚರಿಸಬೇಕು. ಅಶ್ವಯುಜ ಮಾಸದ ಅಮವಾಸ್ಯೆಯು ದಿ. 06-10-2002 ರಂದು ಬರುತ್ತಿದ್ದು, ಪ್ರತಿಪದೆ ದಿ. 07-10-2002 ರಂದು ಪ್ರಾರಂಭವಾಗುತ್ತದೆ. ವಿಜಯ ದಶಮಿಯು ಅಕ್ಟೋಬರ್ 15 ರಂದು ಒದಗಿ ಬಂದಿದೆ. ಸಾಂಪ್ರದಾಯಿಕವಾಗಿ ಈ ದಿನಗಳನ್ನು ನವರಾತ್ರಿ ಎಂದು ಆಚರಿಸಲಾಗುವುದು. ದೇವಿಗೆ ಸಂಬಂಧಿಸಿದ ಹಬ್ಬವನ್ನಾಗಿ ಹಿಂದುಗಳು ಆಚರಿಸುವರು. ದೇವಿಯ ಸಂಕೇತವಾಗಿ ಘಟ್ಟ ಕೂಡ್ರಿಸುವುದು ಎಂದು ಕೆಲವರು, ಮತ್ತೆ ಕೆಲವರು, ದೇವಿ ಪುರಾಣ ಪಾರಾಯಣ ಮಾಡುವರು. ಈ ಯಾವ ಪದ್ಧತಿಯು ಬಸವ ಪತಿಕರಿಗೆ ಮಾನ್ಯವಲ್ಲ. ಏಕಲಿಂಗ ನಿಷ್ಠಾಪರರಾದ ಶರಣರು ತ್ರಿತತ್ತ್ವ (Trinity)ಗಳಾದ ಗುರು-ಲಿಂಗ-ಜಂಗಮದ ಆರಾಧನೆಯ ಹೊರತು ಬೇರಾವ ಕಾಲ್ಪನಿಕ ದೇವತೆಗಳನ್ನು ಪೂಜಿಸಬಾರದು.

ಸಾಂಪ್ರದಾಯಿಕವಾಗಿ ನವರಾತ್ರಿಯನ್ನು ಆಚರಿಸಿಕೊಂಡು ಬಂದ ಜನರು ಪರ್ಯಾಯವಾಗಿ ಹೀಗೆ ಪೂಜೆಯನ್ನು ಮಾಡಬೇಕು.

1. ಪ್ರತಿಪ್ರದೆಯ ದಿವಸ ಒಂದು ಮಂಟಪ ಮಾಡಿ ಧರ್ಮಪಿತ ಬಸವಣ್ಣನವರ ಭಾವಚಿತ್ರವನ್ನು ಪ್ರತಿಷ್ಠಾಪಿಸಬೇಕು.

2. ಪ್ರತಿಪದೆಯಂದು ಮತ್ತು ವಿಜಯದಶಮಿಯಂದು ಇಷ್ಟಲಿಂಗಪೂಜೆಯ ನಂತರ ಪೂರ್ತಿ ಬಸವೇಶ್ವರ ಪೂಜಾವ್ರತ ಮಾಡಬೇಕು.

3. ಲಿಂಗಾಯತೇತರ ಬಸವ ಭಕ್ತರು ಇಷ್ಟಲಿಂಗಧಾರಣೆ ಇಲ್ಲದಿರುವುದರಿಂದ ಬಸವೇಶ್ವರ ಪೂಜಾವ್ರತ ಮಾಡಬೇಕು.

3. ಲಿಂಗಾಯತೇತರ ಬಸವ ಭಕ್ತರು ಇಷ್ಟಲಿಂಗಪೂಜೆಯ ನಂತರ ಪೂರ್ತಿ ಬಸವೇಶ್ವರ ಪೂಜಾವ್ರತ ಮಾಡಬೇಕು.

4. ಉಳಿದ ದಿನ 108 ಬಸವ ಮಂತ್ರ ಹೇಳಿ ಪುಷ್ಪಾರ್ಚನೆ ಮಾಡಬೇಕು.

5. ಧರ್ಮಪಿತ ಬಸವಣ್ಣನವರ ವಚನಗಳ ಸಂಗ್ರಹವಾದ ಬಸವ ವಚನ ದೀಪ್ತಿ, ಬಸವ ದರ್ಶನ ಕೃತಿಗಳನ್ನು ಎರಡೂ ಹೊತ್ತು ಓದಬೇಕು.

6. ಚಿಕ್ಕ ಚಿಕ್ಕ ಕಾಗದದ ತುಂಡುಗಳನ್ನು ಮಾಡಿ ಅದರಲ್ಲಿ ವಚನಗಳನ್ನು 9 ದಿವಸಗಳ ಕಾಲ ಬರೆಯಬೇಕು. ವಚನದ ಕೆಳಗೆ ಕೊಡುಗೆ ಎಂದು ಬರೆದು, ನಿಮ್ಮ ಹೆಸರು ಬರೆದಿರಬೇಕು.

7. ವಿಜಯ ದಶಮಿಯ ದಿನ ಬಸವಣ್ಣನವರ ಭಾವಚಿತ್ರಕ್ಕೆ ವಚನಗಳನ್ನು ಬರೆದಿಟ್ಟ ಹಾಳೆಗಳನ್ನೇ ಪುಷ್ಪದೊಡನೆ ಏರಿಸಿ, ನಂತರ ಸಂಗ್ರಹಿಸಿ ಇಟ್ಟುಕೊಂಡು, ಬನ್ನಿ ಕೊಡುವುದರ ಬದಲಿಗೆ (ಅಥವಾ ಬನ್ನಿಯ ಜೊತೆಗೆ) ಆ ವಚನಗಳನ್ನು ನೆನಪಿನ ಕೊಡುಗೆಯಾಗಿ ಕೊಡಬೇಕು.

8. ವಿಜಯ ದಶಮಿಯ ದಿನ ಬೆಳಿಗ್ಗೆ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗಿಗಳಾಗಿ, ಅಲ್ಲಿಯೂ ಶರಣ ಬಂಧುಗಳಿಗೆ ವಚನಗಳನ್ನು ವಿತರಿಸಿ, ಸಂಜೆ ತಮ್ಮ ಗುರು-ಹಿರಿಯರು, ಬಂಧು-ಬಳಗ-ಮಿತ್ರರನ್ನು ಸಂದರ್ಶಿಸಲು ಹೋಗಿ ವಚನಗಳ ಜೊತೆಗೆ ಕಲ್ಲುಸಕ್ಕರೆ ಸಿಹಿ ಒಯ್ದು ಅದನ್ನು ವಿತರಿಸಿ ಬರಬೇಕು.

9. ಅಂದು ಬೆಳಿಗ್ಗೆ ಸಾಮೂಹಿಕವಾಗಿ ಶರಣ ಬಂಧುಗಳೆಲ್ಲ ಸೇರಿ ಅಕ್ಕನಾಗಲಾಂಬಿಕಾ ಸಂಸ್ಮರಣೆ, ಬಸವ ಧರ್ಮ ವಿಜಯೋತ್ಸವವನ್ನು ಆಚರಿಸಬೇಕು.

-ಮಾತಾಜಿ

ತುರುವೇಕೆರೆಯಲ್ಲಿ ಪೂಜ್ಯ ಅಪ್ಪಾಜಿಯವರ ಜಯಂತೋತ್ಸವ ಮತ್ತು ರಾಷ್ಟ್ರೀಯ ಬಸವ ದಳದ ಹುಟ್ಟು ಹಬ್ಬ ಆಚರಣೆ. -ಒಂದು ವರದಿ

ತುರುವೇಕೆರೆ - ದಿ. 10-9-2002

<u>ತುರುವೇಕೆರೆ :</u> ಬಸವ ಧರ್ಮ ಪೀಠದ ಹಿರಿಯ ಚೇತನ ಧರ್ಮ ಕ್ರಾಂತಿಯ ಧೀರಯೋಗಿಯಾದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳ 72ನೇ ಜಯಂತಿ ಉತ್ಸವ ಹಾಗೂ ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ ದ್ವಿತೀಯ ಮಹಿಳಾ ಜಗದ್ಗುರುಗಳಾದ ಪೂಜ್ಯ ಶ್ರೀಮಾತೆ ಗಂಗಾದೇವಿಯವರ 45 ವರ್ಧಂತಿಯನ್ನು ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬವನ್ನು ತುರುವೇಕೆರೆ ನಗರದಲ್ಲಿ ದಿ-10-9-2002ದಂದು ಆಚರಿಸಲಾಯಿತು.

ರಾಷ್ಟ್ರೀಯ ಬಸವದಳ ನಗರ ಘಟಕದ ವತಿಯಿಂದ ಹಮ್ಮಿಕೊಂಡ ಈ ಕಾರ್ಯಕ್ರಮಕ್ಕೆ ಉದ್ಘಾಟಕರಾಗಿ ಬಂದ ಮಾದಿಹಳ್ಳಿಯ ಬದರಿಕಾಶ್ರಮದ ಪೂಜ್ಯ ಶ್ರೀ ಮಂರಳಾನಂದಾಜೀಯವರು ಮಾತನಾಡಿ, ವಿಶ್ವದಲ್ಲೇ ಬಸವ ಧರ್ಮ ಶ್ರೇಷ್ಠವಾದದ್ದು 12ನೇ ಶತಮಾನದಲ್ಲಿ ವಿಶ್ವಕ್ಕೆ ಸಮಾನತೆಯ ಸೂದೇಶ ನಾರಿದ ಮಹಾ ಮಾನವತಾವಾಗಿ ಬಸವಣ್ಣನವರ ತತ್ವಗಳನ್ನು ನಾವು ಆಚರಿಸಿಕೊಂಡು, ಅವರು ಹಾಕಿದ ಮಾರ್ಗದಲ್ಲೇ ನಡೆದರೆ, ನಮಗೆ ಖಂಡಿತಾ ಶಾಂತಿ ಸಿಗಲುಸಾಧ್ಯವೆಂದು ನುಡಿದರು. ಮೊದಲು ನಾವು ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಂಡು ಸನ್ಮಾರ್ಗದಲ್ಲಿ ಸಾಗಬೇಕೆಂದರು.

ಉಪನ್ಯಾಸಕರಾಗಿ ಆಗಮಿಸಿ ಮಾತನಾಡಿದ ಸ್ಥಳೀಯ ವರ್ತಕರಾದ ಶ್ರೀ ಶಾಂತರಾಜುರವರು ಬಸವ ಧರ್ಮಕ್ಕಾಗಿ ಹಾಗೂ ಸಮಾಜ ಸುಧಾರಣೆಗಾಗಿ ತಮ್ಮ ವಿಶಿಷ್ಟ ವಾಕ್‌ಚಾತುರ್ಯ ಮತ್ತು ನೀತಿ ಬೋಧನೆಯೊಂದಿಗೆ ಧಾರ್ಮಿಕ ರಂಗದಲ್ಲಿ ಮೌನಕ್ರಾಂತಿ ಮಾಡಿದ ಪ್ರವಚನ ಪಿತಾಮಹರೆನಿಸಿಕೊಂಡ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳ ಸಾಧನೆ ಸೇವ ಕ್ರಾಂತಿಯ ಬಗ್ಗೆ ಆಳವಾಗಿ ಬಸವ ಭಕ್ತಾಭಿಮಾನಿಗಳಿಗೆ ತಿಳಿಸಿದರು, ಹಾಗೂ ವಿಶ್ವಧರ್ಮ ಪ್ರವಚನ ಸಾರಥಿಯಾದ ಅವಿಶ್ರಾಂತ ಧರ್ಮ ಪ್ರಚಾರಕಿ ಪೂಜ್ಯ ಗಂಗಾಮಾತೆಯವರ ಪ್ರಚಾರ ಸೇವೆಯ ಬಗ್ಗೆ ಕೊಂಡಾಡಿದರು.

ಪ್ರಾರಂಭದಲ್ಲಿ ಸಭೆಯ ಅಧ್ಯಕ್ಷತೆ ವಹಿಸಿದ ಕುವೆಂಪು ನಗರದ ಮಾನಸ ವಿದ್ಯಾಸಂಸ್ಥೆಯ ಕಾರ್ಯದರ್ಶಿಗಳಾದ ಲಯನ್ ಡಿ.ಜಿ. ರಂಗಸ್ವಾಮಿಯವರು ಧ್ವಜಾರೋಹಣದೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಸಭೆಯ ಸಾನಿಧ್ಯವಹಿಸಿದ ಗಂಗಾದೇವಿಯವರು ಆಶೀರ್ವಚನ ನೀಡುತ್ತಾ ಅಧ್ಯಾತ್ಮದಲ್ಲಿ ವಿಶಿಷ್ಟ ಶಕ್ತಿ ಇದೆ. ಅದನ್ನು ಮೊದಲು ನಾವು ಅರಿಯಬೇಕು, ಉತ್ತಮ ತತ್ವ ಆದರ್ಶಗಳನ್ನು ಬೆಳೆಸಿಕೊಂಡು ಬದುಕಿದ್ದೇ ಆದರೆ ನಮ್ಮಬಾಸು ಬಂಗಾರವಾಗಲು ಸಾಧ್ಯವೆಂದು ನುಡಿದರು.

ಸ್ವಾಗತ ಮತ್ತು ಪರಿಚಯ ಭಾಷಣ ಅಮ್ಮಸಂದ್ರದ ಅಭಿಯಂತರರಾದ ಶ್ರೀ ವಿಶ್ವೇಶ್ವರಯ್ಯನವರಿಂದ ನಡೆಯಿತು. ಬಸವ ಧರ್ಮ ಪೀಠದ ಪೂಜ್ಯ ಶ್ರೀ ಮಾತೆ ಬಸವರತ್ನ ಮಾತಾಜಿ ಮಾಚೇನಹಳ್ಳಿಯ ವರ್ತಕರಾದ ಚಂದ್ರಮೌಳಿ.ಬಿ.ಎಂ., ತುರುವೇಕೆರೆ ವರ್ತಕ ಶ್ರೀ ಎಸ್.ಎಂ.ಮಲ್ಲೀಕಾರ್ಜುನಯ್ಯಾ ಹಾಗೂ ಬಟ್ಟೆ ವರ್ತಕ ಚನ್ನಬಸಪ್ಪ ಮೊದಲಾದ ನಗರದ ಗಣ್ಯವಹಾಶಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಬಸವ ಧರ್ಮಪೀಠದ ಸಾಧಕನಾದ ಮಹಾಂತೇಶ ರಾಜಗೋಳಿ ಹಾಗೂ ರವಿಕುಮಾರ, ಶಂಕರ, ಮೊದಲಾದವರಿಂದ ಗುರುಜೀ ಹಾಗೂ ಮಾತಾಜಿಯ ಪ್ರಚಾರದ ಸೇವಾ ಸಾಧನೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಗುರುಕಾಣಿಕೆ ಸಲ್ಲಿಸಿದರು. ಕೊನೆಯದಾಗಿ ಸಾಧಕಿಯರಿಂದ ಪ್ರಾರ್ಥನೆ ಜರುಗಿತು. ರಾಷ್ಟ್ರೀಯ ಬಸವ ದಳದ ಪ್ರಧಾನ ಕಾರ್ಯದರ್ಶಿ ಶರಣ. ಸಿ.ಎಂ.ಸಿದ್ಧೇಶ್ವರರವರಿಂದ ಶರಣು ಸಮರ್ಪಣೆ ನಡೆಯಿತು.

ವರದಿ ಮಾಹಿತಿ : ಮಹಾಂತೇಶ ರಾಜಗೋಳಿ , ತುರುವೇಕೆರೆ.

ಚಿನ್ಮಯಜ್ಞಾನಿ ಚನ್ನಬಸವೇಶ್ವರ ವಾಚನಾಲಯ ಉದ್ಘಾಟನೆ.

ಇಂದು ದಿನಾಂಕ 1-9-2002 ರಂದು ನಗರದ ಬಸವಮಂಟಪದಲ್ಲಿ ಚಿನ್ಮಯಜ್ಞಾನಿ ಚನ್ನಬಸವೇಶ್ವರ ವಾಚಾನಾಲಯ ಉದ್ಘಾಟನಾ ಕಾರ್ಯಕ್ರಮ ಪೂಜ್ಯ ಶ್ರೀಬಸವಕುಮಾರ ಸ್ವಾಮೀಜಿಯವರ ದಿವ್ಯ ಸಾನಿಧ್ಯದಲ್ಲಿ ಮಧ್ಯಾಹ್ನ 1 ಗಂಟೆಗೆ ಜರುಗಿತು.

ಸಾಪ್ತಾಹಿಕ ಶರಣ ಸಂಗಮ ಸಾಮೂಹಿಕ ಪ್ರಾರ್ಥನೆಯ ನಂತರ ಸರಳ ಸಮಾರಂಭದಲ್ಲಿ ಮೊದಲಿಗೆ ಧರ್ಮಪಿತ ಬಸವಣ್ಣನವರ ಮತ್ತು ಚಿನ್ಮಯಜ್ಞಾನಿ ಚನ್ನಬಸವಣ್ಣನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವುದರೊಂದಿಗೆ ವಾಚಾನಾಲಯ ಉದ್ಘಾಟನೆಗೊಂಡಿತು. ಉದ್ಘಾಟನೆ ನೆರವೇರಿಸುತ್ತಾ ಮಾತನಾಡುತ್ತಾ, ಶರಣ ಪಾಂಡುರಂಗ ಸೂರ್ಯವಂಶಿಯವರು ಚಿನ್ಮಯಜ್ಞಾನಿ ವನ್ನಬಸವೇಶ್ವರರ ಹೆಸರಿನಿಂದ ಪ್ರಾರಂಭವಾಗುವ ವಾಚನಾಲಯ ಉದ್ಘಾಟನೆ ಅವಕಾಶ ಮಾಡಿಕೊಟ್ಟದಕ್ಕೆ ಚಿರಋಣಿ ಎಂದು ತಿಳಿಸುತ್ತಾ, ನಾವು ಜೀವನ ನಡೆಸಬೇಕಾದರೆ ಎಲ್ಲ ರಂಗದಲ್ಲಿಯೂ ಜ್ಞಾನ ಅತ್ಯವಶ್ಯಕವಾಗುತ್ತದೆ. ಈ ನಿಟ್ಟನಲ್ಲಿ ಜನಸಾಮಾನ್ಯರಿಗೆ ಸಹಕರಿಸುತ್ತಿರುವ ಲಿಂಗಾಯತ ಸಮಾಜ ಹಾಗು ರಾಷ್ಟ್ರೀಯ ಬಸವ ದಳಗಳು ಅಭಿನಂದಾರ್ಹರು ಎಂದು ತಿಳಿಸಿದರು. ಪ್ರಾಸ್ತವಿಕವಾಗಿ ಮಾತನಾಡಿದ ಲಿಂಗಾಯತ ಧರ್ಮ ಮಹಾಸಭಾದ ರಾಜ್ಯ ಉಪಾಧ್ಯಕ್ಷರಾದ ಶರಣ ಶಿವರಾಜ ಪಾಟೀಲ ಅತಿವಾಳ ಅವರು ರಾಷ್ಟ್ರೀಯ ಬಸವದಳವು ಸಮಾಜಕ್ಕೆ ಅತ್ಯವಶ್ಯಕವಾಗಿ ಮಾಡಿಕೊಂಡು ರಾಷ್ಟ್ರೀಯ ಬಸವದಳಕ್ಕೆ ಮನಃಪೂರ್ವಕವಾಗಿ ಬೆಂಬಲಿಸಬೇಕಾಗಿ ವಿನಂತಿಸಿದರು.

ಮೊದಲಿಗೆ ಮಲ್ಲಿಕಾರ್ಜುನ ಮೂಲಗೆ ಸ್ವಾಗತ ಕೋರಿದರೆ, ಕಾರ್ಯಕ್ರಮವನ್ನು ರಾಷ್ಟ್ರೀಯ ಬಸವದಳದ ಪ್ರಧಾನ ಕಾರ್ಯದರ್ಶಿಗಳಾದ ಶರಣ ಕುಶಾಲರಾವ ಪಾಟೀಲ ನಿರೂಪಿಸಿದರು. ವೇದಿಕೆ ಮೇಲೆ ರಾ.ಬ.ದಳದ ಉಪಾಧ್ಯಕ್ಷರಾದ ಶರಣ ಶವಶರಣಪ್ಪಾ ಪಾಟೀಲ ಹಾರೂರಗೇರಿ, ಶರಣ ವೆ ಜಿನಾಥ ಪಾಟೀಲ, ಶರಣೆ ಲಲಿತಾ ಪಾಟೀಲ ಹಾಜರಿದ್ದರು. ಅಧ್ಯಕ್ಷತೆ ವಹಿಸಿದ ಶರಣೆ ಚಂದ್ರಮ್ಮಾ ಪಾಟೀಲ ಗಾದಗಿ ಇವರು ಮಾತನಾಡುತ್ತಾ ಸಂಘಟನೆಯ ಬಗ್ಗೆ ಸಲಹೆ ಸೂಚನೆಗಳನ್ನು ವೈಯುಕ್ತಿಕವಾಗಿ ತಮ್ಮಲ್ಲಿ ತಿಳಿಸುವಂತೆ ಸಲಹೆ ಕೊಟ್ಟರು. ಅವರು ಮುಂದುವರೆದು ಮಾತನಾಡುತ್ತಾ, ಮಾಜಿ ಸಚಿವ ನಾಗಪ್ಪ ಇವರನ್ನು ಅಪಹರಿಸಿದ ಕಾಡುಗಳ್ಳ ವೀರಪ್ಪನ್‌ನಿಂದ ಸಂಧಾನದ ಮೂಲಕ ಮಾತ್ರ ಬಿಡುಗಡೆ ಮಾಡಬೇಕೆಂದು ರಾಷ್ಟ್ರೀಯ ಬಸವ ದಳ ಆಗ್ರಹ ಪಡಿಸುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮ ದಿವ್ಯ ಸಾನಿಧ್ಯ ವಹಿಸಿದ್ದ ಪೂಜ್ಯ ಶ್ರೀ ಬಸವಕುಮಾರ ಸ್ವಾಮಿಗಳು ಆಶೀರ್ವಚನ ನೀಡುತ್ತಾ ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ. ಸತ್ಯದ ಬಲದಿಂದ ಅಸತ್ಯದ ಕೇಡೆ ನೋಡಯ್ಯಾ, ಪರುಷದ ಬಲದಿಂದ ಅವಲೋಹದ ಕೇಡ ನೋಡಯ್ಯಾ. ಲಿಂಗದೇವನ ಶರಣರ ಅನುಭಾವದಿಂದ ಎನ್ನ ಭವದ ಕೇಡು ನೋಡಯ್ಯಾ ಎನ್ನುವ ವಚನದ ಮುಖಾಂತರ ಪ್ರಪಂಚದ ಎಲ್ಲಾ ರಂಗಗಳ ಜ್ಞಾನ ಪಡೆಯುವಂತೆ ಆದೇಶಿಸಿದರು. ಜ್ಞಾನದ ಕೊರತೆಯಿಂದ ಭವಿಷ್ಯತ್ತು ಕಷ್ಟಕರವಾಗಬಹುದೆಂದು, ಜ್ಞಾನಾರ್ಜನೆಗಾಗಿ ವಾಚನಾಲಯ ಪ್ರಾರಂಭಿಸುವುದು ಅಭಿನಂದನಾರ್ಹವಾದ ಕ್ರಮವೆಂದು ಬಣ್ಣಿಸಿದರು. ಕೊನೆಯಲ್ಲಿ ರಾಷ್ಟ್ರೀಯ ಬಸವ ದಳ ನಗರ ಘಟಕದ ಅಧ್ಯಕ್ಷರಾದ ಶರಣ. ವಿವೇಕಾನಂದ ಪಟ್ನೆ ಶರಣು ಸಮರ್ಪಿಸಿದರು.

- ವರದಿ. ಶರಣ. ಬಸವರಾಜ ಖೇಡಕರ, ರಾ.ಬ.ದಳ ನಗರ ಘಟಕ, ಬಸವ ಮಂಟಪ, ಬೀದರ.

ಚಿನ್ಮಯ ಜ್ಞಾನಿ ಚನ್ನಬಸವಣ್ಣನವರ ಜಯಂತಿಯು ದೀಪಾವಳಿ ಪಾಡ್ಯ ದಿ. 5-11-2002 ರಂದು ಬಂದಿದೆ. ಚನ್ನಬಸವಣ್ಣನವರ ಜಯಂತಿಯನ್ನು ವಚನ ದೀಪೋತ್ಸವ ದಿನವನ್ನಾಗಿ ಆಚರಿಸಿರಿ.

ಮುಖ್ಯ ಮಂತ್ರಿ ಎಸ್.ಎಂ. ಕೃಷ್ಣ ಅವರಿಗೆ ಕೋರಿಕೆ ಪತ್ರ

ಗೆ,

ಶ್ರೀಯುತ. ಎಸ್.ಎಂ. ಕೃಷ್ಣ ಅವರು
ಮಾನ್ಯ ಮುಖ್ಯ ಮಂತ್ರಿಗಳು
ಕರ್ನಾಟಕ ಸರ್ಕಾರ, ವಿಧಾನ ಸೌಧ
ಬೆಂಗಳೂರು - 560001

ವಿಷಯ : 1. ಪೋಲೀಸ್ ಕಾರ್ಯಾಚರಣೆ ನಿಲ್ಲಿಸಲು ಕೋರಿಕೆ.
2. ಮಾಜಿ ಸಚಿವ ಶ್ರೀ ನಾಗಪ್ಪನವರ ಶೀಘ್ರ ಬಿಡುಗಡೆಗೆ ಸಂಧಾನ ಮಾರ್ಗ ಅನುಸರಣೆಗೆ ಆಗ್ರಹ.
3. ಸಚಿವ ಶ್ರೀ ರಾಜೂಗೌಡರ ರಾಜೀನಾಮೆಗೆ ಆಗ್ರಹ.
4. ರಾಷ್ಟ್ರೀಯ ಬಸವ ದಳಕ್ಕೆ ಸಂಧಾನಕ್ಕೆ ಅವಕಾಶ ಮಾಡಿಕೊಡಲು ಆಗ್ರಹ.
5. ಶ್ರೀಮತಿ ಪರಿಮಳಾ ನಾಗಪ್ಪ ಅವರಿಗೆ ಬೆಂಬಲ.
6. ಕಾವೇರಿ ನೀರಿನ ವಿಷಯದಲ್ಲಿ ದೃಢ ನಿರ್ಧಾರ ತಳೆಯಲು ವಿನಂತಿ.

ದಂತ ಚೋರ, ಕುಖ್ಯಾತ ನರಹಂತಕ ವೀರಪ್ಪನ್ ನಮ್ಮ ರಾಜ್ಯದ ಜನಪ್ರಿಯ ರಾಜಕೀಯ ಧುರೀಣರೂ, ಮಾಜಿ ಸಚಿವರೂ ಆದ ಶ್ರೀ ಹೆಚ್.ನಾಗಪ್ಪ ಅವರನ್ನು ಅಪಹರಿಸಿ ಒತ್ತೆಯಾಳನ್ನಾಗಿ ಇರಿಸಿಕೊಂಡಿರುವುದು ನಿಜಕ್ಕೂ ಆಘಾತಕಾರಿಯಾದ ಸಂಗತಿ. ಅವರ ಕುಟುಂಬದವರ ದುಃಖದಲ್ಲಿ ನಾವೆಲ್ಲರೂ ಭಾಗಿಗಳಾಗುತ್ತಿದ್ದೇವೆ. ಶ್ರೀ ಹೆಚ್. ನಾಗಪ್ಪನವರು ಮಧುಮೇಹ, ರಕ್ತದೊತ್ತಡ, ಮಂಡಿನೋವಿನಿಂದ ಬಳಲುತ್ತಿರುವುದರಿಂದ ಕಾಡಿನಲ್ಲಿ ಒತ್ತೆಯಾಳಾಗಿ ಇರುವ ಶ್ರೀಯುತರು ಹೇಗಿದ್ದಾರೆ ಎಂಬ ಸಂಗತಿ ಎಷ್ಟೂ ತಿಳಿಯದೆ ಇನ್ನಷ್ಟು ಆತಂಕ ನಮಗೆಲ್ಲ ಉಂಟಾಗಿದೆ. ಇಂಥ ಸನ್ನಿವೇಶದಲ್ಲಿ ಕರ್ನಾಟಕ ಸರ್ಕಾರದ ಮುಖ್ಯ ಮಂತ್ರಿಗಳಾದ ತಾವು, ಗೃಹ ಮಂತ್ರಿಗಳು ಮತ್ತು ಪೋಲೀಸ್ ಇಲಾಖೆ ಸೂಕ್ತ ರೀತಿಯಲ್ಲಿ ವ್ಯವಹರಿಸುತ್ತಿಲ್ಲ ಎಂಬ ಭಾವನೆ ಇಡೀ ರಾಜ್ಯದಾದ್ಯಂತ ಉಂಟಾಗಿದೆ.

ಶ್ರೀಯುತ ಡಾ|| ರಾಜಕುಮಾರ್ ಅವರ ಅಪಹರಣವು ಇದೇ ವೀರಪ್ಪನ್‌ನಿಂದ ಆದಾಗ ಸಂಧಾನ ಮಾರ್ಗದ ಮೂಲಕ ಸರ್ಕಾರವು ಅವರನ್ನು ಬಿಡಿಸಿಕೊಂಡಿತು. ವೀರಪ್ಪನ್ ಕೃತ್ಯಗಳಿಂದಾಗಿ ಅಪಾರ ಹಾನಿಯಾಗುತ್ತಿದೆ ಎಂದು ಗೊತ್ತಿದ್ದೂ ಡಾ|| ರಾಜಕುಮಾರ್ ಅವರ ಬಿಡುಗಡೆಯಾಗುತ್ತಲೇ ಯಾವುದೇ ರೀತಿಯಲ್ಲಿ ವೀರಪ್ಪನ್ ಅನ್ನು ಬಂಧಿಸಲಾಗಲಿ, ಆತನ ಚಟುವಟಿಕೆ ನಿಗ್ರಹಿಸಲಾಗಲಿ ಪೋಲೀಸ್ ಇಲಾಖೆ ತೀವ್ರತರ ಕಾರ್ಯಾಚರಣೆ ಮಾಡದೆ ಇದ್ದಿತು ; ಮಾತ್ರವಲ್ಲ ಬರೀ ವರ್ಗಾವಣೆ ರಾಜಕೀಯ ಮಾಡಿ ಕರ್ನಾಟಕ ಸರ್ಕಾರವೇ ಪೋಲೀಸ್ ಅಧಿಕಾರಿಗಳ ನೈತಿಕ ಸ್ಥೈರ್ಯವನ್ನು ಕುಂದಿಸಿತು ಎಂಬ ಆರೋಪವು ದಟ್ಟವಾಗಿಯೇ ಕೇಳಿ ಬರುತ್ತಿದೆ. ಈ ನಿರ್ಲಕ್ಷ್ಯದಿಂದಾಗಿ ವೀರಪ್ಪನ್ ಪುನಃ ಚಿಗುರಿಕೊಂಡು ಶ್ರೀ ನಾಗಪ್ಪನವರನ್ನು ಅಪಹರಿಸುವ ಕೆಲಸ ಮಾಡಿದ್ದಾನೆ.

ನರ ಹಂತಕ ವೀರಪ್ಪನ್ ಪೋಲೀಸರನ್ನು ನಖಶಿಖಾಂತ ದ್ವೇಷಿಸುವವನು. ಶ್ರೀ ನಾಗಪ್ಪನವರ ಬಗ್ಗೆ ವೈಯಕ್ತಿಕ ದ್ವೇಷ ಹೊಂದಿರದೆ ಸರ್ಕಾರವನ್ನು ತನ್ನ ಇಚ್ಛೆಗೆ ತಕ್ಕಂತೆ ಬಗ್ಗಿಸಲು ಶ್ರೀ ನಾಗಪ್ಪನವರನ್ನು ಅಪಹರಿಸಿದ್ದಾನೆಂಬುದು ಸುಸ್ಪಷ್ಟ. ಹೀಗಿರುವಾಗ ನಾಗಪ್ಪನವರು ಒತ್ತೆಯಾಳಾಗಿ ವೀರಪ್ಪನ್ ಕೈಯಲ್ಲಿ ಸಿಕ್ಕಿರುವಾಗ ಪೋಲೀಸ್ ಕಾರ್ಯಾಚರಣೆಯನ್ನು ತೀವ್ರಗೊಳಿಸಲಾಗಿದೆ ಎಂದು ತಮ್ಮ ಸರ್ಕಾರ ಪತ್ರಿಕಾ ಹೇಳಿಕೆ ಕೊಡುತ್ತಿರುವುದು ಸೂಕ್ತವೇ, ವಿವೇಕಯುಕ್ತವೆ ?

ಪೋಲೀಸ್ ಬಲವನ್ನು ಬಳಸುವುದರಿಂದ ವೀರಪ್ಪನ್ ರೊಚ್ಚಿಗೆದ್ದು ನಾಗಪ್ಪನವರ ಜೀವಕ್ಕೆ ಅಪಾಯ ಉಂಟು ಮಾಡಿದರೆ ಆ ಅನ್ಯಾಯವನ್ನು ಸರಿ ಪಡಿಸಲು ಸಾಧ್ಯವೆ ? ದಿನ ನಿತ್ಯವೂ ಪತ್ರಿಕೆಗಳನ್ನು ಓದುವ ಹವ್ಯಾಸವಿರುವ ವೀರಪ್ಪನ್ ಪತ್ರಿಕೆಗಳ ಮೂಲಕ ಪೋಲೀಸ್ ಕಾರ್ಯಾಚರಣೆಯ ತೀವ್ರತೆ ಕುರಿತು ಓದಿ, ಶ್ರೀ ನಾಗಪ್ಪನವರ ಮೇಲೆ ಸೇಡು ತೀರಿಸಿಕೊಂಡರೆ ಹೇಗೆ ? ಇದು ಸರ್ಕಾರದ ನಿಷ್ಕ್ರಿಯತೆಗೆ ಸಾಕ್ಷಿಯಾಗಿ ಅಳಿಸಲಾರದ ಕಳಂಕವನ್ನು ಉಂಟು ಮಾಡದೇ ಇರದಲ್ಲವೆ? ಮಾತ್ರವಲ್ಲ ಕಾಂಗ್ರೆಸ್ಸಿಗೆ ರಾಜಕೀಯ ಪ್ರತಿಸ್ಪರ್ಧಿಯಾಗಿರುವ ಶ್ರೀ ನಾಗಪ್ಪನವರ ಮೇಲೆ ಸೇಡು ತೀರಿಸಿಕೊಳ್ಳುವ ಸಂಚು ಇದು ಎಂಬ ಆರೋಪವು ಸರ್ಕಾರದ ಮೇಲೆ ಎರಗುವುದಿಲ್ಲವೆ ?

ಆದ್ದರಿಂದ ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಬಸವ ದಳದ ಪರವಾಗಿ ಕೆಳಕಂಡ ಬೇಡಿಕೆಗಳನ್ನು ಸಲ್ಲಿಸುತ್ತಿದ್ದೇವೆ.

1. ಪೋಲೀಸ್ ಕಾರ್ಯಾಚರಣೆ ನಿಲ್ಲಬೇಕು

ಮಾಜಿ ಸಚಿವ ಶ್ರೀ ಹೆಚ್. ನಾಗಪ್ಪನವರು ಸುರಕ್ಷತವಾಗಿ ಮನೆಗೆ ಬರುವ ತನಕ ಪೋಲೀಸ್ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಬೇಕು, ಪಡೆಗಳನ್ನು ವಾಪಸ್ಸು ಪಡೆಯಬೇಕು. ಕಾರ್ಯಾಚರಣೆ ಸ್ಥಗಿತಗೊಳಿಸಿದ ಬಗ್ಗೆ ಪತ್ರಿಕೆ, ದೂರದರ್ಶನ ಮತ್ತು ರೇಡಿಯೋ ಮೂಲಕ ವ್ಯಾಪಕ ಪ್ರಚಾರ ಕೊಡಬೇಕು.

2. ಸಂಧಾನ ತೀವ್ರವಾಗಿ ಆಗಬೇಕು

ಸಂಧಾನ ಮಾರ್ಗಕ್ಕೆ ಒತ್ತುಕೊಟ್ಟು ಶೀಘ್ರವಾಗಿ ಸಂಧಾನಕಾರರನ್ನು ಕಳಿಸಿ, ಪರಿಹಾರ ಹುಡುಕಬೇಕು. ಸಂಧಾನಕಾರರನ್ನು ಕಳಿಸುವಲ್ಲಿ ವಿಳಂಬವನ್ನು ಮಾಡಲೇ ಕೂಡದು. ಏಕೆಂದರೆ ಶ್ರೀ ನಾಗಪ್ಪನವರು ಅನಾರೋಗ್ಯದಿಂದ ಬಳಲುತ್ತಿದ್ದು, ಪೋಲೀಸ್ ಕಾರ್ಯಾಚರಣೆಯಿಂದಾಗಿ ಕಾಡಿನೊಳಕ್ಕೆ ಆಹಾರ ಮತ್ತು ಔಷಧಿಗಳು ಸರಬರಾಜು ಆಗದೆ ಇರುವುದು ಇನ್ನೂ ಆಘಾತಕಾರಿ ಸಂಗತಿ. ಮಧು ಮೇಹ ರೋಗಿಗಳಿಗೆ ನಿತ್ಯವೂ ಔಷಧಿ ಲಭ್ಯವಾಗದೆ ರಕ್ತದಲ್ಲಿ ಸಕ್ಕರೆಯ ಅಂಶ ಮಿತಿ ಮೀರಿದರೆ ಕೋಮಾ ಸ್ಥಿತಿಗೆ ಹೋದರೆ ಕಾಡಿನಲ್ಲಿ ಚಿಕಿತ್ಸೆ ಹೇಗೆ ಸಾಧ್ಯ ? ಮಾಂಸಾಹಾರಿಯಲ್ಲದ, ಸಾತ್ವಿಕ ಆಹಾರ ಪದ್ಧತಿಯನ್ನು ರೂಢಿಸಿಕೊಂಡ ನಾಗಪ್ಪನವರಿಗೆ ಕಾಡಿನ ಜೀವನ ಅದೆಷ್ಟು ಕಷ್ಟಕರವಾದುದು ಎಂಬ ಬಗ್ಗೆ ಕರ್ನಾಟಕ ಸರ್ಕಾರವು ಎಷ್ಟೂ ಆಲೋಚಿಸದೆ, ಉದಾಸೀನ ಧೋರಣೆ ತಳೆದಿರುವುದು

ಸಮರ್ಥನೀಯವೆ ? ಆದ್ದರಿಂದ ಗಂಭೀರವಾಗಿ ಸಂಧಾನದ ಪ್ರಯತ್ನವನ್ನು ತಾವು ಆರಂಭಿಸಲೇಬೇಕು. ವೀರಪ್ಪನ್ ತನ್ನ ಬಳಿಗೆ ಸಂಧಾನಕಾರರನ್ನಾಗಿ ಕೊಳತ್ತೂರು ಮಣಿಯವರನ್ನು ಕಳಿಸಲು ಕೇಳಿದ್ದಾನೆ. ಕೊಳತ್ತೂರು ಮಣಿಯ ಮೇಲೆ ಅನೇಕ ಅಪರಾಧಗಳ ಆರೋಪ ಇರಬಹುದು. ಆದರೆ ವೀರಪ್ಪನ್ ಬಯಸಿದ ವ್ಯಕ್ತಿಯನ್ನು ಕಳಸದಿದ್ದರೆ ಆತ ಬೇರಾವುದಕ್ಕೂ ಕಿವಿಗೊಡಲಿಕ್ಕಿಲ್ಲ. ಆದ್ದರಿಂದ ಕೊಳತ್ತೂರು ಮಣಿಯವರನ್ನು ಕಳಿಸಲು ಸೂಕ್ತವಾದ ವ್ಯವಸ್ಥೆ ಮಾಡಬೇಕು.

3. ರಾಜೂಗೌಡರ ರಾಜೀನಾಮೆಗೆ ಆಗ್ರಹ

ಶ್ರೀ ಜಿ. ರಾಜೂಗೌಡರು ಕೊಳ್ಳೇಗಾಲ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿ ಕೃಷಿ ಸಂಸ್ಕರಣೆ ಸಚಿವರಾಗಿದ್ದಾರೆ ; ಮಾತ್ರವಲ್ಲ ಜಿಲ್ಲಾ ಉಸ್ತುವಾರಿ ಮಂತ್ರಿಯೂ ಆಗಿದ್ದಾರೆ. ಹೀಗಾಗಿ ಜಿಲ್ಲೆಯಲ್ಲಿ ಸರ್ಕಾರದಿಂದ ಸಂಭವಿಸಬಹುದಾದ ಒಳ್ಳೆಯ ಹಾಗೂ ಕೆಟ್ಟ ಕೆಲಸಗಳಿಗೆ ಅವರು ಭಾಗೀದಾರರಾಗುತ್ತಾರೆ. ಆದ್ದರಿಂದ ರಾಜಕೀಯ ಪ್ರತಿಸ್ಪರ್ಧಿಯಾದ ನಾಗಪ್ಪನವರ ಅಪಹರಣದಲ್ಲಿ ಶ್ರೀ ರಾಜೂಗೌಡರ ಕೈವಾಡವಿದೆ ಎಂಬ ದಟ್ಟ ವದಂತಿಯು ಕೊಳ್ಳೇಗಾಲದ ಸುತ್ತಲೂ ಹಬ್ಬಿದೆ. ಚುನಾವಣೆಯ ಸಂದರ್ಭದಲ್ಲಿ ವೀರಪ್ಪನ್ ಸ್ವತಃ ಗ್ರಾಮಗಳಿಗೆ ಬಂದು ಶ್ರೀ ರಾಜೂಗೌಡರ ಪರವಾಗಿ ಪ್ರಚಾರ ಮಾಡಿದ್ದು ಸತ್ಯ ಸಂಗತಿ ಎಂದು ಜನರ ಹೇಳಿಕೆ. ಆದ್ದರಿಂದ ಶ್ರೀ ರಾಜೂ ಗೌಡರು ನಾಗಪ್ಪನವರೊಡನೆ ಇರುವ ರಾಜಕೀಯ ವೈರತ್ವವನ್ನು ಮಾನವೀಯ ದೃಷ್ಟಿಯಿಂದ ಬದಿಗೆ ಸರಿಸಿ ತಾವೇ ಅಧಿಕೃತ ಸಂಧಾನಕಾರರಾಗಿ ತೆರಳಿ, ನಾಗಪ್ಪನವರನ್ನು ಸುರಕ್ಷಿತವಾಗಿ ಬಿಡಿಸಿಕೊಂಡು ಬಂದು ತಮ್ಮ ಮೇಲಿರುವ ಆರೋಪವನ್ನು ಪರಿಹರಿಸಿಕೊಳ್ಳುವುದು ಅತ್ಯಂತ ಸೂಕ್ತ. ಇದು ಸಾಧ್ಯವಿಲ್ಲದಿದ್ದರೆ ತಮ್ಮ ಜಿಲ್ಲೆಯಲ್ಲಿ ಸಂಭವಿಸಿರುವ ಇಂಥ ದುರ್ಘಟನೆಯನ್ನು ನಿಭಾಯಿಸಲಾರದ ನೈತಿಕ ಹೊಣೆ ಹೊತ್ತು ಸಚಿವ ಪದವಿಗೆ ರಾಜೀನಾಮೆ ಕೊಡುವುದು ಪ್ರಜಾಪ್ರಭುತ್ವಕ್ಕೆ ಗೌರವ ತರುವ ಸಂಗತಿ ; ಸ್ವಯಂ ಪ್ರೇರಣೆಯಿಂದ ರಾಜೀನಾಮೆ ಕೊಡದಿದ್ದರೆ ಮುಖ್ಯ ಮಂತ್ರಿಗಳಾದ ತಾವು ಶ್ರೀ ರಾಜೂ ಗೌಡರಿಂದ ರಾಜೀನಾಮೆ ಪಡೆದು, ಸರ್ಕಾರಕ್ಕೆ ಅಂಟಿರುವ ರಾಜಕೀಯ ವೈರತ್ವದ ಸಂಚಿನ ಕಲಂಕ ತೊಡೆದುಕೊಳ್ಳಬೇಕು.

4. ರಾಷ್ಟ್ರೀಯ ಬಸವ ದಳ ವೀರಪ್ಪನ್ ಜೊತೆಗೆ ಸಂಧಾನ ನಡೆಸಲು ಅವಕಾಶ ನೀಡಲು ಆಗ್ರಹ

ವೀರಪ್ಪನ್ ಬಯಸಿರುವಂತೆ ಬಂಧನದಲ್ಲಿರುವ ಕೊಳತ್ತೂರು ಮಣಿಯನ್ನು ಕಳಿಸಲು ಸರ್ಕಾರಕ್ಕೆ ಇಷ್ಟವಿಲ್ಲದೆ ಇದ್ದರೆ, ಸಚಿವ ಶ್ರೀ ರಾಜೂಗೌಡರು ಸಂಧಾನಕ್ಕೆ ಹೋಗಲು ಇಷ್ಟಪಡದೆ ಇರುವುದರಿಂದ ಮತ್ತು ರಾಷ್ಟ್ರೀಯ ಬಸವ ದಳದ ಪ್ರತಿನಿಧಿಗಳನ್ನು ಸಂಧಾನಕ್ಕೆ ಕಳಿಸಲು ಸಿದ್ದರಿರುವುದರಿಂದ ರಾಷ್ಟ್ರೀಯ ಬಸವ ದಳಕ್ಕೆ ವೀರಪ್ಪನ್ ಜೊತೆ ಸಂಧಾನ ಮಾಡಲು ಅವಕಾಶ ಮಾಡಿಕೊಡಬೇಕೆಂದು ಆಗ್ರಹಿಸುತ್ತೇವೆ.

5. ಶ್ರೀಮತಿ ಪರಿಮಳಾ ನಾಗಪ್ಪ ಅವರಿಗೆ ಬೆಂಬಲ.

ಶ್ರೀ ನಾಗಪ್ಪ ಅವರ ಬಿಡುಗಡೆ ವಿಷಯದಲ್ಲಿ ಸರ್ಕಾರದ ವಿಳಂಬ ನೀತಿಯನ್ನು ಪ್ರತಿಭಟಿಸಿ , ತೀವ್ರವಾಗಿ ನಾಗಪ್ಪನವರು ಬಿಡುಗಡೆ ಆಗಬೇಕೆಂದು ಆಗ್ರಹಿಸಿ ಶ್ರೀಮತಿ ಪರಿಮಳಾ ನಾಗಪ್ಪ ಅವರು ಕೈ ಗೊಳ್ಳಲಿರುವ ಉಪವಾಸ ಸತ್ಯಾಗ್ರಹವನ್ನು ರಾಷ್ಟ್ರೀಯ ಬಸವ ದಳವು ಬೆಂಬಲಿಸಿ ತಾನೂ ಭಾಗಿಯಾಗುತ್ತದೆ ಎಂಬುದನ್ನು ಸ್ಪಷ್ಟಪಡಿಸುತ್ತೇವೆ.

6. ಕಾವೇರಿ ನೀರಿನ ವಿಷಯದಲ್ಲಿ ದೃಢ ನಿಲುವು ಅಗತ್ಯ

ಕಾವೇರಿ ಹಳೆ ಮೈಸೂರು ಪ್ರಾಂತ್ಯದ ಜೀವನಾಡಿ. ಕರ್ನಾಟಕ ರಾಜ್ಯವು ಈ ಸಲ ತೀವ್ರವಾದ ಬರಗಾಲವನ್ನು ಎದುರಿಸುತ್ತಿದೆ. ಹಿಂದಿನ ವರ್ಷವೂ ಸರಿಯಾಗಿ ಮಳೆಯಾಗದೆ ಅಣೆಕಟ್ಟುಗಳು ತುಂಬಲಿಲ್ಲ. ಈ ವರ್ಷ ಮಳೆ ಇನ್ನೂ ಕಮ್ಮಿಯಾಗಿ ಜಲಾಶಯಗಳು ಪೂರ್ತಿ ತುಂಬಿಲ್ಲ. ನೀರಿನ ಕೊರತೆ ಇದ್ದರೂ ಇದನ್ನು ಸುಪ್ರೀಂ ಕೋರ್ಟಿಗೆ ಮನವರಿಕೆ ಮಾಡಿಕೊಡುವಲ್ಲಿ ಕರ್ನಾಟಕ ಸರ್ಕಾರ ವಿಫಲಗೊಂಡಿದೆ. ಆದ್ದರಿಂದ ಮುಖ್ಯ ಮಂತ್ರಿಗಳಾದ ತಾವು ಮತ್ತು ತಮ್ಮ ಸಚಿವ ಸಂಪುಟ ಈ ವಿಷಯದಲ್ಲಿ ದೃಢ ನಿಲುವು ತಳೆದು ತಮಿಳುನಾಡಿಗೆ ಕಾವೇರಿ ಅಥವಾ ಕಬಿನಿಯಿಂದ ನೀರು ಬಿಡಬಾರದು. ಈ ದಿಶೆಯಲ್ಲಿ ಕರ್ನಾಟಕ ರಾಜ್ಯದಾದ್ಯಂತ ಎಲ್ಲರ ಬೆಂಬಲ ತಮಗಿದೆ ಎಂದು ದೃಢಪಡಿಸುತ್ತೇವೆ.

ಇದಕ್ಕೆ ವಿರುದ್ಧವಾಗಿ ಪೋಲೀಸ್ ಕಾರ್ಯಾಚರಣೆಯನ್ನು ತೀವ್ರಗೊಳಿಸಿ ಶ್ರೀ ನಾಗಪ್ಪನವರ ಬಿಡುಗಡೆಯನ್ನು ನಿಧಾನಗೊಳಿಸಿದರೆ, ಅವರಿಗೆ ಏನಾದರೂ ಅಪಾಯವಾಗುವಂತಾದರೆ, ಸಂಧಾನ ಮಾರ್ಗಕ್ಕೆ ತಾವು ಒತ್ತುಕೊಡದಿದ್ದರೆ,ರಾಷ್ಟ್ರೀಯ ಬಸವ ದಳವು ತನ್ನ ಪ್ರತಿನಿಧಿಗಳನ್ನು ವೀರಪ್ಪನ್ ಜೊತೆಗೆ ಸಂಧಾನಕ್ಕೆ ಕಳಿಸಲು ಅವಕಾಶ ಮಾಡಿಕೊಡದೆ ಇದ್ದರೆ ಒಂದು ವಾರ ಕಾಲ ಕಾಯ್ದು ನಂತರ ಅನಿವಾರ್ಯವಾಗಿ ರಾಷ್ಟ್ರೀಯ ಬಸವ ದಳವು ವಿವಿಧ ಹಂತದ ಪ್ರತಿಭಟನಾತ್ಮಕ ಹೋರಾಟವನ್ನು ರಾಜ್ಯಾದ್ಯಂತವೂ ಹಮ್ಮಿಕೊಳ್ಳುತ್ತದೆಂದು ಸ್ಪಷ್ಟವಾಗಿ ತಿಳಿಸಬಯಸುತ್ತೇವೆ.

ಶ್ರೀ ಡಾ|| ರಾಜಕುಮಾರ್ ಅವರ ಅಪಹರಣದ ಸಂದರ್ಭದಲ್ಲಿ ಬಿಡುಗಡೆಗೆ ತಾವು ವಹಿಸಿದ ಆಸಕ್ತಿ, ಕಾಳಜಿಯನ್ನು ಈಗ ತೋರಿಸುತ್ತಿಲ್ಲ ಎಂಬ ಶಂಕೆ ಎಲ್ಲರಲ್ಲಿ ಬಲಿಯುತ್ತಿದೆ. ಶಾಂತಿ ಭಂಗ, ಸಾರ್ವಜನಿಕ ಆಸ್ತಿ ಪಾಸ್ತಿಗೆ ಹಾನಿ ಮುಂತಾದ ಚಟುವಟಿಕೆಗಳಲ್ಲಿ ಆಸಕ್ತಿ ಇಲ್ಲದ ರಾಷ್ಟ್ರೀಯ ಬಸವ ದಳದವರು ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿಯೇ ಪ್ರತಿಭಟಿಸಲು ನಿರ್ಧರಿಸಲಾಗಿದ್ದು ರಾಷ್ಟ್ರೀಯ ಬಸವ ದಳಗಳ ಜಿಲ್ಲಾ ಮತ್ತು ತಾಲ್ಲೋಕು ಘಟಕಗಳು ಮೊದಲಿಗೆ ಮನವಿಯನ್ನು ಅರ್ಪಿಸಲಿದ್ದು, ನಂತರ ಹಂತಹಂತವಾಗಿ ರಸ್ತೆ ತಡೆ ಚಳುವಳಿ, ಧರಣಿ ಸತ್ಯಾಗ್ರಹ, ಆಮರಣ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಲಿವೆ. ಆದ್ದರಿಂದ ತಾವು ಗಂಭೀರವಾಗಿ ಸೂಕ್ತ ಸಂಧಾನದ ಮೂಲಕ ಶ್ರೀ ನಾಗಪ್ಪನವರ ಸುರಕ್ಷಿತ ಬಿಡುಗಡೆಗೆ ಶೀಘ್ರವಾಗಿ ಕಾರ್ಯೋನ್ಮುಖರಾಗಬೇಕೆಂದು ಕೋರುತ್ತೇವೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ರಾಷ್ಟ್ರೀಯ ಬಸವ ದಳ

ಬೆಂಗಳೂರು
13-9-2002

ವೀರಪ್ಪನ್ ಜೊತೆ ಸಂಧಾನಕ್ಕೆ ರಾಷ್ಟ್ರೀಯ ಬಸವ ದಳದ ತಂಡ ರಚನೆ

- ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

"ಮಾಜಿ ಸಚಿವರಾದ ಶ್ರೀ ಹೆಚ್. ನಾಗಪ್ಪನವರನ್ನು ವೀರಪ್ಪನ್ ಮನ ಒಲಿಸಿ ಬಿಡಿಸಿಕೊಂಡು ಬರಲು ರಾಷ್ಟ್ರೀಯ ಬಸವ ದಳವು ಆಸಕ್ತಿ ವಹಿಸಿದ್ದು ಇದಕ್ಕಾಗಿ ಐದು ಜನರ ತಂಡವನ್ನು ರಚಿಸಲಾಗಿದೆ. ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವ ದಳದ ಪ್ರಧಾನ ಕಾರ್ಯದರ್ಶಿಗಳಾದ ಶಿವಕುಮಾರ್ ಡಾಕುಳಗೆಯವರ ನೇತೃತ್ವದಲ್ಲಿ ತಂಡವು ಹೊರಟಿದ್ದು ತಂಡದಲ್ಲಿರುವ ಇತರ ಸದಸ್ಯರೆಂದರೆ ಶ್ರೀಕಂಠಕುಮಾರ್, ಮೃತ್ಯುಂಜಯಪ್ಪ, ನಾಗರಾಜ್ ಮತ್ತು ತಮಿಳು ಭಾಷೆ ಮಾತನಾಡಬಲ್ಲ ವೀರಪ್ಪನವರು.

ಎಸ್.ಟಿ.ಎಫ್ ಪಡೆಯ ನೇತೃತ್ವ ವಹಿಸಿರುವ ಶ್ರೀ ಜ್ಯೋತಿ ಪ್ರಕಾಶ್ ಮಿರ್ಜಿಯವರನ್ನು ಭೇಟಿಯಾಗಿ ಅನುಮತಿ, ಸಲಹೆ, ಸೂಚನೆ ಪಡೆದು ಈ ಶರಣರ ತಂಡವು ಗುರುವಾರ ಅರಣ್ಯವನ್ನು ಪ್ರವೇಶಿಸಲಿದೆ. ಗ್ರಾಮೀಣ ಪ್ರದೇಶದ ಜನರನ್ನು ಒಲಿಸಿಕೊಂಡು ವೀರಪ್ಪನ್ ಅಡಗಿರುವ ಅರಣ್ಯದ ಪ್ರದೇಶವನ್ನು ಪ್ರವೇಶಿಸುವ ಯೋಜನೆ ಹಾಕಿಕೊಂಡಿದೆ. ಎಂದು ರಾಷ್ಟ್ರೀಯ ಬಸವ ದಳದ ಕಾರ್ಯಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಷ್ಟ್ರೀಯ ಬಸವ ದಳದಿಂದ ಸಂಧಾನಕ್ಕೆ ಅವಕಾಶ ನೀಡದ ಧೋರಣೆ ಖಂಡನಾರ್ಹ

"ರಾಷ್ಟ್ರೀಯ ಬಸವ ದಳವು ವೀರಪ್ಪನ್ ಜೊತೆ ಸಂಧಾನವನ್ನು ಮಾಡಲು ಸ್ವಯಂ ಪ್ರೇರಣೆಯ ನಿರ್ಧಾರ ತೆಗೆದುಕೊಂಡಿರುವುದರಿಂದ ಮುಂದಿನ ಆಗು ಹೋಗುಗಳಿಗೆ ಸರ್ಕಾರವು ಖಂಡಿತ ಹೊಣೆ ಹೊರಬೇಕಾಗಿಲ್ಲ ಎಂದು ಸ್ಪಷ್ಟಪಡಿಸುತ್ತೇವೆ. ಈ ಪ್ರಯತ್ನದ ಗುರಿ ಶ್ರೀ ಹೆಚ್.ನಾಗಪ್ಪನವರನ್ನು ಸುರಕ್ಷಿತವಾಗಿ ಕರೆತರುವುದು ಮಾತ್ರವಲ್ಲ ವೀರಪ್ಪನಲ್ಲಿ ನೈತಿಕ ಮತ್ತು ಅಧ್ಯಾತ್ಮಿಕ ಪರಿವರ್ತನೆ ತರುವುದು. ದಿ. 13-9-2002 ರಂದು ಪತ್ರಿಕಾಗೋಷ್ಠಿಯನ್ನು ಕರೆದು ವೀರಪ್ಪನ್‌ನೊಡನೆ ಸಂಧಾನಕ್ಕೆ ರಾಷ್ಟ್ರೀಯ ಬಸವ ದಳವು ಸಿದ್ಧ ಎಂದು ಪತ್ರಿಕೆಗಳ ಮೂಲಕ ತಿಳಿಸಿದ್ದಲ್ಲದೆ ಮುಖ್ಯ ಮಂತ್ರಿಗಳಿಗೆ ಲಿಖಿತ ರೂಪದಲ್ಲಿ ಪತ್ರ ಕೊಡಲಾಗಿದೆ. ಅದರ ಪ್ರತಿಯನ್ನು ಪೋಲೀಸ್ ಮಹಾ ನಿರ್ದೇಶಕರಿಗೂ ಅಂದೇ ತಲುಪಿಸಲಾಗಿದೆ. ಆದರೆ ಈವರೆಗೂ ಸರ್ಕಾರದಿಂದ ಪ್ರತಿಕ್ರಿಯೆ ಬರದಿರುವುದು ವಿಷಾದನೀಯ. ತಾನೂ ಮುಂದುವರಿಯದೆ ಇತರರಿಗೂ ಅವಕಾಶ ಕೊಡದೆ, ಸಂಧಾನಕ್ಕೆ ಹೋಗುವ ಪ್ರಾಮಾಣಿಕ ಕಳಕಳಿಯುಳ್ಳ ರಾಷ್ಟ್ರೀಯ ಬಸವ ದಳಕ್ಕೂ ಅವಕಾಶ ಕೊಡದಿರುವ ಸರ್ಕಾರದ ಪ್ರತಿಕ್ರಿಯೆಗಾಗಿ ರಾಷ್ಟ್ರೀಯ ಬಸವ ದಳವು ಇನ್ನು ಕಾಯದೆ ಕಾರ್ಯೋನ್ಮುಖವಾಗಲು ಸಿದ್ಧವಾಗಿದೆ." ಎಂಬುದಾಗಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಸ್ಪಷ್ಟಪಡಿಸಿದ್ದಾರೆ.

(ದಿ. 16-9-2002 ರಂದು ಪತ್ರಿಕೆಗಳಿಗೆ ಬಿಡುಗಡೆ ಮಾಡಿದ ಹೇಳಿಕೆ)

ಸರ್ಕಾರದ ವಿಳಂಬ ಧೋರಣೆ ಪ್ರತಿಭಟಿಸಿ ಕೊಳ್ಳೇಗಾಲದಲ್ಲಿ ಗಾಂಧಿ ಜಯಂತಿಯಂದು ಮೌನ ಮೆರವಣಿಗೆ

ಸರ್ಕಾರದ ಮುಖ್ಯ ಸ್ಥಾನದಲ್ಲಿರುವ ಮುಖ್ಯ ಮಂತ್ರಿಗಳು ಒಂದು ಬಗೆಯ ಹೇಳಿಕೆ ಕೊಟ್ಟರೆ ಗೃಹ ಮಂತ್ರಿಗಳು ಇನ್ನೊಂದು ಬಗೆಯ ತದ್ವಿರುದ್ಧವಾದ ಹೇಳಿಕೆ ಕೊಡುತ್ತಾರೆ. ಪರಸ್ಪರ ಮುನಿಸಿಕೊಂಡು ಮಾತು ಬಿಟ್ಟ ಪತಿ-ಪತ್ನಿಯರಂತೆ ಹೊಂದಾಣಿಕೆಯಿಲ್ಲದ ಹೇಳಿಕೆ ನೀಡುತ್ತಿರುವ ಉಭಯತರ ಮಾತುಗಳಿಂದ ಜನರು ಗೊಂದಲಕ್ಕೆ ಒಳಗಾಗಿದ್ದಾರೆ. ಶ್ರೀ ರಾಜ್‌ಕುಮಾರ್ ಅವರ ಬಿಡುಗಡೆಗೆ ನೂರೆಂಟು ದಿನ ಹಿಡಿದಿರುವಾಗ ನಾಗಪ್ಪನವರ ಬಿಡುಗಡೆ ಅಷ್ಟು ಬೇಗನೆ ನಿರೀಕ್ಷಿಸಲು ಸಾಧ್ಯವೆ ? ಎಂಬ ಬೇಜವಾಬ್ದಾರಿ ಹೇಳಿಕೆಯನ್ನು ಮುಖ್ಯಮಂತ್ರಿ ಎಸ್.ಎಂ. ಕೃಷ್ಣರವರು ನೀಡಿದ್ದಾರೆಂದು ವರದಿಯಾಗಿದೆ. ಹಿಂದೆ ಡಾ|| ರಾಜಕುಮಾರ್ ಅವರ ಅಪಹರಣ ಮತ್ತು ಬಿಡುಗಡೆಯ ವಿಧಾನದಿಂದ ಸಂಧಾನವನ್ನು ತೀವ್ರಗೊಳಿಸಲು ಒಳ್ಳೆಯ ಪಾಠವನ್ನು ಕಲಿತಂತಾಗಿದೆ. ವೀರಪ್ಪನ್ ಅನ್ನು ಸಂಪರ್ಕಿಸುವ ವಿಧಾನ ತಿಳಿಯಲಿಕ್ಕೇ ಆಗ ಎಷ್ಟೋ ಸಮಯ ಹೋಯಿತು. ಈಗ ಆ ಅನವಶ್ಯಕ ವಿಳಂಬ ತಪ್ಪಿಸಲು ಸಾಧ್ಯವಿದೆ. ಹೀಗಿದ್ದೂ ಸಹ ಅನವಶ್ಯಕ ವಿಳಂಬ ಮಾಡುತ್ತ ಜನರ ಸಹನೆಯನ್ನು ಪರೀಕ್ಷಿಸುವಂತೆ ವರ್ತಿಸುತ್ತಿರುವ ಸರ್ಕಾರದ ಜಡತೆಯನ್ನು ಪ್ರತಿಭಟಿಸಿ ರಾಷ್ಟ್ರೀಯ ಬಸವ ದಳವು ಕೊಳ್ಳೇಗಾಲದಲ್ಲಿ ಅಕ್ಟೋಬರ್ 2 ಗಾಂಧಿ ಜಯಂತಿಯಂದು ಬಾಯಿಗೆ ಕಪ್ಪು ಬಟ್ಟೆ ಕಟ್ಟಿಕೊಂಡು ಮೌನವಾಗಿ ಮೆರವಣಿಗೆ ನಡೆಸಲಿದೆ." ಎಂದು ಪೂಜ್ಯ ಶ್ರೀ ಮಾತೆ ಮಹಾದೇವಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

- ಶರಣ. ಶಿವಕುಮಾರ್ ಡಾಕುಳಗೆ, ಪ್ರಧಾನ ಕಾರ್ಯದರ್ಶಿ

ಎಸ್.ಟಿ.ಎಫ್. ಮುಖ್ಯಸ್ಥರಿಗೆ ಕೋರಿಕೆ ಪತ್ರ

ಗೆ,

ಬೆಂಗಳೂರು

18-9-2002

ಶ್ರೀ ಜ್ಯೋತಿ ಪ್ರಕಾಶ್ ಮಿರ್ಜಿ
ಮುಖ್ಯಸ್ಥರು, ಎಸ್.ಟಿ.ಎಫ್. ಪಡೆ
ಮಹದೇಶ್ವರ ಬೆಟ್ಟ, ಜಿಲ್ಲೆ-ಚಾಮರಾಜನಗರ
ಇವರಿಗೆ ಶುಭಹಾರೈಕೆಗಳು

ಮಾನ್ಯರೇ,

ವಿಷಯ : ವೀರಪ್ಪನ್ ಅಪಹರಿಸಿರುವ ಮಾನ್ಯ ನಾಗಪ್ಪನವರ ಬಿಡುಗಡೆಗೆ ಪ್ರಯತ್ನಿಸಲು ಅವಕಾಶಕ್ಕಾಗಿ ಕೋರಿಕೆ.

ಕೊಳ್ಳೇಗಾಲ ಮತಕ್ಷೇತ್ರದ ಮಾಜಿ ಶಾಸಕರು, ಮಾಜಿ ಸಚಿವರು ಮತ್ತು ರಾಜಕೀಯ ಧುರೀಣರೂ ಆದ ಶರಣ. ಹೆಚ್.ನಾಗಪ್ಪನವರ ಅಪಹರಣವಾಗಿ ಇಂದಿಗೆ 23 ದಿನಗಳು ಕಳೆದಿವೆ. ಆದರೆ ಈವರೆಗೂ ಶ್ರೀಯುತರ ಕ್ಷೇಮ ಸಮಾಚಾರವೇ ತಿಳಿದಿಲ್ಲ. ಇದರಿಂದ ಶರಣ. ನಾಗಪ್ಪನವರ ಕುಟುಂಬ ವರ್ಗದವರು ಮಾತ್ರವಲ್ಲ ಇಡೀ ರಾಜ್ಯದ ಜನರು ಕಳವಳಗೊಂಡಿದ್ದಾರೆ.

ಶ್ರೀ ನಾಗಪ್ಪನವರು ಅತ್ಯಂತ ಸಾತ್ವಿಕ ಆಹಾರ-ಆಚಾರ ಉಳ್ಳವರು, ಮಾಂಸಾಹಾರಿಗಳಲ್ಲ. ಮಧುಮೇಹ, ರಕ್ತದೊತ್ತಡ, ಮಂಡಿನೋವಿನಿಂದ ಬಳಲುತ್ತಿರುವವರು. ಅವರಿಗೆ ಅಗತ್ಯವಾದ ಆಹಾರ ಮತ್ತು ಔಷಧಿ ಎರಡೂ ಪೋಲೀಸರ ದಿಗ್ಬಂಧನದಿಂದಾಗಿ ಸಿಕ್ಕದೆ ಇರುವುದರಿಂದ ಅವರ ದೇಹಸ್ಥಿತಿ ಹೇಗಿದೆಯೋ ಎಂಬ ಕಳವಳ ಎಲ್ಲರಿಗೆ ಇದೆ. ವೀರಪ್ಪನ್ ಬಳಿಗೆ ಸಂಧಾನಕ್ಕೆ ಹೋಗಲು ಈವರೆಗೂ ಯಾರೂ ಸಂಧಾನಕಾರರು ಸಿಕ್ಕಿಲ್ಲ ಎಂದು ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಗೃಹಮಂತ್ರಿಗಳು ಹೇಳುತ್ತಿದ್ದಾರಷ್ಟೇ ಅಲ್ಲ ಮುಖ್ಯಮಂತ್ರಿಗಳು ಸಂಧಾನಕ್ಕೆ ಸ್ವಯಂ ಪ್ರೇರಣೆಯಿಂದ ಹೋಗಲು ಸಿದ್ಧವಿರುವವರಿಗೆ ಆಹ್ವಾನ ಸಹ ನೀಡಿದ್ದಾರೆ. ಈ ಆಹ್ವಾನದಿಂದ ಸಂತೋಷಗೊಂಡು ಸ್ವಯಂ ಪ್ರೇರಣೆಯಿಂದ ನಾವು ರಾಷ್ಟ್ರೀಯ ಬಸವ ದಳದಿಂದ ಶರಣರ ತಂಡವನ್ನು ಕಳಿಸುವುದಾಗಿ ಪತ್ರಿಕಾ ಹೇಳಿಕೆ ಕೊಟ್ಟಿರುವುದೇ ಅಲ್ಲದೆ, ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಅವರ ಆಪ್ತಕಾರ್ಯದರ್ಶಿಯ ಮೂಲಕ ದಿ. 13-9-2002 ರಂದು ಪತ್ರವನ್ನು ತಲುಪಿಸಿ ಅನುಮತಿ ಕೇಳಿದ್ದೇವೆ. ಈ ಪತ್ರದ ಪ್ರತಿಯನ್ನು ಸನ್ಮಾನ್ಯ ಪೋಲೀಸ್ ಮಹಾನಿರ್ದೇಶಕರಿಗೂ ತಲುಪಿಸಿದ್ದೇವೆ. ರಾಷ್ಟ್ರೀಯ ಬಸವ ದಳದ ಪತಿಯಿಂದ

1. ಶರಣ. ಶಿವಕುಮಾರ್ ಡಾಕುಳಗೆ, ಪ್ರಧಾನ ಕಾರ್ಯದರ್ಶಿ, ರಾಷ್ಟ್ರೀಯ ಬಸವ ದಳ
2. ಶರಣ. ಶ್ರೀಕಂತಕುಮಾರ್, ಪ್ರಧಾನ ಸಂಚಾಲಕರು, ಬಸವ ಜ್ಯೋತಿ ಯಾತ್ರಾ ಸಮಿತಿ
3. ಶರಣ. ಮೃತ್ಯುಂಜಯಪ್ಪ, ಅಧ್ಯಕ್ಷರು, ರಾ.ಬ.ದಳ ಕೆಂಗೇರಿ ಉಪನಗರ
4. ಶರಣ. ನಾಗರಾಜಪ್ಪ, ಪ್ರಧಾನ ಕಾರ್ಯದರ್ಶಿ, ರಾ.ಬ.ದಳ ಕೆಂಗೇರಿ ಉಪನಗರ
5. ಶರಣ. ವೀರಪ್ಪ, ಸಂಚಾಲಕರು, ರಾ.ಬ.ದಳ, ಬೆಂಗಳೂರು

ಇವರನ್ನು ಆಯ್ಕೆ ಮಾಡಿದ್ದೇವೆ. ತಮ್ಮಲ್ಲಿ ನಮ್ಮ ಕೋರಿಕೆ ಕೆಳಕಂಡಂತೆ ಇದೆ.

1. ಶ್ರೀಯುತ ನಾಗಪ್ಪನವರನ್ನು ಸುರಕ್ಷಿತವಾಗಿ ವೀರಪ್ಪನ್ ಹಸ್ತದಿಂದ ಬಿಡುಗಡೆ ಮಾಡಿತರಲು ಅರಣ್ಯ ಪ್ರವೇಶಕ್ಕೆ ಅನುಮತಿ ನೀಡುವುದು.
2. ವೀರಪ್ಪನ್‌ಗೆ ನೀತಿ, ಧರ್ಮ, ಮಾನವೀಯತೆಯ ಮಹತ್ವ ತಿಳಿಸಿ ನೈತಿಕ ಪರಿವರ್ತನೆ ಮಾಡಲು ನಮ್ಮವರಿಗೆ ಅವಕಾಶ ನೀಡುವುದು.
3. ನಮ್ಮ ಶರಣರ ತಂಡದ ರಕ್ಷಣೆಗಾಗಿ ಯಾವುದೇ ಪೋಲೀಸ್ ಪಡೆಯನ್ನು ಕಳಿಸಬಾರದು.
4. ವೀರಪ್ಪನ್ ಅಡಗಿರುವ ತಾಣದ ಬಗ್ಗೆ ಅಧಿಕೃತ ಮಾಹಿತಿ ಇದ್ದರೆ ವಿವರಗಳನ್ನು ನೀಡುವುದು.

ಸರ್ವಶಕ್ತ ಪರಮಾತ್ಮನನ್ನು, ಮಂತ್ರಪುರುಷ ಬಸವಣ್ಣನವರನ್ನು ನಂಬಿ, ಮಾನವೀಯತೆಯ ನೆಲೆಗಟ್ಟಿನ ಮೇಲೆ ಶ್ರೀ ನಾಗಪ್ಪನವರನ್ನು ಬಿಡುಗಡೆ ಮಾಡಿಕೊಂಡು ಬರುವ ಪ್ರಯತ್ನದ ದೃಢ ಸಂಕಲ್ಪವನ್ನು ನಮ್ಮ ಶರಣರು ಹೊಂದಿರುವುದರಿಂದ, ಏನೇ ತೊಂದರೆ ಸಂಭವಿಸಿದರೂ ತಾವಾಗಲೀ, ಸರ್ಕಾರವಾಗಲೀ ಪೋಲೀಸ್ ಇಲಾಖೆಯಾಗಲಿ ಜವಾಬ್ದಾರಿ ಹೊರಬೇಕಾಗಿಲ್ಲ ಎಂದು ಸ್ಪಷ್ಟ ಪಡಿಸುತ್ತೇವೆ. ಕೇವಲ ಶ್ರೀ ನಾಗಪ್ಪನವರನ್ನು ಬಿಡುಗಡೆ ಮಾಡಿಸುವುದು ಮಾತ್ರವಲ್ಲ ಪದೇ ಪದೇ ರಾಜ್ಯ ಸರ್ಕಾರಗಳಿಗೆ ಒದಗುವ ಸಂಕಷ್ಟವನ್ನು ಸಹ ತಪ್ಪಿಸಿ ವೀರಪ್ಪನನ್ನು ಓರ್ವ ಗೌರವಾನ್ವಿತ ನಾಗರಿಕನನ್ನಾಗಿ ಮಾಡಬೇಕು ಎಂಬ ರಾಷ್ಟ್ರೀಯ ಬಸವ ದಳದ ಪ್ರಯತ್ನಕ್ಕೆ ತಾವು ಅನುಮತಿ ನೀಡಿ ಸಹಕರಿಸಬೇಕೆಂದು ಕೋರುತ್ತೇವೆ.

ಶುಭಹಾರೈಕೆಗಳೊಡನೆ

ಬೆಂಗಳೂರು
18-9-2002


ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ರಾ.ಬ.ದಳ (ಕೇಂದ್ರ)



ಶರಣ.ನಾಗಪ್ಪನವರ ಅಪಹರಣದಿಂದ ಆತಂಕಗೊಂಡಿರುವ ಶ್ರೀಮತಿ ಪರಿಮಳಾ ಅವರಿಗೆ ಪೂಜ್ಯ ಮಾತಾಜಿಯವರಿಂದ ಸಾಂತ್ವನ, ದಿ.6-9-2002




ಶ್ರೀಮತಿ ಪರಿಮಳಾ ಅವರಿಗೆ [illegible] ತೊಡಿಸಿ, ಆಶೀರ್ವದಿಸಿ ಸಂಕಲ್ಪಪೂಜೆಗಾಗಿ ಆಶೀರ್ವದಿಸುತ್ತಿರುವ ಪೂಜ್ಯ ಮಾತಾಜಿ.



ಶರಣೆ. ಪರಿಮಳಾನಾಗಪ್ಪ ಅವರಿಂದ ಧರ್ಮಪಿತ ಬಸವಣ್ಣನವರ ಪುಷ್ಪಾರ್ಚನೆ




ಶರಣ.ನಾಗಪ್ಪನವರ ಪತ್ನಿ ಶ್ರೀಮತಿ ಪರಿಮಳ ಮತ್ತು ಮಕ್ಕಳಿಂದ ಸಾಮೂಹಿಕ ಮಂತ್ರಪಠಣ.



ಶರಣ. ನಾಗಪ್ಪನವರ ಮಕ್ಕಳಾದ ಡಾ॥ ಪ್ರೀತಮ್, ಪವನ್, ಪ್ರಿಯಾಂಕ ಇವರಿಂದ ಮಂತ್ರಪುರುಷ ಬಸವಣ್ಣನವರಿಗೆ ಪುಷ್ಪಾರ್ಚನೆ.




ಪೂಜೆಯ ಕೊನೆಯಲ್ಲಿ ಪೂಜ್ಯ ಮಾತಾಜಿಯವರಿಂದ ಮಂಗಲಾಚರಣೆ.



ಭದ್ರಾವತಿ ರಾಷ್ಟ್ರೀಯ ಬಸವ ದಳದ ಬಸವ ಮಂಟಪ ಕಟ್ಟಡಕ್ಕೆ ಶಿಲಾನ್ಯಾಸ ಸಮಯದಲ್ಲಿ ಪೂಜೆ ಸಂಸತ್ ಸದಸ್ಯರೂ ಮಾಜಿ ಮುಖ್ಯಮಂತ್ರಿಗಳು ಆದ ಎಸ್.ಬಂಗಾರಪ್ಪ ಅವರಿಂದ.



ಪ್ರಧಾನ ಕಾರ್ಯದರ್ಶಿ ಹೆಚ್.ಎಸ್.ಬಸವರಾಜು ಅವರಿಂದ ಸ್ವಾಗತ ಎಡದಿಂದ ಬಲಕ್ಕೆ ಸಂಸತ್ ಸದಸ್ಯ ಎಸ್.ಬಂಗಾರಪ್ಪ, ಬಿ.ಟಿ.ನಾಗರಾಜು ಶಾಸಕ ಅಪ್ಪಾಜಿಗೌಡ ಮುಂತಾದ ಗಣ್ಯರು



ಶಾಸಕ ಅಪ್ಪಾಜಿ ಗೌಡರಿಂದ ಬಸವಚಿತ್ರಕ್ಕೆ ಪುಷ್ಪಾಂಜಲಿ.




ವೇದಿಕೆಯ ಮೇಲೆ ಎಸ್.ಬಂಗಾರಪ್ಪ (ಮಧ್ಯದಲ್ಲಿರುವವರು) ಅವರ ಬಲಗಡೆ ನಗರ ಸಭಾಧ್ಯಕ್ಷ ಬಿ.ಟಿ.ನಾಗರಾಜ ಎಡಭಾಗದಲ್ಲಿ ರಾಷ್ಟ್ರೀಯ ಬಸವ ದಳದ ಕಾರ್ಯಾಧ್ಯಕ್ಷ ಷಡಕ್ಷರಪ್ಪನವರು.



ವೀರಪ್ಪನಿಂದ ಅಪಹೃತವಾಗಿರುವ ಶ್ರೀ ನಾಗಪ್ಪನವರ ಬಿಡುಗಡೆಗೆ ಶೀಘ್ರ ಪ್ರಯತ್ನ ಮಾಡಲು ಆಗ್ರಹಿಸಿ ಬೀದರ್ ರಾಷ್ಟ್ರೀಯ ಬಸವ ದಳದಿಂದ ದಿ. 15-9-2002 ರಂದು ಪ್ರತಿಭಟನಾ ಮೆರವಣಿಗೆ.



ಬೀದರ್ ರಾಷ್ಟ್ರೀಯ ಬಸವ ದಳದವರು ಮಾಡಿದ ಪ್ರತಿಭಟನಾ ಮೆರವಣಿಗೆಯ ನೇತೃತ್ವವನ್ನು
ಬಸವ ಧರ್ಮ ಪೀಠದ ಪೂಜ್ಯ ಶ್ರೀ ಬಸವಕುಮಾರ ಸ್ವಾಮಿಗಳು ಮತ್ತು
ಹಿರಿಯ ನ್ಯಾಯವಾದಿ ಗಂಗಶೆಟ್ಟಿ ಪಾಟೀಲರು ವಹಿಸಿದ್ದರು.



ಬೀದರ್ ಬಸವಮಂಟಪದಲ್ಲಿ ದಿ. ರಂದು ಚಿನ್ಮಯಜ್ಞಾನಿ ಚನ್ನಬಸವೇಶ್ವರ ಪುಸ್ತಕ ಮಳಿಗೆ ಮತ್ತು ವಾಚನಾಲಯ.




ಬಸವ ಮಂಟಪದಿಂದ ಪಥ ಸಂಚಲನದಲ್ಲಿ ಸಾಗಿ ಬಂದ ರಾಷ್ಟ್ರೀಯ ಬಸವ ದಳದ ಕಾರ್ಯಕರ್ತರು ನಾಗಪ್ಪನವರ ಶೀಘ್ರ ಬಿಡುಗಡೆಗೆ ಆಗ್ರಹಿಸಿ ಮುಖ್ಯಮಂತ್ರಿಗಳಿಗೆ ಬರೆದ ಮನವಿಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದರು. ನೇತೃತ್ವ ವಹಿಸಿದ ಪೂಜ್ಯ ಬಸವಕುಮಾರ ಸ್ವಾಮಿಗಳು ಮತ್ತು ಕಾರ್ಯಾಧ್ಯಕ್ಷೆ ಶರಣೆ. ಚಂದ್ರಮ್ಮ ಪಾಟೀಲ್.

|| ಓಂ ಶ್ರೀ ಗುರು ಬಸವಲಿಂಗಾಯ ನಮಃ ||

86666



ಜಯ ಬಸವರಾಜ ಭಕ್ತಜನ ಸುರಭೂಜ
ಜಯತು ಮಹ ಕಾರಣಿಕ ಲಿಂಗದೇವನ ಘನತೇಜ
ಜಯತು ಕರುಣಾಸಿಂಧು ಭಜಕ ಜನ ಬಂಧು
ಜಯ ಇಷ್ಟದಾಯಕ ರಕ್ಷಿಸು ಶ್ರೀ ಗುರು ಬಸವಾ ||



ಶರಣ. ನಾಗಪ್ಪನವರನ್ನು ಬಿಡಿಸಿಕೊಂಡು ಕರೆತರಲು ದಿ. 21 ರಂದು ರಾಷ್ಟ್ರೀಯ ಬಸವ ದಳದವರಿಂದ ಅರಣ್ಯದೊಳಗೆ ಸಂಚಾರ ಪ್ರಾರಂಭ

(ಪೂಜ್ಯ ಮಾತಾಜಿಯವರ ಆದೇಶದಂತೆ ರಾಷ್ಟ್ರೀಯ ಬಸವ ದಳದಿಂದ ಶರಣರುಗಳಾದ ಶಿವಕುಮಾರ ಡಾಕುಳಗೆ, ಶ್ರೀಕಂಠ ಕುಮಾರ್, ಮೃತ್ಯುಂಜಯಪ್ಪ, ನಾಗರಾಜಪ್ಪ, ವೀರಪ್ಪ - ಹೀಗೆ 5 ಜನರನ್ನು ಒಳಗೊಂಡ ತಂಡವು ದಿ. 21 ರಂದು ಎಸ್.ಟಿ.ಎಫ್. ಮುಖ್ಯಸ್ಥರ ಅನುಮತಿ ಪಡೆದು ಅರಣ್ಯವನ್ನು ಪ್ರವೇಶಿಸಿದೆ. ಹೀಗೆ ಹೋಗುವಾಗ ಗ್ರಾಮಸ್ಥರ ನೆರವು ಕೋರಿ ಒಂದು ಕರಪತ್ರವನ್ನು ಮುದ್ರಿಸಿ ಹಂಚಿದೆ.)

ಶ್ರೀ ನಾಗಪ್ಪನವರ ಬಿಡುಗಡೆ ವಿಷಯದಲ್ಲಿ ರಾಷ್ಟ್ರೀಯ ಬಸವ ದಳದ ಕಾರ್ಯಕರ್ತರೊಡನೆ ಸಹಕರಿಸಲು ಗ್ರಾಮಸ್ಥರಲ್ಲಿ ಮನವಿ.

ಗುಂಡಾಲ ಜಲಾಶಯದ / ಅರಣ್ಯದ ಸುತ್ತಲಿರುವ ಗ್ರಾಮಗಳ ಜನರೇ, ನಿಮಗೆಲ್ಲ ಶುಭಹರಕೆಗಳು. ನೀವು ಶ್ರೀ ವೀರಪ್ಪನ್ ಅಡಗಿಕೊಂಡಿರುವ ತಾಣದ ಸಮೀಪ ಇರುವ ಗ್ರಾಮಗಳ ಜನರು. ನಾಗರಿಕ ಜೀವನ ಮಾಡುವ ನಗರ ವಾಸಿಗಳು, ಪತ್ರಿಕೆ ಮುಂತಾದ ಮಾಧ್ಯಮಗಳವರು, ಪೋಲೀಸ್ ಇಲಾಖೆ, ಸರ್ಕಾರಿ ವ್ಯವಸ್ಥೆಯು ಈವರೆಗೂ ವೀರಪ್ಪನ್ ಮಾಡಿರುವ ಕೃತ್ಯಗಳಿಂದ ಆತನೊಂದು ಭಯಂಕರ ಅಪರಾಧಿ ಎಂದೇ ಪ್ರತಿಬಿಂಬಿಸಿದ್ದಾರೆ. ಆದರೂ ನಿಮ್ಮ ಗ್ರಾಮಗಳ ಜನರಿಗೆ ವೀರಪ್ಪನ್ ಬಗ್ಗೆ ಅಭಿಮಾನ-ಗೌರವಗಳಿದ್ದು ಅವರ ಬಗ್ಗೆ ವಿವರ ತಿಳಿದಿದ್ದರೂ ಗ್ರಾಮಸ್ಥರು ಪೋಲೀಸರಿಗೆ ಗುಟ್ಟು ಬಿಟ್ಟು ಕೊಡುವುದಿಲ್ಲ ಎಂಬುದಾಗಿ ತಿಳಿದು ಬಂದಿದೆ. ಇದಕ್ಕೆ ಮೂರು ಕಾರಣಗಳಿರಬಹುದು. ಒಂದು ವೇಳೆ ಗುಟ್ಟು ಬಿಟ್ಟು ಕೊಟ್ಟರೆ ನಂತರ ವೀರಪ್ಪನ್ ರಹಸ್ಯ ಮಾಹಿತಿ ನೀಡಿದವರಿಗೆ ತೊಂದರೆ ಕೊಡಬಹುದೆಂಬ ಭಯ ಅಥವಾ ವೀರಪ್ಪನ್‌ನ ಮಾನವೀಯ ಗುಣಗಳ ಬಗ್ಗೆ, ಆತ ಬಡಬಗ್ಗರಿಗೆ ಮಾಡುವ ಧನಸಹಾಯ, ದಾನ ಮುಂತಾದವುಳ ಬಗ್ಗೆ ಅಭಿಮಾನವು ಇರಬಹುದು. ಮಾತ್ರವಲ್ಲ ಪೋಲೀಸರು ನಕ ನಿರಂತರ ಕಿರುಕುಳ ನೀಡಬಹುದೆಂಬ ಭಯ.

ಶ್ರೀ ನಾಗಪ್ಪನವರು ಉತ್ತಮ ವ್ಯಕ್ತಿ, ಜನಪ್ರಿಯ ನೇತಾರರು ; ಅವರ ಅಪಹರಣ ಕುಟುಂಬದವರಿಗೆ ಮಾತ್ರವಲ್ಲ ಇಡೀ ರಾಜ್ಯದ ಜನತೆಗೆ ಆತಂಕ ಉಂಟುಮಾಡಿದೆ. ಅವರು ಮಧುಮೇಹ, ರಕ್ತದೊತ್ತಡ, ಮಂಡಿನೋವಿನಿಂದ ಬಳಲುತ್ತಿದ್ದಾರೆ. ಆದ್ದರಿಂದ ಅವರ ಬಿಡುಗಡೆ ಅತ್ಯಂತ ಅವಶ್ಯಕ. ನಾಗಪ್ಪನವರು ವೀರಪ್ಪನ್ ಸಹಚರರೊಡನೆ ಕಾಡಿನಲ್ಲಿ ಇರುವ ಸ್ಥಳದ ಮಾಹಿತಿಯನ್ನು ನಿಮಗೆ ಗೊತ್ತಿದ್ದರೆ ತಾವು ದಯವಿಟ್ಟು ಕೊಡಿರಿ.

ರಾಷ್ಟ್ರೀಯ ಬಸವದಳ ಒಂದು ಧಾರ್ಮಿಕ ಸಂಸ್ಥೆ. ಇದರ ಉದ್ದೇಶ ಜನಪ್ರ ಪರಿವರ್ತನೆ. "ದುಷ್ಟರನ್ನು ನಾಶ ಮಾಡುವುದು, ಶಿಕ್ಷಿಸುವುದು ಧರ್ಮದ ಕೆಲಸವಲ್ಲ. ಅವರನ್ನು ಪರಿವರ್ತಿಸುವುದು ಧರ್ಮದ ಧ್ಯೇಯ " ಎಂಬ ಸಿದ್ಧಾಂತ ನಮ್ಮದು. ವೀರಪ್ಪನ್ ಕಾನೂನು ದೃಷ್ಟಿಯಲ್ಲಿ ತಪ್ಪಿತಸ್ಥರಿರಬಹುದು. ಆದರೆ ಪ್ರತಿಯೊಬ್ಬನೂ ಒಂದು ವಿಶಿಷ್ಟ ವ್ಯಕ್ತಿತ್ವ ಬೆಳೆಸಿಕೊಳ್ಳಲು ಕಾರಣವಾದ ಪರಿಸರ. ಒತ್ತಡಗಳನ್ನು ಊಹಿಸಿ, ಅಂಥವರನ್ನು ಸರಿದಾರಿಗೆ ತರಲು, ತಮ್ಮ ಜೀವನವನ್ನು ಸುಧಾರಿಸಿಕೊಳ್ಳಲು ನಾವು ಉತ್ತಮ ಅವಕಾಶ ಕಲ್ಪಿಸಬೇಕು. ನಮ್ಮ ಅಪೇಕ್ಷೆ ವೀರಪ್ಪನ್ ವಶದಲ್ಲಿರುವ ಮಾಜಿ ಸಚಿವ ಶ್ರೀ ನಾಗಪ್ಪನವರನ್ನು ಸುರಕ್ಷಿತವಾಗಿ ಬಿಡಿಸಿಕೊಂಡು ಬರುವುದಷ್ಟೇ ಅಲ್ಲ, ಶ್ರೀ ವೀರಪ್ಪನ್ ಅವರಿಗೆ ಹಿತೋಪದೇಶ ಮಾಡಿ ಒಬ್ಬ ಗೌರವಾನ್ವಿತ ನಾಗರಿಕನನ್ನಾಗಿ ಮಾಡುವುದು. ನಮ್ಮ ಪ್ರತಿನಿಧಿಗಳಾಗಿ ಬಂದಿರುವ ಶರಣರನ್ನು ನಂಬಿರಿ. ನಮ್ಮ ಮೇಲೆ ವಿಶ್ವಾಸವಿಟ್ಟು ಶ್ರೀ ವೀರಪ್ಪನ್ ಇರುವ ಜಾಗದ ವಿವರ ತಿಳಿಸಿರಿ. ಮೊದಲು ನಮ್ಮ ಪ್ರತಿನಿಧಿಗಳನ್ನು ವೀರಪ್ಪನ್ ಭೇಟಿ ಮಾಡಿದ ಮೇಲೆ, ನಾನೂ ಆತನನ್ನು ಕಂಡು ಹಿತೋಪದೇಶ ಮಾಡುತ್ತೇನೆ. ನಿಮಗೆ ಪರಿಚಯವಿದ್ದರೆ ಅವರ ಮನವೊಲಿಸಿ ನಮ್ಮ ಜನರನ್ನು ಭೇಟಿ ಮಾಡಿಸಿರಿ. ಓರ್ವ ತಾಯಿ ತನ್ನ ಮಕ್ಕಳ ಬಗ್ಗೆ ಯಾವ ಕಳಕಳಿ ಹೊಂದಿರುವಳೋ ಆ ಕಳಕಳಿ ವೀರಪ್ಪನ್ ಬಗ್ಗೆ ನಮಗಿದೆ. ಅವರು ಉದಾತ್ತ ಜೀವನಕ್ಕೆ ಬಂದು, ನಾಗರಿಕ ಜೀವನ ಪ್ರವಾಹದಲ್ಲಿ ಬೆರೆತು ಮುಂದಾದರೂ ನೆಮ್ಮದಿಯಾಗಿರಲಿ ಎಂಬುದೇ ನಮ್ಮ ಉದ್ದೇಶ. ಈ ಉದಾತ್ತ ಕಾರ್ಯದಲ್ಲಿ ನಿಮ್ಮ ಸಹಕಾರ ನಮಗೆ ಬೇಕು.

ಶುಭಾಶೀರ್ವಾದಗಳೊಡನೆ,



ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಪೀಠಾಧ್ಯಕ್ಷರು, ಬಸವ ಧರ್ಮ ಪೀಠ

ಕಾರ್ಯಾಧ್ಯಕ್ಷರು. ರಾಷ್ಟ್ರೀಯ ಬಸವ ದಳ

ಕೂಡಲ ಸಂಗಮ 587115

ತಾ-ಹುನಗುಂದ, ಜಿ-ಬಾಗಲಕೋಟೆ, ಕರ್ನಾಟಕ ರಾಜ್ಯ.

ಈ ಜಗತ್ತಿನಲ್ಲಿ ಯಾರೂ ಹುಟ್ಟುತ್ತಲೇ ಪಾಪಿಗಳಲ್ಲ, ಅಪರಾಧಿಗಳಲ್ಲ
ಪ್ರತಿಯೊಬ್ಬ ಪಾಪಿಗೂ ಮನಸು ಮಾಡಿದರೆ ಉತ್ತಮ ಭವಿಷ್ಯವಿದೆ.

ಆಗಸ್ಟ್-ಸೆಪ್ಟಂಬರ್ ತಿಂಗಳಲ್ಲಿ
ಬಸವ ಕಲ್ಯಾಣದ ಕಟ್ಟಡ ನಿಧಿಗೆ ಸಲ್ಲಿಸಿದ ದಾಸೋಹಿಗಳು

ಶರಣ.ಮದ್ದಾನಪ್ಪ ಈಶ್ವರಪ್ಪ ನಾಗಲೀಕರ್, ಹಟ್ಟಿಚಿನ್ನದ ಗಣಿ (ಡಬ್ಬಲ್ ರೂಂಗಾಗಿ) 81000-00

63 ಅಡಿ ಎತ್ತರದ ಬಸವ ಪುತ್ಥಳಿಗಾಗಿ

ಶರಣರುಗಳಾದ :

ಸುಮಂಗಲಾ ಮತ್ತು ಮಲ್ಲರೆಡ್ಡೆಪ್ಪ ಪಾಟೀಲ್, ಹಟ್ಟಿ ಚಿನ್ನದ ಗಣಿ	10111-00
ಮುಕ್ತಾಯಕ್ಕ ಮತ್ತು ಪರತಗೌಡ ಪಾಟೀಲ್, ಹಟ್ಟಿ ಚಿನ್ನದ ಗಣಿ	10001-00
ಡಾ|| ಎಸ್.ವಿ.ಸಂಗನಾಳ, ಹಟ್ಟಿ ಚಿನ್ನದ ಗಣಿ	11000-00
ಲಕ್ಷ್ಮಮ್ಮ, ಬೆಂಗಳೂರು-86 .	5001-00
ಎಂ.ವೀರನಗೌಡ, ಹಟ್ಟಿ ಚಿನ್ನದ ಗಣಿ	5001-00
ಸಿದ್ಧರಾಮ ಬಸವಣ್ಣೆಪ್ಪ ಜತ್ತಿ, ಬಿಜಾಪುರ	5001-00
ಕೆ.ಸಚ್ಚಿದಾನಂದ, ಬೆಂಗಳೂರು	1001-00
ಎ.ಲಕ್ಷ್ಮಣರೆಡ್ಡಿ, ಬೆಂಗಳೂರು	1001-00
ರೇಖಾ.ಎಂ.ಬಿರಾದಾರ್, ಬಿಜಾಪುರ	1001-00
ವನಜಾ ಮೃತ್ಯುಂಜಯ, ಬೆಂಗಳೂರು	1001-00

ಪುಸ್ತಕ ಮುದ್ರಣಕ್ಕಾಗಿ ದಾಸೋಹ (ವಿಶ್ವ ಕಲ್ಯಾಣ ಮಿಷನ್‌ಗೆ)

1.ಶರಣೆ.ಶಾಂತಾದೇವಿ ಮತ್ತು ಶರಣ ಶಿವಪ್ಪ ಮುಳವಾಡ, ಹಟ್ಟಿ ಚಿನ್ನದ ಗಣಿ	10001-00
2.ಶರಣೆ ಶಕುಂತಲಾ ಮತ್ತು ವಿಶ್ವನಾಥ ಮಹಾರುದ್ರಪ್ಪ ಬಿರಾದಾರ್,ಬೀದರ್	11001-00
3.ಪುಷ್ಪಾ ರಾಜಶೇಖರ್, ಬೆಂಗಳೂರು	5000-00

ಬಸವ ಕಲ್ಯಾಣದ ನಿತ್ಯ ದಾಸೋಹ ನಿಧಿಗೆ 1200 ರೂ ಸಲ್ಲಿಸಿದವರು

ಶರಣರುಗಳಾದ :

ಸರೋಜಾ.ಕೆ.ಸಂಗಮೇಶ್, ಹೈದರಾಬಾದ್
ಶಾಂತಾದೇವಿ ಶಿವಪ್ಪ ಮುಳವಾಡ, ಹಟ್ಟಿ ಚಿನ್ನದ ಗಣಿ.
ಎಂ.ಎಚ್.ಪಾಟೀಲ್, ಹಟ್ಟಿ ಚಿನ್ನದ ಗಣಿ
ಬಸಣ್ಣ ಕವಟಗಿ, ಹಟ್ಟಿ ಚಿನ್ನದ ಗಣಿ
ಟಿ.ವೀರಣ್ಣ, ಹಟ್ಟಿ ಚಿನ್ನದ ಗಣಿ
ಮುರುಗೇಂದ್ರಪ್ಪ ಗೋರಬಾಳ, ಹಟ್ಟಿ ಚಿನ್ನದ ಗಣಿ
ಬಸವಲಿಂಗಪ್ಪ ಬುದಿನ್ನಿ, ಹಟ್ಟಿ ಚಿನ್ನದ ಗಣಿ
ವೈ. ಮಹೇಶ್‌ಕುಮಾರ್, ಪ್ರೇಮಾವತಿ ಪೇಟೆ, ಆಂಧ್ರ
ಶಹಾದಿಯಾ ಬಿನ್ನಿ ರೈಸ್‌ಮಿಲ್,ತೇಕಮೋಳ್, ಆಂಧ್ರ
ಶ್ರೀ ರಾಮ ಮಲ್ಲೇಶ್, ತೇಕಮೋಳ್, ಆಂಧ್ರ
ಆರ್.ರತ್ನಾ ಪ್ರಕಾಶ್, ಬೆಂಗಳೂರು.
ಮಹಾದೇವಿ ಶಿವಾನಂದ ಉಮದಿ
ವೇದಾ ಮಹೇಂದ್ರ, ಬೆಂಗಳೂರು
ಕೆ.ಎಸ್.ರಾಜಮ್ಮ , ಬೆಂಗಳೂರು
ಶಿವನಗೌಡ [illegible]
ಟಿ.ಎಸ್.ಗೌರಮ್ಮ ಮೃತ್ಯುಂಜಯ, ಬೆಂಗಳೂರು
ಸಿ.ಸಂಪತ್‌ಕುಮಾರ್, ಬೆಂಗಳೂರು
ಪುಷ್ಪಾ ರಾಜಶೇಖರ್, ಬೆಂಗಳೂರು
ರೇಣುಕಾ ಶಿವಕುಮಾರ್, ಬೆಂಗಳೂರು
ಸಾವಿತ್ರಮ್ಮ ಹನುಮಂತಯ್ಯ , ಬೆಂಗಳೂರು
ಮಧುಮತಿ ರೇಣುಕಾಂಬಾ , ಬೆಂಗಳೂರು
ಎಂ.ಸಿ.ಆರ್.ಶೆಟ್ಟಿ, ಬೆಂಗಳೂರು
ಶಾರದಾ ಹೆಚ್.ಎಂ.ಲಕ್ಷ್ಮಣ್, ಬೆಂಗಳೂರು
ವೈ.ಕೆ.ಚಿಕ್ಕಹೊನ್ನಯ್ಯ, ಬೆಂಗಳೂರು
ಸ್ವರ್ಣ ರಾಜಣ್ಣ, ಬೆಂಗಳೂರು
ಎಸ್.ಸಿದ್ದರಾಮಯ್ಯ, ಬೆಂಗಳೂರು
ಎಂ.ಆರ್.ಸಂತೋಷ್ ಬಸವರಾಜು, ಬೆಂಗಳೂರು
ಕೆ.ಎಸ್.ನಾಗಲಾಂಬಿಕಾ, ಬೆಂಗಳೂರು
ವಿಶ್ವನಾಥ್ ಅಣ್ಣಪ್ಪ ಕೊಕಟನೂರ್, ಬಿಜಾಪುರ
ಸರೋಜಿನಿ ಈರಪ್ಪ ಬೂಸನೂರು

ಶಿವಣ್ಣ ಭೂಮಾ, ಸಿರಸಿ (ದಾಸೋಹ ನಿಧಿಗೆ) 5001-00

ಕೂಡಲ ಸಂಗಮದ ಬಸವ ಧರ್ಮ ಪೀಠದ ಮಹಾಮನೆಯಲ್ಲಿ ನಡೆಯುವ ನಿತ್ಯದಾಸೋಹ ನಿಧಿಗೆ 1111 ರೂ ಸಲ್ಲಿಸಿದವರು

ಶರಣರುಗಳಾದ :

ಎಂ. ಶಿವರಾಜ್, ಕುಸನೂರು, ಆಂಧ್ರ
ಚಲ್ಲ ವೀರಸಂಗಪ್ಪ, ತೇಕಮೋಲ್, ಆಂಧ್ರ
ನರಸಿಂಹರೆಡ್ಡಿ ಧನೂರ, ಆಂಧ್ರ
ಶಶಿಕಲಾ ಗುರುಚನ್ನಬಸಯ್ಯ, ಬೆಂಗಳೂರು
ವೆಂಕಟಲಕ್ಷ್ಮಮ್ಮ, ಬೆಂಗಳೂರು
ಶಿವಮ್ಮ ಭೈರೇಗೌಡರು, ಬೆಂಗಳೂರು
ಆರ್. ವೀರಪ್ಪ, ಬೆಂಗಳೂರು
ಎ. ರಾಮಲಕ್ಷ್ಮಿ ಆರ್.ಎನ್. ರಾಮಸುಂದರಮ್
ಜಯಲಕ್ಷ್ಮಿ.ಸಿ.ಶಂಕರಪ್ಪ, ಬೆಂಗಳೂರು
ಸುಜಾತ.ಜಿ.ರೇಣುಕಾರಾಧ್ಯ, ಬೆಂಗಳೂರು
ಎಂ.ಬಿ. ಪ್ರಸಾದ್, ಬೆಂಗಳೂರು
ಟಿ.ಎಂ. ಪ್ರಶಾಂತ್, ಬೆಂಗಳೂರು
ಬಸಪ್ಪ ರಾಮಪ್ಪ ಆಸಂಗಿ, ಕಲಗುರ್ಕಿ
ಈರಪ್ಪ ಯಮನಪ್ಪ ಶಿರೂರು,
ರಂಗಪ್ಪ ಸಿದ್ಧಪ್ಪ ಬೂಸರೆಡ್ಡಿ,
ಅಪ್ಪಾಸಿ ಹನುಮಂತಪ್ಪ ಜರಾಳೆ,
ವಿಶ್ವಪ್ಪ ಪರ್ವತಪ್ಪ ಮರಾಠಿ,
ಗೋವಿಂದಪ್ಪ ಭೀಮಪ್ಪ ದಾಸ್ಯಾಳ
ಶಿವಪ್ಪ ದುಂಡಪ್ಪ ಮಂಜರಗಿ
ಬಸಗೊಂಡಪ್ಪ ಭೀಮರಾಯ ದೇವರಮನಿ
ವಿವೇಕಾನಂದ್ ಯಮನಪ್ಪ ಶಿರೂರು
ಲಿಂಗನಗೌಡ ಬಾಳನಗೌಡ ಪಾಟೀಲ್
ಟಿ. ಅಭಿಷೇಕ್ ಶಿವ ಪ್ರಕಾಶ್, ಶಿವಮೊಗ್ಗ
ಚನ್ನಬಸವದೇವರು -
ಶರಣ. ಭಸ್ಮಾಂಗದೇವರ ಜನ್ಮದಿನದ ನಿಮಿತ್ತ
ಶರಣೆ. ಸುಶೀಲಾದೇವಿ ಜನ್ಮದಿನದ ನಿಮಿತ್ತ
ಕುಮಾರಿ. ಬಿ.ಸಿ. ತೇಜಸ್ವಿ ಜನ್ಮದಿಂದ ನಿಮಿತ್ತ

ಬೆಂಗಳೂರು ಬಸವ ಮಂಟಪದಲ್ಲಿ ಪ್ರತಿ ವಾರವೂ ದೇವ(ಭಾನು)ವಾರ ನಡೆಯುವ ದಾಸೋಹಕ್ಕೆ 2000 ರೂ. ಸಲ್ಲಿಸಿದವರು.

1. 1-9-2002 ಶರಣೆ. ಜಯಮ್ಮ ಗುರುಸಿದ್ಧಪ್ಪ, ಬೆಂಗಳೂರು
2. 8-9-2002 ಶರಣ. ಎ.ಬಿ. ಸಂತೋಷ ಮತ್ತು ಶರಣ. ಪ್ರಭಾಕರ್, ಬೆಂಗಳೂರು
3. 10-9-2002 ಶರಣೆ. ಲೀಲಾ ವಿಜಯಕುಮಾರ್, ಬೆಂಗಳೂರು
4. 15-9-2002 ಶರಣೆ. ಪಾರ್ವತಮ್ಮ ಪಟ್ಟಣಶೆಟ್ಟಿ, ಬೆಂಗಳೂರು
5. 22-9-2002 ಶರಣೆ. ನಾಗಮಣಿ ಕರ್ಪೂರ್, ಬೀದರ್

ಬಸವ ತತ್ತ್ವ ತರಬೇತಿ ಕಮ್ಮಟಕ್ಕೆ ದೇಣಿಗೆ

1. ಶರಣೆ. ಶರಣಮ್ಮ ಮತ್ತು ಶರಣ. ಸಿದ್ದರಾಮ ಗೋಂದಳಿ, ಬಿಜಾಪುರ 1500-00
2. ಶರಣ. ದಾನಪ್ಪ ಸಂಗಪ್ಪ ಹಳ್ಳಿ, ಬಿಜಾಪುರ 501-00
3. ಶರಣ. ಚನ್ನಬಸವ ದೇವರು, ಬೆಂಗಳೂರು 501-00


ಈ ಎಲ್ಲ ಶರಣ ಬಂಧುಗಳಿಗೆ ಸೃಷ್ಟಿಕರ್ತ ಲಿಂಗದೇವ, ಧರ್ಮಕರ್ತ ಬಸವಣ್ಣನವರು ಆಯುರಾರೋಗ್ಯಭಾಗ್ಯ ಸಕಲ ಸಂಪದವನ್ನು ಅನುಗ್ರಹಿಸಲೆಂದು ಹಾರೈಸುತ್ತೇವೆ.

- ಮಾತಾಜಿ



ಕರ್ನಾಟಕ ಸರ್ಕಾರವು ವೀರಪ್ಪನಿಂದ ಅಪಹರಣಗೊಂಡಿರುವ ಹೆಚ್. ನಾಗಪ್ಪನವರನ್ನೂ ಬೇಗನೆ ಬಿಡುಗಡೆ ಮಾಡಿಸಬೇಕೆಂದು ಆಗ್ರಹಿಸಲು ಉಪವಾಸ ಸತ್ಯಾಗ್ರಹ ಮಾಡುತ್ತಿರುವ ವಿವಿಧ ಗ್ರಾಮಗಳವರನ್ನೂ ಬೆಂಬಲಿಸಿ ಪೂಜ್ಯ ಮಾತಾಜಿ ಧರಣಿ ಸತ್ಯಾಗ್ರಹದಲ್ಲಿ ಪಾಲ್ಗೊಂಡು, ಭಾಷಣ ಮಾಡುತ್ತಿರುವುದು. ಬೆಂಗಳೂರು ರಾಷ್ಟ್ರೀಯ ಬಸವ ದಳದ ಪ್ರಧಾನ ಕಾರ್ಯದರ್ಶಿ ದೇವಿಕಾ ಶರಣಪ್ಪ ಮತ್ತು ಖಜಾಂಚಿ ಪಾರ್ವತಿ, ಡಾ॥ ಶಿರೋಳ್ ಅವರು ಧರಣಿಯಲ್ಲಿ ಪಾಲ್ಗೊಂಡಿದ್ದಾರೆ.

ಕಲ್ಯಾಣ ಕಿರಣ CPMG/KA/BGW-50 ಅಕ್ಟೋಬರ್ - 2002
R.NO. 19988/70 WPP (W) - 17



ದಿ. 10-9-2002 ರಂದು ತುಮಕೂರು ಜಿಲ್ಲೆಯ ತುರುವೇಕೆರೆಯಲ್ಲಿ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದಸ್ವಾಮಿಗಳ ಜಯಂತಿ ಉತ್ಸವದ ಉದ್ಘಾಟನೆ. ಎಡದಿಂದ ಬಲಕ್ಕೆ - ಬದರಿಕಾಶ್ರಮದ ಪೂಜ್ಯ ಮಾತಾ ಮಂಗಳಾನಂದ, ಪೂಜ್ಯ ಗಂಗಾ ಮಾತಾಜಿ, ಪಿ.ಜಿ. ರಂಗಸ್ವಾಮಿ, ಶಾಂತರಾಜು, ಎಸ್.ಎಂ. ಮಲ್ಲಿಕಾರ್ಜುನಯ್ಯ, ವಿಶ್ವೇಶ್ವರಯ್ಯ ಮುಂತಾದವರು